5) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :ಇಟ್ಟಿಗೆ ಮತ್ತು ಕೋಳಿ ಫಾರಂನವರಿಗೆ ಸಬ್ಸಿಡಿ ನೀಡದೇ ಇರುವ ಬಗ್ಗೆ

ಮಾನ್ಯ ಶ್ರೀನಿವಾಸಗೌಡರೆ, ಅದೇನು ಹೇಳುತ್ತೀರೋ ಬೇಗ ಹೇಳಿ.

† ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ಅಧ್ಯಕ್ಷರೆ, ಸಬ್ಸಿಡಿ ವಿಷಯದಲ್ಲಿ ಎಲ್ಲ ಜಿಲ್ಲೆಗಳಿಗೂ ಒಂದು ಸರ್ಕ್ಯುಲರ್ ಕೊಟ್ಟಿದ್ದೀರಿ. ಇಟ್ಟಿಗೆ ಮಾಡುವವರಿಗೆ ಮತ್ತು ಕೋಳಿ ಫಾರಂನವರಿಗೆ ಸಬ್ಸಿಡಿ ಕೊಡಬೇಡಿ ಎಂದು ಹೇಳಿದ್ದೀರಿ, ನೀವು ಒಂದೊಂದು ಜಿಲ್ಲೆಗೆ 40 ಕೋಟಿ ರೂ 50 ಕೋಟಿ ರೂ ಕೊಡಬೇಕು. ಅದರಲ್ಲಿ ಎರಡು ಕೋಟಿ, ಮೂರು ಕೋಟಿ ಇದು ಬರೀ ರೈತರ ಹಿನ್ನೆಲೆ ಇರತಕ್ಕಂಥದ್ದು. ಯಾರೋ ಒಬ್ಬ ಪಾಪದವನು ಕೋಳಿ ಫಾರಂ ಮಾಡಿರುತ್ತಾನೆ. ಒಬ್ಬ ಸಣ್ಣದಾಗಿ ಒಂದು ಇಟ್ಟಿಗೆ ಫ್ಯಾಕ್ಟರಿ ಹಾಕಿಕೊಂಡಿರುತ್ತಾನೆ. ಅವರಿಗೆ ಸಬ್ಸಿಡಿ ಕೊಡಬಾರದು ಎಂದು ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ಗೆ ಒಂದು ಸರ್ಕ್ಯುಲರ್ ಹೋಗಿದೆ, ಅವರಿಗೆ ಸಬ್ಸಿಡಿ ಕೊಡುವುದಾದರೆ ಇವರಿಗೂ ಸಬ್ಸಿಡಿ ಕೊಡಬೇಕು. ಅವರಿಗೊಂದು ಇವರಿಗೊಂದು ಮಾಡಬಾರದು. ಎಲ್ಲರೂ ರೈತರ ಮಕ್ಕಳೇ ಜಾಸ್ತಿ ಇರುವುದು. ದಯವಿಟ್ಟು ಅದನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ.

6) ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ
(ಮುಂದುವರಿದುದು)

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತಾ, ಈ ರಾಜ್ಯಪಾಲರ ಭಾಷಣದಲ್ಲಿ ಇರುವಂತಹ ನ್ಯೂನತೆ, ಅದರ ಜೊತೆಗೆ ಈ ರಾಜ್ಯಪಾಲರ ಭಾಷಣದಲ್ಲಿ ಏನೆಲ್ಲಾ ಅಭಿವೃದ್ಧಿ ಕಾರ್ಯ ಮಾಡುತ್ತೇವೆಂದು ಹೇಳಿ, ಬಜೆಟ್ ಭಾಷಣಕ್ಕೂ, ರಾಜ್ಯಪಾಲರ ಭಾಷಣಕ್ಕೂ ಇರುವ ವ್ಯತ್ಯಾಸವನ್ನು ನಾನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. 2003–04ರಲ್ಲಿ ಬಜೆಟ್ ಭಾಷಣ ಆಯಿತು. ಆ ಭಾಷಣದ ಸಂದರ್ಭದಲ್ಲಿ ನಾನು ಕೂಡ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಲವಾರು ವಿಚಾರಗಳನ್ನು ಹೇಳಿದ್ದೆ. ಅದರ ಜೊತೆ ಜೊತೆಗೆ ಅರಣ್ಯ ಇಲಾಖೆಯಲ್ಲಿ ಕಾಡು ಪ್ರಾಣಿಗಳಿಂದ ತೊಂದರೆ ಅನುಭವಿಸುವ ವಿಚಾರವನ್ನು ಕೂಡ ಈ ಸದನದ ಮುಂದೆ ಇಟ್ಟೆ. ಸನ್ಮಾನ್ಯ ಮಂತ್ರಿಗಳು ಕೂಡ ಮಡಿಕೇರಿಗೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಕಾಡಾನೆ ಹಾವಳಿಯನ್ನು ತಡೆಗಟ್ಟಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ ಮರದ ಮಾಲೀಕತ್ವ ಭೂ ಮಾಲೀಕರಿಗೆ ಕೊಡುತ್ತೇವೆಂದು ಹೇಳಿ, ಟೊಳ್ಳು ಆಶ್ವಾಸನೆಯನ್ನು ಕೊಟ್ಟು ಬಂದಿದ್ದಾರೆ. ಅಲ್ಲಿ ಆಶ್ವಾಸನೆ ಕೊಟ್ಟರು, ಇಲ್ಲಿ ನಾನು ವಿಧಾನಸಭೆಯಲ್ಲಿ ಪ್ರಶ್ನೆ ಕೇಳಿದೆ, ನೀವು ಮಡಿಕೇರಿಗೆ ಬಂದಂತಹ ಸಂದರ್ಭದಲ್ಲಿ ಮರದ ಮಾಲೀಕತ್ವವನ್ನು ಜಾಗದ ಮಾಲೀಕರಿಗೆ ಕೊಡುತ್ತೇವೆಂದು ಹೇಳಿದ್ದೀರಿ, ಇಲ್ಲಿ ಬಂದಂತಹ ಸಂದರ್ಭದಲ್ಲಿ, ಇಲ್ಲಿ ಉತ್ತರ ಕೊಡುವ ಸಂದರ್ಭದಲ್ಲಿ ಅವರು ಕೊಟ್ಟಂತಹ ಉತ್ತರ ಏನೆಂದರೆ, ನಿಮ್ಮ ಕೊಡಗಿನಲ್ಲಿರುವಂತಹ ಅನ್‌ರೆಡೀಮ್ಡ್ ಲ್ಯಾಂಡ್‌ನಲ್ಲಿರುವ ಮರವನ್ನು ಅಲ್ಲಿಯ ಮರ ಮಾಲೀಕತ್ವದವರಿಗೆ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಅದು ಫಾರೆಸ್ಟ್‌ಗೆ ಸಂಬಂಧಪಟ್ಟ ವಿಚಾರ ಎಂದು ಹೇಳಿದ್ದಾರೆ. ವಿಧಾನಸಭೆಯಲ್ಲಿ ಒಂದು ಉತ್ತರ ಕೊಡುತ್ತಾರೆ. ಹೊರಗಡೆ ಹೋದಾಗ ಒಂದು ಉತ್ತರ ಕೊಡುತ್ತಾರೆ. ಯಾವ ಉತ್ತರವನ್ನು ನಾವು ನಂಬಬೇಕಾಗುತ್ತದೆ ಎಂದು ನನಗೆ ಸಂಶಯ

ಬರುತ್ತದೆ. ಇದು ಒಂದು ವಿಚಾರ ಆದರೆ, ಅದರ ಜೊತೆಗೆ ಕಾಡಾನೆ ಹಾವಳಿಯನ್ನು ತಡೆಗಟ್ಟಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ. ಇಲ್ಲಿಗೆ ನಾನು ಬಂದಂತಹ ಸಂದರ್ಭದಲ್ಲಿ ಎಲ್ಲಾ ವಿಚಾರಗಳು ನನಗೆ ಅರ್ಥವಾಗಿವೆ ಎಂದು ಮಾನ್ಯ ಮಂತ್ರಿಗಳು ಬಂದಾಗ ಹೇಳಿದ್ದರು. ಆದರೆ ನಾನು ಪ್ರಶ್ನೆ ಕೇಳಿದ ಸಂದರ್ಭದಲ್ಲಿ ಕಾಡಾನೆ ಹಾವಳಿಯಿಂದ ಎಷ್ಟು ಜನ ಸತ್ತಿದ್ದಾರೆ. ಎಷ್ಟು ಪರಿಹಾರ ಕೊಟ್ಟಿದ್ದೀರಿ ಎಂದು ಕೇಳಿದಾಗ ಅವರು ಕೊಟ್ಟಂತಹ ಉತ್ತರ, ಸುಮಾರು 2000–01ರಲ್ಲಿ ಒಂಬತ್ತು ಜನ ಸತ್ತಿದ್ದಾರೆ. ಒಂಬತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. 2002–03ರಲ್ಲಿ ಆರು ಜನ ಸತ್ತಿದ್ದಾರೆ. ಆರು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದರ ನಂತರ 2003–04ರಲ್ಲಿ 10 ಜನ ಸತ್ತಿದ್ದಾರೆ, ಒಂಬತ್ತು ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದೇವೆನ್ನುವ ಮಾತನ್ನು ಹೇಳಿದರು. ಕಾಡಾನೆ ಹಾವಳಿಯನ್ನು ತಡೆಗಟ್ಟಲಿಕ್ಕೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದೆ, ಅಲ್ಲಿ ಸೌರ ಶಕ್ತಿಯ ತಂತಿಯನ್ನು ಅಳವಡಿಸಿದ್ದೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಎಷ್ಟು ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ ಎಂದರೆ, ಸುಮಾರು 80 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಅದರ ಜೊತೆ ಜೊತೆಗೆ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಶ್ರೀಗಂಧದ ಮರವನ್ನು ನೆಟ್ಟು ಬೆಳೆಸುತ್ತೇವೆ ಎನ್ನುವ ವಿಚಾರವನ್ನೂ ಕೂಡ ಹೇಳಿದ್ದಾರೆ. ಇರುವಂತಹ ಶ್ರೀಗಂಧ ಮರಕ್ಕೆ ರಕ್ಷಣೆ ಕೊಡುವುದಕ್ಕೆ ಅವರಿಗೆ ಸಾಧ್ಯವಾಗುವುದಿಲ್ಲ. ಅದರ ಜೊತೆಗೆ ಫಾರೆಸ್ಟ್‌ನಲ್ಲಿ ಕಾಡಾನೆ ಹಾವಳಿ ತಡೆಗಟ್ಟಲಿಕ್ಕೆ ಸುಮಾರು 80 ಲಕ್ಷ ರೂಪಾಯಿ ಬಿಡುಗಡೆ ಆಗಿ ಅಲ್ಲಿ ಸೌರ ಶಕ್ತಿ ತಂತಿಯ್ನನು ಅಳವಡಿಸಿದ್ದಾರೆ. ಆದರೆ ಇವತ್ತಿಗೂ ಕೂಡ ಆ ಸೌರ ಶಕ್ತಿ ತಂತಿಗಳು ಉದ್ಘಾಟನೆ ಮಾಡಿ ಒಂದು ವಾರ ಕಳೆದರೂ ಕೂಡ ಆ ಆನೆಗಳನ್ನು ತಡೆಗಟ್ಟುವ ಸ್ಥಿತಿಯಲ್ಲಿಲ್ಲ. ಆ ಸೌರ ಶಕ್ತಿ ಬಿದ್ದು ನಾರುತ್ತಿದೆ. ಈ ಪರಿಸ್ಥಿತಿ ಇದೆ. ನಾನು ಒಂದು ಸಲಹೆ ಕೂಡ ಕೊಟ್ಟಿದ್ದೆ, ಅಲ್ಲಿಯ ಯಾರಾದರೊಬ್ಬರು ಲೋಕಲ್‌ನವರಿಗೆ ಕಂಟ್ರಾಕ್ಟ್ ಕೊಡಿ, ಅದರ ನಿರ್ವಹಣ ವೆಚ್ಚವನ್ನು ಕೂಡ ಅವರೇ ಭರಿಸಲಿ, ಟೆಂಡರ್ ಕರೆದು ಕೊಡಿ ಎನ್ನುವ ವಿಚಾರವನ್ನು ಕೂಡ ಹೇಳಿದ್ದೆ. ಅಲ್ಲಿಗೆ ಬಂದ್ದಿದ್ದಂಥ ಮಂತ್ರಿಗಳು ಹೇಳಿದ್ದರು. ಇಲ್ಲಿ ನಾವು ಪ್ರೈವೇಟ್‌ನವರಿಗೆ ಕೊಡುತ್ತೇವೆ, ಅವರಿಗೆ ಸಬ್ಸಿಡಿ ಕೊಡುತ್ತೇವೆ. ಅವರೇ ಮಾಡಿಕೊಳ್ಳಲಿ ಎನ್ನುವ ವಿಚಾರವನ್ನು ಹೇಳಿದರು. ಆದರೆ ಇದುವರೆಗೆ ಪ್ರೈವೇಟ್‌ನವರಿಗೆ ಸಬ್ಸಿಡಿ ಕೊಡುವುದಾಗಲೀ ಪ್ರೈವೇಟ್‌ನವರಿಂದ ಮಾಡಿಸುವದಾಗಲೀ ಒಂದು ಕಿಲೋ ಮೀಟರ್ ಕೂಡ ಸೌರ ಶಕ್ತಿಯನ್ನು ಅಳವಡಿಸಿಲ್ಲ. ಕಾಡಾನೆ ಹಾವಳಿಯಿಂದ ಮತ್ತು ಬೇರೆ ಪ್ರಾಣಿಗಳ ಹಾವಳಿಯಿಂದ ವರ್ಷ ವರ್ಷ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಪರಿಹಾರ ಕೊಡುವುದನ್ನು ನಿಲ್ಲಿಸಿ, ಸೌರ ಶಕ್ತಿಯನ್ನು ಸ್ಟ್ರೆಂಗ್ತನ್ ಮಾಡುವ ಕಾರ್ಯಕ್ರಮ ಏನಾದರೂ ಹಾಕಿಕೊಳ್ಳುತ್ತಾರಾ? ಈ ವಿಚಾರವನ್ನು ಕಳೆದ ನಾಲ್ಕು ವರ್ಷಗಳಿಂದ ಹೇಳಿದರೂ ಕೂಡ ಯಾವುದೇ ಫಲಕಾರಿಯಾದ ಉತ್ತರ ಸಿಗಲಿಲ್ಲ. ಈ ರೀತಿ ಮಂತ್ರಿಗಳು ಹೊರಗಡೆ ಒಂದು ರೀತಿ ಹೇಳುವುದು, ಒಳಗಡೆ ಒಂದು ರೀತಿ ಹೇಳುವುದು, ಸರಿಯಲ್ಲವೆಂದು ನನ್ನ ಅಭಿಪ್ರಾಯ. ಅದರ ಜೊತೆಗೆ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಹಾಗೂ ಬಜೆಟ್ ಭಾಷಣದಲ್ಲಿ ಕೂಡ ಹೇಳಿದ್ದಾರೆ. ನಮ್ಮ ಸರ್ಕಾರ ಬಂದ ನಂತರ ಪ್ರತಿ ಗ್ರಾಮ ಪಂಚಾಯಿತಿಗಳಿಗೆ ಒಂದು ಲಕ್ಷ ರೂಪಾಯಿಗಳ ಬದಲು ಐದು ಲಕ್ಷ ರೂಪಾಯಿಗಳ ಹಣವನ್ನು ಕೊಡುತ್ತೇವೆ, ಎಂದು ಅದನ್ನು ಪುನಃ ಅವರು ರಾಜ್ಯಪಾಲರ ಭಾಷಣದಲ್ಲಿ ಕೂಡ ಹೇಳಿಸಿದ್ದಾರೆ. ಬಜೆಟ್ ಮಂಡನೆ ಮಾಡಿ 2005ನೇ ಬಜೆಟ್‌ಗೆ ಹೋಗುವಂತಹ ಸಮಯ ಬಂದಿದೆ ಆದರೆ ನಾನು

ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಕೇಳಿದಂತಹ ಸಂದರ್ಭದಲ್ಲಿ ಕೇವಲ ಒಂದು ಗ್ರಾಮ ಪಂಚಾಯಿತಿಗೆ 1.8 ಲಕ್ಷ ರೂಪಾಯಿ ಮಾತ್ರ ಹಣ ಬಿಡುಗಡೆಯಾಗಿದೆ. ಇನ್ನು ಉಳಿದಿರುವಂಥ ಎರಡ್ಮೂರು ತಿಂಗಳುಗಳಲ್ಲಿ ಉಳಿದಿರುವ ನಾಲ್ಕು ಲಕ್ಷ ರೂಪಾಯಿಗಳನ್ನು ಯಾವಾಗ ಬಿಡುಗಡೆ ಮಾಡುತ್ತಾರೆ? ಹೀಗಾದರೆ ಯಾವ ರೀತಿಯಲ್ಲಿ ಪಂಚಾಯತಿಗಳು ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ? ಈ ವಿಚಾರದ ಬಗ್ಗೆ ಅವರು ಬೆಳಕನ್ನು ಚೆಲ್ಲಬೇಕಾಗುತ್ತದೆ. ಸುಮ್ಮನೇ ರಾಜ್ಯಪಾಲರ ಭಾಷಣದ 62 ಪುಟಗಳಲ್ಲಿ ಹಾಗೂ ಬಜೆಟ್ ಭಾಷಣದ 111 ಪುಟಗಳಲ್ಲಿ ಯೋಜನೆಗಳ ಬಗ್ಗೆ ಹೇಳಿ ಯಾವುದೇ ಕೆಲಸಗಳನ್ನು ಕಾರ್ಯಗತ ಮಾಡದೇ ಈ ಸರ್ಕಾರ ನಡೆಯುತ್ತಿದೆಯೆಂದು ಹೇಳಿದರೆ ತಪ್ಪಾಗಲಾರದು. ಕಳೆದ ಬಾರಿಯ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕರಿಗೆ ಕೊಡುತ್ತಿರುವ ಸಂಬಳಕ್ಕೆ 200 ರೂಪಾಯಿಗಳನ್ನು ಹೆಚ್ಚಿಸಲಾಗುವುದು ಎಂದು ಹೇಳಿದ್ದರು. ಈಗ ಸದನದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಇಲ್ಲ. ಆದರೆ ಇವೊತ್ತಿನವರೆಗೆ 200 ರೂಪಾಯಿ ಇರಲಿ, 100 ರೂಪಾಯಿಗಳನ್ನೂ ಕೂಡ ಹೆಚ್ಚಿಸುವಂಥ ಕೆಲಸವನ್ನು ಮಾಡಲಿಲ್ಲ. ಆದರೆ ಸರ್ಕಾರವೇ ಹೇಳಿಕೊಂಡಿದೆ. ಈ ಸ್ತ್ರೀಶಕ್ತಿ ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಿರುವುದಕ್ಕೆ ಅಂಗನವಾಡಿ ಕಾರ್ಯಕರ್ತೆಯರು ಪ್ರಮುಖವಾದ ಪಾತ್ರವನ್ನು ವಹಿಸಿದ್ದಾರೆಂದು ಹೇಳಿದೆ. ಆದರೆ ಇವೊತ್ತಿನವರೆಗೆ ಅಂಗನವಾಡಿ ಕಾರ್ಯಕರ್ತೆಯರ ಗೌರವಧನವನ್ನು ಹೆಚ್ಚಿಸದೇ ಇರುವುದರಿಂದ ಇದೂ ಕೂಡ ಸುಳ್ಳು ಭರವಸೆಯಾಗಿ ಉಳಿದಿದೆ ಎಂದರೆ ತಪ್ಪಾಗಲಾರದು. ಅದೇ ರೀತಿ ಇವೊತ್ತು ಗ್ರಾಮೀಣ ಕೃಪಾಂಕಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ...

ಶ್ರೀ ಸಿ.ಆರ್. ಸಗೀರ್ ಅಹಮದ್ : ಸರ್ಕಾರ ಹೇಳಿರುವುದನ್ನು ಹೇಳಿ. ಸುಳ್ಳು ಭರವಸೆ ಎಂದು ಏಕೆ ಹೇಳುತ್ತೀರಿ?

ಶ್ರೀ ಎಂ.ಪಿ. ರಂಜನ್ : ನೀವೇ ಹೇಳಿದ್ದೀರಿ. ಬಜೆಟ್ ಭಾಷಣದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನವನ್ನು ಮಾಸಿಕ 200 ರೂಪಾಯಿ ಹೆಚ್ಚಿಸುತ್ತೇವೆ. ಹಾಗೂ ಸಹಾಯಕರಿಗೆ 100 ರೂಪಾಯಿ ಹೆಚ್ಚಿಸುತ್ತೇವೆಂದು ಹೇಳಿದ್ದೀರಿ. ಬಜೆಟ್‌ನಲ್ಲಿ ಆ ರೀತಿ ಹೇಳಿದ್ದರೂ ಕೂಡ ಇದುವರೆಗೆ ಕೊಟ್ಟಿಲ್ಲವೆಂದು ನಾನು ಹೇಳುತ್ತಿರುವುದು. ನೀವೇನಾದರೂ ಈಗ ಕೊಡುತ್ತೇವೆಂದು ಹೇಳುತ್ತೀರಾ? ಹೇಳುವುದಿದ್ದರೆ ಹೇಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಉತ್ತರ ಕೊಡುವಾಗ ಸರ್ಕಾರ ಹೇಳುತ್ತದೆ ಬಿಡಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಅದೇ ರೀತಿ ಕೊಡುಗಿನಲ್ಲಿ ಸಾಕ್ಷರ ಕಾವೇರಿಯ ಗೌರವಧನದಲ್ಲಿ ಕಳೆದ ಹದಿನೆಂಟು ತಿಂಗಳುಗಳಿಂದ ಪ್ರೇರಕರಿಗೆ ಒಂದು ಪೈಸೆ ಕೂಡ ಗೌರವ ಧನವನ್ನೂ ಕೊಡುತ್ತಿಲ್ಲ. ಇದಕ್ಕೆ ಕಾರಣವೇನು? ಕೇಂದ್ರ ಸರ್ಕಾರದಿಂದ ಹಣ ಬರಲಿಲ್ಲವೆ? ಅಥವಾ ರಾಜ್ಯ ಸರ್ಕಾರ ಹಣ ಕೊಡಲಿಲ್ಲವೆ? ಇದರ ಬಗ್ಗೆ ಉತ್ತರವನ್ನು ಹೇಳಬೇಕೆಂದು ಕೇಳಲು ಇಚ್ಛೆಪಡುತ್ತೇನೆ. ಈ ಬಗ್ಗೆ ನಾನು ಪ್ರಶ್ನೆಯನ್ನೂ ಕೂಡ ಕೇಳಿದ್ದೆ. ಆದರೆ ಸಮರ್ಪಕವಾದ ಉತ್ತರವನ್ನು ಈ ಬಗ್ಗೆ ಕೊಡಲಿಲ್ಲ. ಇನ್ನು ಸರ್ಕಾರಿ ಆಸ್ಪತ್ರೆಗಳಿಗೆ ಈಗಾಗಲೇ ಒಂದು ಸುತ್ತೋಲೆಯನ್ನು ಸರ್ಕಾರ ಕಳುಹಿಸಿ ಇನ್ನು ಮುಂದೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬೇಕಾದರೆ ಏನಾದರೂ ಬ್ಯಾಂಡೇಜ್ ಮಾಡಬೇಕಾದರೂ ದುಡ್ಡು ಕೊಡಬೇಕು. ಮತ್ತೆ ಹಾಸಿಗೆಯನ್ನು ತೆಗೆದುಕೊಳ್ಳಬೇಕಾದರೆ ಅಲ್ಲಿ ಹತ್ತು ರೂಪಾಯಿಯನ್ನು ಕೊಡಬೇಕು. ಒಂದು ಬ್ಯಾಂಡೇಜ್‌ಗೆ ಕೈ ಫ್ರಾಕ್ಚರ್ ಆದರೆ 30 ರೂಪಾಯಿಯನ್ನು

ಕಟ್ಟಬೇಕು ಎಂದು ತಿಳಿಸುತ್ತಾ ಒಂದು ಪಟ್ಟಿಯನ್ನೇ ಕಳುಹಿಸಿಬಿಟ್ಟಿದ್ದಾರೆ. ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಯಾರು ಸ್ವಾಮಿ ಹೋಗುವುದು? ಸರ್ಕಾರಿ ಆಸ್ಪತ್ರೆಗಳಿಗೆ ಬಡವರು, ನಿರ್ಗತಿಕರು ಹೋಗುತ್ತಾರೆ. ಅಂಥವರು ಆಸ್ಪತ್ರೆಗೆ ಚಿಕಿತ್ಸೆಗೆ ಹೋದಂಥ ಸಂದರ್ಭದಲ್ಲಿ ಅವರಿಂದ ಎಕ್ಸ್‌ರೇಗೆ ಇಷ್ಟು ದುಡ್ಡು ವಸೂಲಿ ಮಾಡಿ, ಕೈ ಫ್ಯಾಕ್ಚರ್ ಆಗಿದ್ದರೆ ಬ್ಯಾಂಡೇಜ್‌ಗೆ ಇಷ್ಟು ದುಡ್ಡು ವಸೂಲಿ ಮಾಡಿ ಎನ್ನುವಂಥ ಸುತ್ತೋಲೆಯನ್ನು ಕೊಟ್ಟಿದ್ದಾರೆ. ಅದರ ಜೊತೆಯಲ್ಲಿ ಪುನಃ ಒಂದು ಸುತ್ತೋಲೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆ ಎಂದರೆ ಯಾರಾದರೂ ಬಿ.ಪಿ.ಎಲ್. ಕಾರ್ಡ್‌ನ್ನು ಹೊಂದಿದ್ದರೆ ಅವರಿಗೆ ಮಾತ್ರ ಮುಕ್ತ್ಸಟ್ಟೆಯಾಗಿ ಚಿಕಿತ್ಸೆ ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಯಾರಾದರೂ ಬಡವರು ರೋಡ್‌ನಲ್ಲಿ ಹೋಗುವಾಗ ಏನಾದರೂ ಅಪಘಾತವಾದರೆ ತಕ್ಷಣ ಚಿಕಿತ್ಸೆ ಪಡೆಯಬೇಕಾದರೆ ಸರ್ಕಾರಿ ಆಸ್ಪತ್ರೆಗೆ ತೋರಿಸಲು ಬಿ.ಪಿ.ಎಲ್. ಕಾರ್ಡ್‌ನ್ನು ಅವನ ಜೇಬಿನಲ್ಲಿ ಇಟ್ಟುಕೊಂಡಿರಬೇಕಾಗುತ್ತದೆ. ಏಕೆಂದರೆ ಬಿ.ಪಿ.ಎಲ್. ಕಾರ್ಡ್ ಇಲ್ಲವೆಂದರೆ ಸರ್ಕಾರಿ ಆಸ್ಪತ್ರೆಯಲ್ಲಿ ಅವನಿಗೆ ಮುಕ್ಕಟ್ಟೆ ಚಿಕಿತ್ಸೆ ಕೊಡುವುದಿಲ್ಲ. ಆ ಸ್ಥಿತಿಗೆ ಈ ಸರ್ಕಾರ ಬಂದಿದೆ. ಸರ್ಕಾರಿ ಆಸ್ಪತ್ರೆಗಳೂ ಕೂಡ ಹಣಗಳಿಸುವುದಕ್ಕೆ ಹೊರಟಿದೆ ಎಂದರೆ ನಿಮ್ಮ ಸರ್ಕಾರ ಎಷ್ಟರಮಟ್ಟಿಗೆ ಬಡವರ ಪರ ಇದೆ ಎನ್ನುವುದನ್ನು ನಾವು ಅರಿತುಕೊಳ್ಳಬೇಕಾಗುತ್ತದೆ. ದಯವಿಟ್ಟು ಆ ಸುತ್ತೋಲೆಯನ್ನು ತಾವು ವಾಪಸ್ಸು ಪಡೆಯಿರಿ. ಸರ್ಕಾರಿ ಆಸ್ಪತ್ರೆಯಲ್ಲಿ ಎಲ್ಲರಿಗೂ ಚಿಕಿತ್ಸೆಯನ್ನು ಪುಕ್ಕಟ್ಟೆಯಾಗಿ ಕೊಡಿ ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅದೇ ರೀತಿ ಪಿ.ಡಬ್ಲ್ಯೂ.ಡಿ ಬಗ್ಗೆ ಹೇಳಬೇಕೆಂದರೆ, ಈಗಾಗಲೇ ನಮ್ಮ ಪಿ.ಜಿ.ಆರ್. ಸಿಂಧ್ಯಾರವರು ಮಾತನಾಡುತ್ತಾ ನಂಜುಂಡಪ್ಪ ಆಯೋಗ, ಹಾರನಹಳ್ಳಿ ರಾಮಸ್ವಾಮಿ ಆಯೋಗ, ತೆರಿಗೆ ಸುಧಾರಣೆಯ ವೀರಪ್ಪಮೊಯ್ಲಿ ಆಯೋಗದ ಬಗ್ಗೆ ಹೇಳಿದರು. ಆ ಆಯೋಗದ ವರದಿಯಲ್ಲಿ ಕೊಡಗಿನ ರಸ್ತೆಗಳಿಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕು ಎಂದು ಶಿಫಾರಸ್ಸು ಮಾಡಲಾಗಿದೆ. ನಮ್ಮ ಮಂತ್ರಿಗಳೂ ಕೂಡ ಎರಡು ವರ್ಷದ ಹಿಂದೆ ಬಂದಂಥ ಸಂದರ್ಭದಲ್ಲಿ ಸುಮಾರು 600 ಲಕ್ಷ ರೂಪಾಯಿಗಳ ಹಣ ಮಂಜೂರಾತಿ ಮಾಡಿದ್ದೇವೆ ಎಂದು ನನಗೆ ಪತ್ರವನ್ನೂ ಕೂಡ ಕೊಟ್ಟರು. ಇವೊತ್ತಿಗೂ ಆ ಪತ್ರ ಧೂಳು ಹಿಡಿದುಕೊಂಡೇ ಬಿದ್ದಿದೆ. ಕೆ.ಆರ್.ಡಿ.ಸಿ.ಯಲ್ಲಿ ರಸ್ತೆಗೆ ಒಂದು ಕಿಲೋಮೀಟರ್‌ಗೂ ಕೂಡ ಒಂದು ರೂಪಾಯಿ ಕೂಡ ರಿಲೀಸ್ ಮಾಡುವಂಥ ಪರಿಸ್ಥಿತಿಗೆ ಈ ಸರ್ಕಾರ ಹೋಗಲಿಲ್ಲ. ಮೊನ್ನೆ ಮೊನ್ನೆ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿದ್ದಂಥ ಮಾನ್ಯ ಎಂ.ಎಂ. ನಾಣಯ್ಯನವರು ಹೇಳಿದರು. ಸ್ಪೆಶಲ್ ಪ್ಯಾಕೇಜ್ ಎಂದು ಬಹಳ ದೊಡ್ಡ ದೊಡ್ಡ ಹೆಡ್ ಲೈನ್ಸ್‌ನಲ್ಲಿ ಪತ್ರಿಕೆಗಳಲ್ಲಿ ಬಂತು. ಅದನ್ನು ನೋಡಿ ನನಗೆ ತುಂಬಾ ಸಂತೋಷವಾಯಿತು. ಏನಾದರೂ ಆಗಲಿ ಮುಖ್ಯಮಂತ್ರಿಗಳು ಹೇಳಿದ್ದಾರೆ, ಸ್ಪೆಶಲ್ ಪ್ಯಾಕೇಜ್‌ನ ಘೋಷಣೆಯನ್ನು ಮಾಡಿದರು. ಘೋಷಣೆ ಮಾಡಿದರು. ಘೋಷಣೆ ಮಾಡಿದ ಮೂರನೇ ದಿವಸ ಅದಕ್ಕೆ ಸಂಬಂಧಪಟ್ಟ ಇನ್‌ಛಾರ್ಜ್ ಸೆಕ್ರೆಟರಿ ಒಬ್ಬರು ಬರುತ್ತಾರೆ. ಸ್ಟೇಟ್‌ಮೆಂಟ್ ಕೊಡುತ್ತಾರೆ. ಯಾವುದೇ ವಿಶೇಷ ಪ್ಯಾಕೇಜ್ ಇಲ್ಲ ಎಂದು ಹೇಳುತ್ತಾರೆ. ಸ್ಟೇಟ್‌ಮೆಂಟ್ ಕೊಡುತ್ತಾರೆ ಯಾವುದೇ ವಿಶೇಷ ಪ್ಯಾಕೇಜ್ ಇಲ್ಲ ಎಂದು ಹೇಳುತ್ತಾರೆ. ನನಗೆ ಸಂಶಯವಾಯಿತು. ಪ್ಯಾಕೇಜ್ ಬದಲು ಪ್ಯಾಕೇಟ್ ಕೊಡುತ್ತೇವೆಂದು ಹೇಳಿದರೇನೋ ನಮ್ಮ ಅಬ್ಕಾರಿ ಮಂತ್ರಿಗಳು ಎಂದು ಸಂಶಯವಾಯಿತು. ಏಕೆಂದರೆ ಅವರು ಅಬ್ಕಾರಿ ಮಂತ್ರಿಗಳು ಇದ್ದಾರೆ. ವಿಶೇಷವಾಗಿ ಪ್ಯಾಕೇಟ್‌ನ್ನು ಕೊಡಗಿಗೆ ಕೊಡುತ್ತೇವೆಂದು ಪ್ಯಾಕೇಜ್ ಬದಲು ಹೇಳಿದರೇನೋ ಎಂದು ನನಗೆ ಅನ್ನಿಸಿತು.

ಶ್ರೀ ಎಂ. ಎಂ. ನಾಣಯ್ಯ (ಅಬ್ಕಾರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಉಸ್ತುವಾರಿ ಮಂತ್ರಿಗಳು 107 ಕೋಟಿ ರೂಪಾಯಿಯ ಮೌಲ್ಯದ ಪ್ಯಾಕೇಜ್‌ನ್ನು ಕೊಡಬೇಕೆಂದು ಹೇಳಿ ಮುಖ್ಯಮಂತ್ರಿಗಳ ಜೊತೆ ಸೇರಿಕೊಂಡು ಈಗಾಗಲೇ ಸಭೆಯನ್ನು ನಡೆಸಿದ್ದೇವೆ. ಆ ನಂತರ ಉಸ್ತುವಾರಿ ಸೆಕ್ರೆಟರಿಯವರಾದ ಫಲ್ಗುಣಿ ರಾಜ್‌ಕುಮಾರ್‌ರವರು ಕೊಡಗಿಗೆ ಬಂದಿದ್ದರು. ಪತ್ರಕರ್ತರು ಕ್ಲಾರಿಫಿಕೇಶನ್ ಕೇಳುವಾಗ ಅವರು ಏನು ಹೇಳಿದ್ದಾರೆಂದರೆ ಒಂದೂವರೆ ತಿಂಗಳಲ್ಲಿ ಬಿಡುಗಡೆ ಆಗುತ್ತದೆ ಎಂದು ಹೇಳಿದ್ದಾರೆ. ಏಕೆಂದರೆ ಬಜೆಟ್ ಪ್ರಾವಿಶನ್ ಆಗಬೇಕು. ಕೆಲವೊಂದನ್ನು ಬಜೆಟ್‌ನಲ್ಲಿ ಕೊಡಬೇಕು. ಕೆಲವೊಂದನ್ನು ಬೇರೆ ಏಜೆನ್ಸಿಯವರಿಂದ ಅವರೇ ತೆಗೆದುಕೊಳ್ಳಬೇಕಾಗುತ್ತದೆ ಏಶಿಯನ್ ಬ್ಯಾಂಕ್ ಅಥವಾ ವಿಶ್ವಬ್ಯಾಂಕ್ ಅಥವಾ ಹುಡ್ಕೋದಿಂದ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಇದಕ್ಕೆಲ್ಲಾ ಸಮಯ ತೆಗೆದುಕೊಳ್ಳುತ್ತದೆ ಎನ್ನುವ ದೃಷ್ಟಿಯಿಂದ ಹೇಳಿದ್ದಾರೆ. ಪತ್ರಿಕೆಯಲ್ಲಿ ಕರೆಕ್ಟಾಗಿ ಆ ಬಗ್ಗೆ ರೆಪ್ರೆಸೆಂಟ್ ಆಗಿದೆಯೋ ಇಲ್ಲವೊ ಅದು ನನಗೆ ಗೊತ್ತಿಲ್ಲ. ಆದರೆ ಅದು ಆಗುತ್ತದೆ ಎಂದು ಭರವಸೆ ಕೂಡ ಇದೆ. ಇದರ ಬಗ್ಗೆ ಮೈಸೂರಿನಲ್ಲಿ ನಡೆದಂತಹ ಕೊಡವಮೇಳದಲ್ಲಿ ಕೂಡ ಮುಖ್ಯಮಂತ್ರಿಗಳು ಅದನ್ನು ಪುನರುಚ್ಚರಿಸಿದ್ದಾರೆ.

ಶ್ರೀ ಎಂ.ಪಿ ಅಪ್ಪಚ್ಚು ರಂಜನ್ : ಮಾನ್ಯ ಅಧ್ಯಕ್ಷರೆ, ಪತ್ರಿಕೆಯಲ್ಲಿ ಬಂದದ್ದನ್ನೇ ಓದಿ ನಾನು ಹೇಳುತ್ತಿರುವುದು. ಪತ್ರಿಕೆಯಲ್ಲಿ 107 ಕೋಟಿ ರೂ ಸ್ಪೆಷಲ್ ಪ್ಯಾಕೇಜ್ ಎಂದು ಇದೆ. ಪುನಃ ಪತ್ರಿಕೆಯಲ್ಲಿಯೇ ಎರಡು ದಿವಸ ಬಿಟ್ಟು ಏನು ಬಂದಿತ್ತು ಎಂದರೆ ಯಾವುದೇ ಹಣವಿಲ್ಲದ ಕಾರಣ ಕೊಡುವುದಕ್ಕೆ ಆಗುವುದಿಲ್ಲ ಎಂದು ಬಂತು. ನನಗೆ ಅನ್ನಿಸುತ್ತದೆ, ಇಲ್ಲಿ ಮಂತ್ರಿಗಳ ಸರ್ಕಾರ ಇದೆಯೋ ಅಥವಾ ಅಧಿಕಾರಿಗಳ ಸರ್ಕಾರವೋ ಎಂಬ ಬಗ್ಗೆ ಅವರೇ ಹೇಳಬೇಕಾಗುತ್ತದೆ. ಪತ್ರಿಕೆಯಲ್ಲಿ ಈಗ ಬಂದಿದೆಯೆಂದು ಹೇಳುತ್ತಿದ್ದೀರಿ. ಆದರೆ ಅದನ್ನು ನಾನು ನೋಡಿಲ್ಲ. ಮೊದಲು ಪತ್ರಿಕೆಯಲ್ಲಿ ಬಂದ ವಿಚಾರವನ್ನೇ ನಾನು ಈ ಸದನದ ಮುಂದೆ ಇಟ್ಟಿದ್ದೇನೆ. ಇನ್ನು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳಬೇಕೆಂದರೆ ಇವೊತ್ತು ಕೊಡಗಿನಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಇದು ಎಲ್ಲರಿಗೂ ಕೂಡ ಗೊತ್ತಿದೆ. ಇವೊತ್ತು ಚುನಾವಣೆಯಲ್ಲಿ ಕೂಡ ಘೋಷಣೆಯಾಗುತ್ತಿದೆ. ಈ ಸಂದರ್ಭದಲ್ಲಿ ಕೊಡಗಿನಲ್ಲಿರುವಂಥ ಶಾಸಕರಿರಬಹುದು. ಇಡೀ ರಾಜ್ಯದಲ್ಲಿರುವಂಥ ಶಾಸಕರಿರಬಹುದು ಈ ಕುಡಿಯುವ ನೀರಿನ ವಿಚಾರದಲ್ಲಿ ಯುದ್ಧೋಪಾದಿಯಲ್ಲಿ ಏನಾದರೂ ಕೆಲಸವನ್ನು ಮಾಡಲಿಲ್ಲವೆಂದರೆ ಯಾರೂ ಕೂಡ ಚುನಾವಣೆಯಲ್ಲಿ ಜನರನ್ನು ಮತ ಕೇಳಲು ಹೋಗುವುದಕ್ಕೆ ಆಗುವುದಿಲ್ಲ. ನಿಮಗೆಲ್ಲರಿಗೂ ಖಾಲಿ ಕೊಡದ ದರ್ಶನವಾಗುತ್ತದೆ. ಇದು ಮಾತ್ರ ನೂರಕ್ಕೆ ನೂರರಷ್ಟು ಸತ್ಯ. ತಾವು ದಯವಿಟ್ಟು ಕುಡಿಯುವ ನೀರಿಗೆ ಹಣವನ್ನು ಒದಗಿಸಿ. ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಈ ಸರ್ಕಾರ ಮುಂದಾಗಬೇಕು ಎನ್ನುವಂಥ ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ಕೊಡಗಿನಲ್ಲಿಯೇ ಜನರಿಗೆ ಕುಡಿಯುವ ನೀರಿಗೆ ತೊಂದರೆಯಾದರೆ ಇನ್ನು ರಾಜ್ಯದ ಯಾವ ಯಾವ ಮೂಲೆಗಳಲ್ಲಿ ಕುಡಿಯುವ ನೀರಿಗೆ ಎಷ್ಟು ತೊಂದರೆ ಇರಬಹುದು ಎನ್ನುವುದನ್ನು ನಾವು ಅರಿತುಕೊಳ್ಳಬೇಕಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಕಾರ್ಯಪ್ರವೃತ್ತರಾಗಬೇಕೆಂದು ಹೇಳಬಯಸುತ್ತೇನೆ. ಇನ್ನು ಮೊನ್ನೆ ಮೊನ್ನೆ ಪತ್ರಿಕೆಯಲ್ಲಿ ಕೊಡಗು ಜಿಲ್ಲಾ ಪಂಚಾಯತಿಯಲ್ಲಿ ಒಂದು ಕೋಟಿ ರೂಪಾಯಿಯ ಹಣ ದುರುಪಯೋಗವಾಗಿದೆಯೆಂದು ಬಂದಿದೆ. ಅದೇ ರೀತಿ ಬಳ್ಳಾರಿ ಜಿಲ್ಲಾ ಪಂಚಾಯತಿಯಲ್ಲಿ ಮೂರು ಕೋಟಿ, ಉತ್ತರ ಕರ್ನಾಟಕದಲ್ಲಿ

ಎರಡು ಕೋಟಿ ಮೂವತ್ತು ಲಕ್ಷ ರೂಪಾಯಿ, ತುಮಕೂರಿನಲ್ಲಿ ನಲವತ್ತನಾಲ್ಕು ಲಕ್ಷ ರೂಪಾಯಿ ಎಂದು ಪತ್ರಿಕೆಯಲ್ಲಿ ಬಂದಿದೆ. ನಮ್ಮ ಕೊಡಗು ಜಿಲ್ಲೆಗೆ ಕಳೆದ ಸಾರಿ ಮೂರು ಮಂತ್ರಿಗಳು ಇದ್ದರೂ ಕೂಡ ಒಂದು ಕೋಟಿ ರೂಪಾಯಿ ಹಣ ದುರುಪಯೋಗವಾಗುತ್ತದೆ ಎಂದು ಹೇಳಿದರೆ ನಮ್ಮ ಪರಿಸ್ಥಿತಿ ಎಲ್ಲಿಗೆ ತಲುಪಿದೆ ಎಂಬ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಯಾವ ರೀತಿಯಲ್ಲಿ ಹಣ ದುರುಪಯೋಗವಾಗಿದೆ. ಎಲ್ಲಿ ಆಗಿದೆ. ಆ ದುಡ್ಡನ್ನು ಯಾರ ಕೈಯಿಂದ ರೆಕವರಿ ಮಾಡುತ್ತೀರಿ, ಎಂಬ ಬಗ್ಗೆ ಸ್ಪಷ್ಟವಾದ ಉತ್ತರವನ್ನು ನಾನು ಸರ್ಕಾರದಿಂದ ಪಡೆಯಲು ಬಯಸುತ್ತೇನೆ. ಇನ್ನು ನಮ್ಮ ಕೊಡಗು ಜಿಲ್ಲೆಯಲ್ಲಿ ಐ.ಎಸ್.ಐ ಚಟುವಟಿಕೆಗಳು ನಡೆಯುತ್ತಿವೆಯೆಂದು ಪತ್ರಿಕೆಗಳಲ್ಲಿ ಬಂದಿದೆ. ಕಳೆದ ಬಾರಿ ಪ್ರಶ್ನೆ ಕೇಳಿದಾಗ ಉತ್ತರದಲ್ಲಿ ಕೆಲವು ಭಾಗಗಳಲ್ಲಿ ನಡೆದಿದೆ. ಇದರ ಜೊತೆಗೆ ಕೆಲವು ಟೆಲಿಫೋನ್ ಬೂತ್‌ಗಳಿಂದ ಕದ್ದು ದಾವೂದ್ ಇಬ್ರಾಹಿಂರವರಿಗೆ ಫೋನ್ ಮಾಡಿದಂಥ ಸಾಕ್ಷ್ಯಾಧಾರಗಳು ಸಿಕ್ಕಿದೆಯೆಂದು ಪತ್ರಿಕೆಗಳಲ್ಲಿ ಬಂದಿದೆ. ಆ ಬಗ್ಗೆ ಕೂಡ ನೀವು ಬಹಳ ಮುತುವರ್ಜಿ ವಹಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಕಳೆದ ವಾರದಲ್ಲಿ ನನಗೆ ಸೋಮವಾರಪೇಟೆಯ ಒಂದು ಪಂಚಾಯಿತಿ ಆಫೀಸ್ ಹತ್ತಿರ ನಾಲ್ಕು ಲಕೋಟೆಯಲ್ಲಿ ಅಲ್ಲಿ ಪಾಕಿಸ್ತಾನದ ಧ್ವಜವನ್ನು ಹಾಕಿ ಆ ಲಕೋಟೆಯೊಳಗೆ, ಅದರ ಜೊತೆಗೆ ನಾಲ್ಕು ಜನರ ಹೆಸರನ್ನು ಹಾಕಿ, ಅದರ ಜೊತೆಗೆ ನನ್ನ ಹೆಸರನ್ನೂ ಸೇರಿಸಿ ನಿಮ್ಮನ್ನು ಗುಂಡು ಹೊಡೆದು ಕೊಲ್ಲಲಾಗುವುದು ಎಂದು ಲಕೋಟೆಯಲ್ಲಿ ಹಾಕಿ ಕಳುಹಿಸಿದ್ದಾರೆ. ಇದು ಯಾರ ಕೈವಾಡ? ಇಲ್ಲಿ ನಮ್ಮ ರಕ್ಷಣೆ ವಿಚಾರ ಬರುತ್ತದೆ. ಮಾನ್ಯ ಅಧ್ಯಕ್ಷರ ಮುಖಾಂತರ ಹೇಳುವುದೇನೆಂದರೆ ಯಾರು ಈ ಕ್ರಮ ಕೈಗೊಂಡಿದ್ದಾರೆ, ಯಾರು ಈ ಕೃತ್ಯದಲ್ಲಿ ಭಾಗಿಯಾಗಿದ್ದಾರೆ ಎಂದು ಪತ್ತೆ ಹಚ್ಚುವಂತಹ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಏಕೆಂದರೆ ನಮ್ಮ ವಿಧಾನಸಭೆಯ ಸದಸ್ಯರಾದಂತಹ ಮೂರು ಜನ ಶಾಸಕರಿಗೆ ಕೊಲೆ ಬೆದರಿಕೆ ಬಂದಿದ್ದು ಡಾ॥ ಚಿತ್ತರಂಜನ್ ಹಾಗೂ ಅಸ್ನೋಟಿಕರ್ ಅವರನ್ನು ಗುಂಡು ಹೊಡೆದು ಕೊಂದರು. ಈ ರೀತಿ ಶಾಸಕರಿಗೆ ಕೊಲೆ ಬೆದರಿಕೆ ಹಾಕುವಂತಹ ವಿಚಾರಗಳು ಇದೆ. ಇದಕ್ಕೆ ಪ್ರಚೋದನೆ ಯಾರು ಕೊಡುತ್ತಾರೆ? ಈ ವಿಚಾರವನ್ನು ಕೂಡ ಗಂಭೀರವಾಗಿ ಚಿಂತನೆ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಪತ್ರದಲ್ಲಿ ಕೂಡ ಕೆಲವು ಸ್ಲೋಗನ್ ಬರೆದು ಲಕೋಟೆಯಲ್ಲಿ ಹಾಕಿದ್ದಾರೆ. ಕುಶಾಲ ನಗರದಲ್ಲಿ ರಾಜಕೀಯ ಪಕ್ಷಗಳು ಅವತ್ತಿನ ದಿನ ಮೆರವಣಿಗೆಯನ್ನು ಕೂಡ ಮಾಡಿದ್ದಾರೆ. ಮೆರವಣಿಗೆಯನ್ನು ಮಾಡಿದಂತಹ ಸಂದರ್ಭದಲ್ಲಿ ಕೆಲವು ಜನ ಮಧ್ಯದಲ್ಲಿ ಕುಳಿತುಕೊಂಡು ಈ ರೀತಿಯ ಸ್ಲೋಗನ್ ಹಾಕುವುದನ್ನೂ ಕೂಡ ಪೊಲೀಸ್ ಅಧಿಕಾರಿಗಳು ಕೇಳಿದ್ದಾರೆ. ಅಲ್ಲಿ ಪೊಲೀಸ್ ಅಧಿಕಾರಿಗಳು ಎದುರುಗಡೆ ಪಾಕಿಸ್ತಾನಕ್ಕೆ ಜಿಂದಾಬಾದ್, ಭಾರತಕ್ಕೆ ಮುರ್ದಾಬಾದ್ ಎಂದು ಹೇಳುವುದನ್ನೂ ಕೂಡ ಆ ಪೊಲೀಸ್ ಅಧಿಕಾರಿಗಳ ಎದುರುಗಡೆ ಕೂಗಿದರು. ಆ ಪೊಲೀಸ್ ಅಧಿಕಾರಿಗಳೇ ಇದಕ್ಕೆ ಸಾಕ್ಷಿ. ಅಂತಹ ಪೊಲೀಸ್ ಅಧಿಕಾರಿಯನ್ನು ಅಲ್ಲಿಂದ ವರ್ಗಾವಣೆ ಮಾಡುವಂತಹ ಕೆಲಸವನ್ನು ಈ ಸರ್ಕಾರ ಮಾಡಿತು. ಅಲ್ಲಿದ್ದಂತಹವರು ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದಂತಹ ಅಧಿಕಾರಿ. ಆ ಅಧಿಕಾರಿ ನೇರವಾಗಿ ಹೇಳುತ್ತಾರೆ. ಹಾಗೆ ಹೇಳಿದ್ದು ನಿಜ ಎಂದು. ಕುಶಾಲ ನಗರದಲ್ಲಿ ಮಸೀದಿಯೊಳಗೆ ಪಾಕಿಸ್ತಾನಕ್ಕೆ ಜಿಂದಾಬಾದ್ ಎಮದು ಕರೆದಿದ್ದು ನಿಜ, ಅಲ್ಲಿ ಐದಾರು ಹುಡುಗರು ಕರೆದಿದ್ದಾರೆ ಎನ್ನುವ ವಿಚಾರವನ್ನು ಕೂಡ ಹೇಳಿದ್ದಾರೆ. ಆದರೆ ಅಂತಹ ಅಧಿಕಾರಿಗಳನ್ನು ಅಲ್ಲಿ ಉಳಿಸಿ, ತಪ್ಪಿತಸ್ಥರ ಮೇಲೆ ಕೇಸ್ ಹಾಕುವುದನ್ನು ಬಿಟ್ಟು, ಇದುವರೆಗೂ

ಯಾರ ಮೇಲೂ ಕೇಸ್ ದಾಖಲಿ ಮಾಡಿಲ್ಲ. ಆದರೆ ಆ ಅಧಿಕಾರಿಯನ್ನು ವರ್ಗಾವಣೆ ಮಾಡುವಂತಹ ಕೆಲಸ ಮಾಡಿದ್ದಾರೆ. ಇದಕ್ಕೆ ಯಾರ ಕೈವಾಡ ಇದೆ ನನಗೆ ಗೊತ್ತಿಲ್ಲ. ಇದನ್ನು ನಾವು ಸೂಕ್ಷ್ಮವಾಗಿ ವಿಚಾರಣೆ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ತಾವು ಕಾರ್ಯಪ್ರವೃತ್ತರಾಗಬೇಕು. ನಮಗೆ ಸೋಮವಾರ ಪೇಟೆಯಲ್ಲಿ ಮುಂದಿನ ದಿನಗಳಲ್ಲಿ ನಾವು ಪ್ರಚಾರಕ್ಕೆ ಹೋಗುವುದು ಬಹಳ ಕಷ್ಟದ ಪರಿಸ್ಥಿತಿ ಇದೆ. ಅದಕ್ಕೋಸ್ಕರ ತಾವು ರಕ್ಷಣೆ ಕೊಡಬೇಕೆಂದು ಕೇಳುತ್ತೇನೆ.

ಛೇರ್ಮನ್ : ಮಾನ್ಯ ಅಪ್ಪಚ್ಚುರಂಜನ್‌ರವರೆ, ತಾವು ಏನು ಪ್ರಸ್ತಾಪ ಮಾಡಿದಿರಿ, ಪತ್ರ ಬರೆದಿದ್ದಾರೆ ಅದರಲ್ಲಿ ನನ್ನ ಹೆಸರು ಇದೆ ಎನ್ನುವ ವಿಚಾರವನ್ನು ತಾವು ಮಾತನಾಡಿದಿರಿ, ಆ ವಿಚಾರವನ್ನು ತಾವು ಸರ್ಕಾರದ ಗಮನಕ್ಕೆ ಅಥವಾ ಇಲಾಖೆಯ ಗಮನಕ್ಕೆ ತಂದಿದ್ದೀರಾ?

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಛೇರ್ಮನ್‌ರವರೆ, ಕಳೆದ ವಾರ ವಿಧಾನಸಭೆ ನಡೆಯುವಂತಹ ಸಂದರ್ಭದಲ್ಲಿ ಈ ಪತ್ರ ಹಾಗೂ ಕವರ್‌ಗಳು ಬಂದು ಬಿದ್ದಿವೆ. ಅದನ್ನು ಪೊಲೀಸ್ ಅಧಿಕಾರಿಗಳು ತೆಗೆದುಕೊಂಡು ಹೋಗಿದ್ದಾರೆ. ಪೊಲೀಸ್ ನಾಯಿ ಕೂಡ ಬಂದು, ಅದನ್ನು ನೋಡಿದೆ. ಅದನ್ನು ನೋಡಿದ ಮೇಲೆ ಸ್ಟೇಷನ್‌ಗೆ ಒಂದು ಸಾರಿ ಮತ್ತು ಕೆಲವು ಅಂಗಡಿಗಳಿಗೆ ಹೋಗುವಂತಹ ಕೆಲಸವನ್ನು ಮಾಡಿದ್ದು, ಮತ್ತೆ ಅಲ್ಲಿಂದ ಏನೂ ಮಾಡುವುದಕ್ಕೆ ಆಗಲಿಲ್ಲ.

ಛೇರ್ಮನ್ : ಒಬ್ಬ ಶಾಸಕರಿಗೆ ಬೆದರಿಕೆ ಪತ್ರ ಬಂದ ಮೇಲೆ ಮೊದಲನೆ ಕರ್ತವ್ಯ ಅದನ್ನು ಸೀನಿಯರ್ ಆಫೀಸರ್‌ಗೆ ತಿಳಿಸುವುದು. ಅಷ್ಟು ಕೆಲಸ ತಾವು ಮಾಡಿದ್ದೀರಾ? ಏಕೆಂದರೆ ತಾವು ರಕ್ಷಣೆ ಕೇಳುತ್ತಿದ್ದೀರಿ ಅದಕ್ಕೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಕಳೆದ ವಾರ ವಿಧಾನಸಭೆ ನಡೆಯುವಂತಹ ಸಂದರ್ಭದಲ್ಲಿ ಅಲ್ಲಿ ಕವರ್ ಸಿಕ್ಕಿತು. ನಾನು ಆಗ ಇಲ್ಲಿ ಇದ್ದೆ. ಅಲ್ಲಿಗೆ ಹೋದನಂತರ ನಾನು ವಿಚಾರಣೆಯನ್ನು ಮಾಡಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಛೇರ್ಮನ್‌ರವರೆ, ಅದು ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಒಬ್ಬ ಶಾಸಕನಿಗೆ ಈ ರೀತಿಯಾಗಿ ಬೆದರಿಕೆ ಪತ್ರ ಬರುವಂತಾದ್ದು ಹಾಗೂ ಲಕೋಟೆಯಲ್ಲಿ ಪಾಕಿಸ್ತಾನದ ಧ್ವಜ ಈ ಹಿನ್ನೆಲೆ ಇದ್ದಂತಹ ಸಂದರ್ಭದಲ್ಲಿ ಹಾಗೂ ಒಂದು ಕೊಡಗು ಜಿಲ್ಲೆ ಬಹಳ ಸೂಕ್ಷ್ಮವಾದಂತಹ ಜಿಲ್ಲೆ ಇರುವುದರಿಂದ ಇದನ್ನು ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಕಡೆ ಈ ರೀತಿ ಇದ್ದರೆ ಮತ್ತೊಂದು ಕಡೆ ಶಾಸಕರಿಗೆ ಇನ್ಸ್‌ಪೆಕ್ಟರ್ ಬಂದೂಕು ಹಿಡಿದು ಗುಂಡು ಹಾರಿಸುತ್ತೇವೆ ಎನ್ನುವಂತಹ ಹೆದರಿಕೆ. ಅದನ್ನು ನಾರಾಯಣ ಸ್ವಾಮಿಯವರು ಸದನದ ಗಮನಕ್ಕೆ ತೆಗೆದುಕೊಂಡು ಬರುತ್ತಾರೆ. ಈ ರೀತಿಯ ಪರಿಸ್ಥಿತಿ ಇದೆ. ಯಾರು ಅಧಿಕಾರಿಗಳು ಇದ್ದಾರೆ ಇವತ್ತು ಆ ಅಧಿಕಾರಿಗಳ ಮುಂದೆ ಘೋಷಣೆ ನಡೆಯುತ್ತದೆ. ಬೇರೆ ದೇಶದ ಬಗ್ಗೆ ಜೈ ಎಂದು ಇವತ್ತು ಘೋಷಣೆ ಬಂದಾಗ ಆ ಅಧಿಕಾರಿಗಳನ್ನು ತಕ್ಷಣ ಸಸ್ಪೆಂಡ್ ಮಾಡಬೇಕು. ಅಂತಹವರನ್ನು ಬೇರೆ ಕಡೆ ವರ್ಗಾವಣೆ ಮಾಡಿದರೆ, ಬೇರೆ ಕಡೆ ಇದನ್ನೇ ಮಾಡುತ್ತಾರೆ. ಹೀಗಾಗಿ ಇದನ್ನು ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಯಾರು ಅಧಿಕಾರಿಗಳು ತಪ್ಪು ಮಾಡಿದ್ದಾರೆ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ಬಹಳ ಆಲೋಚನೆ ಮಾಡಿದ ನಂತರ ಅನೇಕ ಜನ ಶಾಸಕರು ನಮ್ಮ ರಕ್ಷಣೆಗೆ ಸರ್ಕಾರ ಬರಬೇಕು ಎನ್ನುವ ವಿಚಾರ ಅನೇಕ ಸಂದರ್ಭದಲ್ಲಿ ಪತ್ರಿಕೆಯಲ್ಲಿ ಬಂದಿದೆ. ಅನೇಕ ಶಾಸಕರು ನನಗೆ ಅಂಗ ರಕ್ಷಕರ ಅಗತ್ಯ ಇದೆ. ರಕ್ಷಣೆ ಬೇಕು ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈ ಸದನದ ಸದಸ್ಯರಾಗಿ ಯಾವುದೇ ರೀತಿಯ ಬೆದರಿಕೆ ಬಂದತಕ್ಷಣವೇ ನನ್ನ ಗಮನಕ್ಕಾಗಲೀ ಅಥವಾ ಗೃಹಮಂತ್ರಿಗಳ ಗಮನಕ್ಕಾಗಲೀ ತಂದರೆ ಅವರಿಗೆ ತಕ್ಷಣವೇ ಅಂಗ ರಕ್ಷಕರು ಹಾಗೂ ಪೋಲೀಸ್ ಪ್ರೊಟೆಕ್ಷನ್ ಕೊಡುವುದಕ್ಕೆ ನಾವು ಹಿಂಜರಿಯುವುದಿಲ್ಲ. ಆದುದರಿಂದ ತಕ್ಷಣವೇ ನನಗೆ ವರ್ತಮಾನ ನೀಡಬೇಕೆಂದು ಹೇಳಿದ್ದಾರೆ. ಅದಕ್ಕೆ ತಾವು ಸದಸ್ಯರಿಗೆ ಏಕೆ ಕಂಪ್ಲೈಟನ್ನೂ ಕೊಟ್ಟಿಲ್ಲವೆಂದು ಪ್ರಶ್ನೆ ಹಾಕಿದಿರಿ. ಅದಕ್ಕೆ ಅವರು ಸಮಂಜಸ ಉತ್ತರ ಕೊಡಲಿಲ್ಲ. ಆದರೆ ಇನ್ನೊಂದು ವಿಚಾರ ಏನೆಂದರೆ ಈ ದೇಶದ್ರೋಹದ ಕೆಲಸ ಮಾಡುವಂತಹ ಯಾವುದೇ ಜನಾಂಗದ ಒಬ್ಬ ವ್ಯಕ್ತಿ ಇರಬಹುದು. ಅವನು ಯಾವುದೇ ಜನಾಂಗಕ್ಕೆ, ಜಾತಿಗೆ ಸೇರಿರುವಂತಹ ವ್ಯಕ್ತಿಯಿರಬಹುದು ದೇಶ ದ್ರೋಹ ಮಾಡಿದಂತಹ ಅವನನ್ನು ಕೊಲ್ಲಬೇಕೇ ವಿನಃ ಅವನಿಗೆ ಯಾವುದೇ ರೀತಿಯಲ್ಲಿ ಸಮಾಧಾನ ಮಾಡುವುದಲ್ಲ. ನಡೆಯುವಂತಹ ವಿಚಾರ ಒಂದು, ಆಳುವಂತಹ ವಿಚಾರ ಒಂದು, ಆಗಬಾರದು. ನನಗೂ ಅಷ್ಟೇ ಜವಾಬ್ದಾರಿ ಇದೆ. ಮಾನ್ಯ ಶಾಸಕರಿಗೂ ಅಷ್ಟೇ ಜವಾಬ್ದಾರಿ ಇದೆ. ಒಂದು ಮಸೀದಿ ಆವರಣದಲ್ಲಿ ಯಾವುದೇ ಒಂದು ರಾಷ್ಟ್ರದ ಬಗ್ಗೆ ಜೈಕಾರ ಹಾಕುತ್ತಾರೆ ಎನ್ನುವ ವಿಚಾರ ಹೇಳಿದ್ದಾರೆ. ತಮಗೂ ಒಂದು ಜವಾಬ್ದಾರಿ ಇದೆ. ತಾವೂ ಕೂಡ ಈ ದೇಶದ ನಾಗರೀಕರು. ಈ ದೇಶದ ಉತ್ತಮ ಪ್ರಜೆ ನೀವು. ತಕ್ಷಣವೆ ತಾವು ಏನು ಮಾಡಬೇಕೆಂದರೆ ಅಧಿಕಾರಿಗಳು ಸ್ವತಃ ಒಪ್ಪುತ್ತಾರೆ ಎಂದು ಹೇಳಿದಿರಿ. ಆ ಅಧಿಕಾರಿಯ ಕರ್ತವ್ಯ ಏನೆಂದರೆ ತಕ್ಷಣವೇ ಅವರನ್ನು ಬಂಧಿಸಬೇಕಾಗಿತ್ತು. ಹಾಗೂ ಮಹಜರು ಮಾಡಿಸಬೇಕಾಗಿತ್ತು. ಆಡಿರುವಂತಹ ಮಾತುಗಳು ಯಾವುದು ಎಂದು ದಾಖಲಾತಿ ಮಾಡಬೇಕಾಗಿರುವುದು ಏನಿದೆ ಅದ್ಯಾವುದನ್ನೂ ಮಾಡಿಲ್ಲ. ಇವರು ಏನು ಹೇಳಿದರು ಎಂದರೆ ಮಸೀದಿಯಲ್ಲಿ ಕೂಗಿದರು. ಆಗ ಅಲ್ಲಿದ್ದಂತಹ ಅಲ್ಪಸಂಖ್ಯಾತರ ಕೋಮಿಗೆ ಸೇರಿದಂತಹ ಒಬ್ಬರು ಇನ್ಸ್‌ಪೆಕ್ಟರ್ ಸಹ ಆ ಮಾತನ್ನು ಒಪ್ಪುತ್ತಾರೆ. ಆ ಅಧಿಕಾರಿಯನ್ನು ವರ್ಗಾವಣೆ ಮಾಡುವುದು ಸರಿಯೇ ಇಲ್ಲವೇ ಎಂದು ಪ್ರಶ್ನೆ ಮಾಡುವುದರ ಬದಲಾಗಿ, ತಾವು ಜವಾಬ್ದಾರಿ ಹೊತ್ತಿರುವಂತಹ ಶಾಸಕನಾಗಿ, ಬದ್ಧತೆಯ ಬಗ್ಗೆ ತಮಗೆ ಎಷ್ಟೆಲ್ಲಾ ಆಸಕ್ತಿ ಇದೆ, ಅಷ್ಟೇ ನನಗೆ ಸಂತೋಷವಾಗುತ್ತದೆ. ಆದುದರಿಂದ ತಾವು ತೆಗೆದುಕೊಳ್ಳಬೇಕಾದಂತಹ ಕಾನೂನಿನ ಕ್ರಮವನ್ನು ತೆಗೆದುಕೊಳ್ಳದೆ ಇರುವಂಥಾದ್ದು ಏನು ಕಾರಣ ಎಂದು ವಿವರವಾದಂತಹ ವಿಚಾರ ಈ ಸದನಕ್ಕೆ ಹೇಳಿದರೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ, ಅಂತಹ ದ್ರೋಹಿಯ ವಿರುದ್ಧ ಕೆಲಸ ಮಾಡುತ್ತದೆ. ಸರ್ಕಾರ ಯಾವತ್ತೂ ರಕ್ಷಣೆ ಕೊಡುವುದಕ್ಕೆ ಹೋಗುವುದಿಲ್ಲ. ಅವರನ್ನು ಬಲಿ ತೆಗೆದುಕೊಳ್ಳುವಂತಹ ವಿಚಾರಕ್ಕೆ ಮುಂದಾಗುತ್ತದೆ. ಅವರಿಗೆ ಕಾನೂನಿನ ಕ್ರಮ ಜರುಗಿಸುವುದಕ್ಕೆ ಯಾವತ್ತೂ ಸರ್ಕಾರ ಹಿಂಜರಿಯುವುದಿಲ್ಲವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಛೇರ್ಮನ್ : ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದರು. ಯಾವುದೇ ವಿಚಾರ ಇರಲಿ, ಇವತ್ತು ಅಲ್ಲಿದ್ದ ಜನರಿಗೆ, ಅಧಿಕಾರಿಗಳಿಗೆ ಹಾಗೂ ಪೋಲೀಸರಿಗೆ ಎಲ್ಲರಿಗೂ ಗೊತ್ತಿದೆ. ಶಾಸಕರ ಬಗ್ಗೆ ಹಾಗೂ ಸ್ಲೋಗನ್ ಏನು ಹೇಳಿದರು ಎನ್ನುವುದು

ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಶಾಸಕರು ಅವರ ಬಗ್ಗೆನೇ ಅವರ ಪ್ರಾಣ ಭಯದ ಬಗ್ಗೆ ಪತ್ರ ಬಂದಿದೆ ಎಂದಮೇಲೆ ನಿಮ್ಮ ಮೊದಲನೆ ಕರ್ತವ್ಯ, ಅದನ್ನು ಮೇಲಾಧಿಕಾರಿಗಳ ಗಮನಕ್ಕೆ ತರಬೇಕು. ಏಕೆಂದರೆ ಶಾಸಕರ ರಕ್ಷಣೆಯನ್ನು ಸದನ ಹಾಗೂ ಸರ್ಕಾರ ಮಾಡಬೇಕಾಗುತ್ತದೆ. ಶಾಸಕರು ಯಾರೇ ಇರಲಿ, ಶಾಸಕರಿಂದ ಪುಕಾರು ಬರಲಿಲ್ಲವೆಂದರೆ ಅಲ್ಲಿ ಬರತಕ್ಕಂಥ ಎಫ್‌ಐಆರ್ ಇತ್ಯಾದಿಗಳು ಪೊಲೀಸ್ ಇಲಾಖೆಯಲ್ಲಿ ಏನು ಬರುತ್ತದೆ ಅದರ ಆಧಾರದ ಮೇಲೆ ಶಾಸಕರಿಗೆ ರಕ್ಷಣೆ ಕೊಡುವುದಕ್ಕೆ ಬರುವುದಿಲ್ಲ. ಶಾಸಕರಿಗೆ ಪ್ರಾಣ ಭಯ ಇದೆ ಎನ್ನುವುದು ಶಾಸಕರಿಂದ ಬರಬೇಕು ಎನ್ನುವುದು ನನ್ನ ಅಭಿಪ್ರಾಯ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ನಾನು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಅಲ್ಲಿ ಎಸ್‌ಪಿ ಹಾಗೂ ಡಿವೈಎಸ್‌ಪಿ ಯವರು ಎಲ್ಲಾ ಇದ್ದರು. ಇಂಥಿಂತಹ ಕ್ರಮ ತೆಗೆದುಕೊಂಡಿದ್ದೇವೆ ಹಾಗೂ ಕೇಸ್ ರಿಜಿಸ್ಟರ್ ಮಾಡಿದ್ದೇವೆ ಎನ್ನುವ ವಿಚಾರವನ್ನು ಹೇಳಿದರು. ನಾನು ಮೊನ್ನೆ ವಿಧಾನ ಸಭೆಯಲ್ಲಿ ಈ ವಿಚಾರವನ್ನು ಕರೀಂಲಾಲ್ ಪ್ರಕರಣ ಇದ್ದಿದ್ದರಿಂದ ಪ್ರಸ್ತಾಪ ಮಾಡುವುದಕ್ಕಾಗಲಿಲ್ಲ. ಆದುದರಿಂದ ಅದನ್ನು ನಾನು ನಮ್ಮ ಸಭಾಧ್ಯಕ್ಷರಿಗೆ ಕೂಡ ಹೇಳಿದ್ದೇನೆ. ಪತ್ರ ಕೂಡ ಕೊಟ್ಟಿದ್ದೇನೆ. ಮಾನ್ಯ ಸಗೀರ್ ಅಹಮದ್ ಅವರು ಹೇಳುವಂತಹ ವಿಚಾರ ಬಹಳ ಒಳ್ಳೆಯದಿದೆ. ನೀವು ಸರಿಯಾಗಿ ಅರ್ಥ ಮಾಡಿಕೊಂಡಿದ್ದೀರಿ. ಡಿವೈಎಸ್‌ಪಿ ಎದುರುಗಡೆನೇ ಪಾಕಿಸ್ತಾನಕ್ಕೆ ಜಿಂದಾಬಾದ್ ಎಂದು ಕೂಗಿದ್ದಾರೆ. ಅದನ್ನು ಡಿವೈಎಸ್‌ಪಿ ಯವರು ಕೂಡ ಒಪ್ಪಿಕೊಳ್ಳುತ್ತಾರೆ. ಆ DYSP ಅನ್ನು ಯಾರೋ ಒಬ್ಬ ಶಾಸಕರು ನಮ್ಮ ಕೊಡಗಿನಿಂದ ಹೋಗಿ ಬೇರೆ ಕ್ಷೇತ್ರದಲ್ಲಿ ನಿಂತ ಶಾಸಕರು ವರ್ಗಾವಣೆ ಮಾಡಿ ಎಂದು ಒತ್ತಡ ತಂದು ಅವರನ್ನು ವರ್ಗಾವಣೆ ಮಾಡುತ್ತಾರೆ. ಅದು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಿಗೂ ಕೂಡ ಗೊತ್ತಿದೆ. ಹೀಗಾಗಿದೆ ಎಂದು ಅವರೂ ಕೂಡ ಹೇಳುತ್ತಾರೋ ಗೊತ್ತಿಲ್ಲ. ಅಲ್ಲಿಯ ಮಂತ್ರಿಗಳಿಗೂ ಕೂಡ ಗೊತ್ತಿದೆ. ಮಾಜಿ ಉಸ್ತುವಾರಿ ಮಂತ್ರಿಗಳಿಗೂ ಕೂಡ ಗೊತ್ತಿದೆ. ಮಾನ್ಯ ನಾಣಯ್ಯನವರಿಗೆ ಗೊತ್ತಿದೆ. ಏಕೆ ಹೀಗೆ ಮಾಡಿದರು? ಯಾರು ಹೀಗೆ ಮಾಡಿದರು? ಯಾವ ಕ್ಷೇತ್ರದ ಶಾಸಕರು ಅದನ್ನು ಹೇಳಬೇಕೆಂದು ಕೇಳಿದರೆ ನಾನು ಹೇಳುತ್ತೇನೆ. ಇಲ್ಲಿ ಇದೇ ಸದನದ ಶಾಸಕರು....

ಶ್ರೀ ಬಿ.ಎನ್. ಬಚ್ಚೇಗೌಡ : ಶಾಸಕರು ಬಹಳ ಗಂಭೀರವಾಗ ವಿಚಾರ ಹೇಳಿದ್ದಾರೆ. ಸಚಿವರ ಮೇಲೆ ಆರೋಪ. ಅಲ್ಲಿನ ಅಧಿಕಾರಿಗಳು ನಡೆದುಕೊಂಡಂತಹ ರೀತಿ ಇದರ ರಕ್ಷಣೆಗೆ ತಾವು ಬರಬೇಕಾಗುತ್ತದೆ. ಮಾನ್ಯ ನಾಣಯ್ಯನವರು ಹೇಳಬೇಕಾಗುತ್ತದೆ. ಅವರಿಗೆ ವಿಷಯ ಗೊತ್ತಿದೆ. ಮಾನ್ಯ ಸದಸ್ಯರು ಎಲ್ಲಾ ಗೊತ್ತು ಎಂದು ಹೇಳಿದರು. ಅಲ್ಲಿ ಏನು ನಡೆದಿದೆ ಎನ್ನುವುದರ ಬಗ್ಗೆ ತಾವೇ ಕೇಳಿದಿರಿ ಅವರನ್ನು. ಇದನ್ನು ನೀವು ಮೇಲಾಧಿಕಾರಿಗಳಿಗೆ ತಿಳಿಸಬೇಕಾಗಿತ್ತು. ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ತಿಳಿಸಬೇಕಾಗಿತ್ತು ಎಂದು ಹೇಳಿದಿರಿ. ಆದರೆ ಅಲ್ಲಿಯ ಸ್ಥಳೀಯವಾಗಿ ಸಚಿವರೆಲ್ಲರೂ ಇದ್ದು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಸದನಕ್ಕೆ ತಿಳಿಸಬೇಕಾಗುತ್ತದೆ. ಮಾನ್ಯ ಸಗೀರ್ ಅಹಮದ್‌ರವರು ಹೇಳುವ ವರ್ಷನ್ ಬೇರೆ. ಅದು ಇರಲಿ. ಮಾನ್ಯ ಶಾಸಕರು ಏನು ವರ್ಷನ್ ಕೊಡುತ್ತಿದ್ದಾರೆ ಅದು ಬಹಳ ಮುಖ್ಯವಾದುದು.

4.20 ಪಿಎಂ

ಶ್ರೀ ಸಿ.ಆರ್. ಸಗೀರ್ ಅಹಮದ್ : ಇದು ಅಪಾದನೆಯಂತೂ ಅಲ್ಲ, ಅವರು ಏನು ನಡೆಯಿತೆಂಬುದನ್ನು ಹೇಳುತ್ತಿದ್ದಾರೆ, ಅವರು ಏನು ಹೇಳುತ್ತಿದ್ದಾರೆಂದರೆ ಡಿವೈಎಸ್‌ಪಿಯವರ

ಹಾಜರಿಯಲ್ಲಿ ಒಂದು ದೇಶದ ಬಗ್ಗೆ ಜಯ್ ಜಯಕಾರವನ್ನು ಹಾಕಿರುವಂಥಾದ್ದು, ಆ ಸಂದರ್ಭದಲ್ಲಿ ಆ ಡಿವೈಎಸ್‌ಪಿಯನ್ನು ವರ್ಗಾವಣೆಯನ್ನು ಮಾಡುವುದರ ಬಗ್ಗೆ, ಈ ಸದನದ ಒಬ್ಬ ಶಾಸಕರು ಪ್ರಯತ್ನ ಮಾಡಿರುವಂಥಾದ್ದು, ಅಲ್ಲಿ ಅವರು ವರ್ಗಾವಣೆಯಾಗಿರುವಂತಹ ವಿಚಾರ, ಮಾನ್ಯ ನಾಣಯ್ಯನವರಿಗೂ ಸಹ ಗೊತ್ತು ಎಂದು ಹೇಳಿದರು.

ಶ್ರೀ ಬಿ.ಎನ್. ಬಚ್ಚೇಗೌಡ : ಅಂಥವರನ್ನು ಪೋಟೋ ಕಾಯಿದೆಯಡಿಯಲ್ಲಿ ಆ ವ್ಯಕ್ತಿಯನ್ನು ಬಂಧಿಸಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಇಲ್ಲಿ ಸದನದಲ್ಲಿ ಮಾತನಾಡವ ಬದಲಿಗೆ ಅವರ ಬಗ್ಗೆ ಕಟ್ಟುನಿಟ್ಟಾದ ಕಾನೂನಿನ ಕ್ರಮ ಜರುಗಿಸುವಂಥಾದ್ದಕ್ಕೆ ಸರ್ಕಾರ ಹಿಂಜರಿಯುವುದಿಲ್ಲ. ಅದನ್ನೇ ನಾನು ಹೇಳುವಂಥಾದ್ದು.

ಶ್ರೀ ಎಸ್.ಎಸ್. ಪಾಟೀಲ್ : ಅದನ್ನು ಮಾಡಬೇಕಾಗಿತ್ತು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅದನ್ನು ಹೇಳಬೇಕಲ್ಲಾ, ಈಗ ಅದನ್ನು ಇಲ್ಲಿ ಹೇಳುವುದೇ ನಾವು ಹೇಳಿದ್ದೇವೆ. ಈಗ ಇಲ್ಲಿ ಪ್ರಾರಂಭದಲ್ಲಿ ಕೂಡ ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಸ್ವತಃ ಹೇಳಿದ್ದಾರೆ. ಯಾವುದೇ ಶಾಸಕರಿಗೂ ರಕ್ಷಣೆಯನ್ನು ಒದಗಿಸಿಕೊಡುವಂಥಾದ್ದರ ಬಗ್ಗೆ, ಅದು ಯಾವ ಸಂದರ್ಭದಲ್ಲಾದರೂ ನಾವು ರಕ್ಷಣೆ ಒದಗಿಸಿಕೊಡುತ್ತೇವೆಂದು ಬಹಿರಂಗವಾಗಿಯೂ ಹೇಳಿದ್ದೇವೆ. ಈಗ ಆ ವಿಚಾರವನ್ನು ಮಾನ್ಯ ಗೃಹ ಮಂತ್ರಿಯವರಿಗಾಗಲೀ, ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತಂದಿದ್ದಿರಾ? ಎಂಬುದು ಒಂದು ಪ್ರಶ್ನೆ.

ಶ್ರೀ ಎಸ್.ಎಸ್. ಪಾಟೀಲ್ : ಅವರೆಲ್ಲಾ ಗುಂಪು ಕೂಡಿ, ದೇಶದಲ್ಲಿ, ರಾಜ್ಯದಲ್ಲಿ ಕೋಮು ಗಲಭೆಯನ್ನು ಎಬ್ಬಿಸಿ ಬಿಡುತ್ತಾರೆ ಇಷ್ಟರೊಳಗೆ ಸರ್ಕಾರ ಪೋಟೋ ಕಾಯಿದೆಯಡಿಯಲ್ಲಿ ಬಂಧಿಸಬೇಕಾಗಿತ್ತು. ಅದನ್ನು ನಿಮ್ಮ ಸರ್ಕಾರ ಮಾಡಿಲ್ಲ, ಮಾಡುವುದು ಇಲ್ಲ. ಅವರಿಗೆ ನೀವು ರಕ್ಷಣೆಯನ್ನು ಕೊಡುತ್ತೀರಿ, ಏಕೆಂದರೆ ಚುನಾವಣೆ ಬಂದಿದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಅಲ್ಲಿದ್ದಂತಹ ಅಲ್ಪಸಂಖ್ಯಾತರ ಬಗ್ಗೆ ಡಿ.ವೈಎಸ್‌ಪಿಯವರು ಬಹಳಷ್ಟು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವರು ಕೇಸ್ ಅನ್ನು ಹಾಕಿ ದಾಖಲೆ ಮಾಡುವುದಕ್ಕೆ ಬಿಟ್ಟಿಲ್ಲ. ಅವರನ್ನು ವರ್ಗಾವಣೆ ಮಾಡಿ ಬಿಟ್ಟರು. ಅವರು ಇರಬೇಕೆಂದು ನಾವು ಹೇಳಿದರೆ, ಅವರನ್ನು ವರ್ಗಾವಣೆ ಮಾಡಿದರು. ಹಾಗೆ ಆದರೆ ನಾವು ಇಲ್ಲಿ ಸದನದ ಒಬ್ಬ ಸದಸ್ಯರ ಮೇಲೆ ಪೋಟೋ ಕಾಯಿದೆ ಹಾಕಬೇಕಾಗುತ್ತದೆ. ಇಲ್ಲಿಯ ಶಾಸಕರೇ, ರೆಕಮೆಂಡ್ ಮಾಡಿರುವಂಥಾದ್ದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಇವರೇ ಶಾಸಕರಾಗಿ, ಇವರೇ ಒಂದು ಮೊಕದ್ದಮೆಯನ್ನು ಹೂಡಬಹುದಾಗಿತ್ತು. ಆ ರೀತಿ ಮಾಡದೇ ಇರುವಂಥಾದ್ದಕ್ಕೆ ಕಾರಣ ಏನು? ಈಗ ಆ ಪ್ರಶ್ನೆ ಇಲ್ಲಿ ಇರುವಂಥಾದ್ದು,

ಛೇರ್ಮನ್ : ಈಗ ಮಾನ್ಯ ಸದಸ್ಯರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಈಗ ಏನಾಯಿತು. ಹೇಗೆ ಮಾಡಬೇಕಾಗಿತ್ತು. ಎಂಬ ಬಗ್ಗೆ ಚರ್ಚೆ ಬೇಡ. ಇವತ್ತು ಸದಸ್ಯರು ಒಂದು ಗಂಭೀರವಾದಂತಹ ಆಪಾದನೆಯನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಇದರ ಬಗ್ಗೆ

ಗಮನ ಕೊಡಬೇಕು. ಮತ್ತೆ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ. ಅದಕ್ಕೆ ನನಗೆ ತಿಳಿದಮಟ್ಟಿಗೆ ಈ ಸದನದ ಸದಸ್ಯನಾಗಿ ನನ್ನ ಕ್ಷೇತ್ರದಲ್ಲಿ ಒಬ್ಬ ಪೊಲೀಸ್ ಇನ್‌ಸ್ಪೆಕ್ಟರ್ ಅನ್ನು ವರ್ಗ ಮಾಡಬೇಕೆಂದು ಇದ್ದರೆ, ಅಲ್ಲಿ ಆ ಕ್ಷೇತ್ರದ ಶಾಸಕರಾಗಿರಬೇಕು. ಬೇರೆ ಕ್ಷೇತ್ರದ ಶಾಸಕರು ಕೈ ಹಾಕುವಂತಿಲ್ಲ. ಇದು ನನ್ನ ಅನುಭವ ಇರುವಂಥಾದ್ದು, ಬೇರೆಯವರಿಗೆ ಏನು ಇದೆಯೋ, ಅದು ನನಗೆ ಗೊತ್ತಿಲ್ಲ. ಇಲ್ಲಿ ಕೊಡಗಿನ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಸೇರಿ ಮೂರು ಜನರಿದ್ದಾರೆ. ಈಗ ಇಬ್ಬರೂ ಮಂತ್ರಿಗಳು ಇದ್ದಾರೆ. ಈ ಘಟನೆ ನಡೆದಂತಹ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿಗಳ ಗಮನಕ್ಕೆ ಬಾರದೇ, ಅವರ ಕೈ ಕೆಳಗೆ ಕೆಲಸ ಮಾಡುವಂತಹ ಒಬ್ಬ ಅಧಿಕಾರಿಯನ್ನು ವರ್ಗಮಾಡಿದ್ದಾರೆಂದರೆ ಇದು ನಂಬುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ವಿಚಾರ ಜಿಲ್ಲಾ ಉಸ್ತುವಾರಿ ಮಂತ್ರಿಗಳ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಈಗ ಆಗಿ ಹೋಗಿರುವಂಥಾದ್ದು ಬಿಡಿ, ಮುಂದೆ ಅದರ ಬಗ್ಗೆ ಕಠಿಣವಾದಂತಹ ಕ್ರಮ ತೆಗೆದುಕೊಳ್ಳುವಂಥಾದ್ದಕ್ಕೆ ಸರ್ಕಾರ ಸಿದ್ಧವಾಗಬೇಕು.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಛೇರ್ಮನರವರೇ, ಅಲ್ಲಿನ ಉಸ್ತುವಾರಿ ಮಂತ್ರಿಯವರ ಗಮನಕ್ಕೂ ಈ ವಿಚಾರ ಬಂದಿದೆ. ನಾನು ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಪತ್ರವನ್ನು ಕೊಟ್ಟಿದ್ದರೆ ಹೆಸರು ಹೇಳುತ್ತಿದ್ದೆ ಕೊಡಗಿನಿಂದ ಹೋಗಿ ವಿಟ್ಲದಲ್ಲಿ ನಿಂತಿದ್ದಾರೆ. ಶಾಸಕರಾಗಿ ಆಯ್ಕೆಯಾಗಿ ಬಂದಿದ್ದಾರೆ. ಅವರ ಹೆಸರನ್ನು ಹೇಳುವುದಿಲ್ಲ.

ಛೇರ್ಮನ್ : ಈಗ ಯಾರನ್ನು ಯಾವ ಕಾಯಿದೆ ಮೇಲೆ ಬಂಧಿಸಬೇಕೆಂದು ಸರ್ಕಾರದವರು ಮಾಡುತ್ತಾರೆ, ನೀವು ಆ ಕಾಯಿದೆಯನ್ನು ಅವರಿಗೆ ಹೇಳುವುದಕ್ಕೆ ಹೋದರೆ ಹೇಗೆ?

ಶ್ರೀ ಎಂ.ಪಿ ಅಪ್ಪಚ್ಚು ರಂಜನ್ : ಮಾನ್ಯ ಛೇರ್ಮನ್‌ರವರೇ, ನಮ್ಮ ಕೊಡಗು ಜಿಲ್ಲೆಯಿಂದ ಹೋಗಿ ವಿಟ್ಲ ಕ್ಷೇತ್ರದಲ್ಲಿ ನಿಂತು ಚುನಾವಣೆಯಲ್ಲಿ ಗೆದ್ದು ಶಾಸಕರಾಗಿ ಬಂದಿದ್ದಾರೆ. ಈ ಶಾಸಕರು ನಡೆಸುವಂತಹ ಕಿತಾಪತಿ, ಇದು. ಈ ವಿಚಾರವನ್ನು ಮಾಜಿ ಉಸ್ತುವಾರಿ ಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇನೆ. ಅಲ್ಲಿನ ಡಿವೈಎಸ್‌ಪಿಯವರು ಕೂಡ ನೇರವಾಗಿ ಹೇಳಿದರು. ಕೂಗಿದ್ದು ನಿಜ, ಆದರೆ ಕೇಸ್ ಹಾಕುವುದಕ್ಕೆ ಬಿಡುತ್ತಾ ಇಲ್ಲ. ನಮ್ಮ ಬುಡವನ್ನೇ ಅಲ್ಲಾಡಿಸುತ್ತಿದ್ದಾರೆ. ನನ್ನನ್ನೇ ವರ್ಗಾವಣೆ ಮಾಡುತ್ತಿದ್ದಾರೆಂದು ಹೇಳಿದರು. ಅವರನ್ನು ವರ್ಗಾವಣೆ ಮಾಡಿದ್ದು ಆಯಿತು. ಈ ರೀತಿ ಆದರೆ ನಾವು ಯಾವ ಖಾತರಿಯನ್ನು ಕೇಳಿದರೂ ನಮಗೆ ಕೊಡುವುದಿಲ್ಲ.

ಛೇರ್ಮನ್ : ಮಾನ್ಯ ಕಾನೂನು ಮಂತ್ರಿಯವರು ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಶಾಸಕರು ಒಂದು ಗುರುತರವಾದಂತಹ ಆಪಾದನೆಯನ್ನು ಮಾಡಿದ್ದಾರೆ. ಆ ಆಪಾದನೆ ಸತ್ಯವೇಂದು ಆದರೆ, ಈ ಶಾಸನ ಸಭೆಯ ಎಲ್ಲಾ ಶಾಸಕರು ಅದರ ಬಗ್ಗೆ ಚಿಂತನೆ ಮಾಡಬೇಕಾಗಿದೆ ಇವತ್ತು ಮಾನ್ಯ ಸದಸ್ಯರು ಏನು ನೇರವಾಗಿ ಆಪಾದನೆಯ್ನನು ಮಾಡುತ್ತಿದ್ದಾರೆ. ಇದು ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಯವರಿಗೂ ಗೊತ್ತು, ಮತ್ತೆ ಅಲ್ಲಿನ ಡಿವೈಎಸ್‌ಪಿ ಎದುರಿಗೆ ಕೂಗಿದ್ದಾರೆ, ಇವರು ಚಾರ್ಜ್‌ಶೀಟ್ ಹಾಕುವುದಕ್ಕೆ ಮೊದಲೇ ಅವರನ್ನು ವರ್ಗ ಮಾಡಿದ್ದಾರೆ, ಇವೆಲ್ಲಾ ಅಪಾದನೆಯನ್ನು ಮಾಡಿದ್ದಾರೆ. ಇದರ ಬಗ್ಗೆ ಸರಿಯಾದಂತಹ ಕ್ರಮವನ್ನು ತೆಗೆದುಕೊಂಡು, ಆ ಅಧಿಕಾರಿ ಯಾರು? ಅವರನ್ನು ಕರೆಸಿ, ಸೂಕ್ತವಾದಂತಹ ಕ್ರಮವನ್ನು ತೆಗೆದುಕೊಳ್ಳುವಂಥಾದ್ದು, ಈ ಹಿಂದೆ ಕೊಡಗಿನಲ್ಲಿ ತಮಗೆ ಗೊತ್ತಿದೆ ಎರಡು, ಮೂರು ಸಲ ದೊಡ್ಡ ಗೊಂದಗಳು ಆಗಿವೆ. ಮೊನ್ನೆ ಮೊನ್ನೆ ಕೂಡ

ಗೊಂದಲವಾಗಿದೆ. ಕೊಡಗು ತುಂಬಾ ಚಿಕ್ಕ ಜಿಲ್ಲೆ. ಅಲ್ಲಿರುವ ಜನರು ಶಾಂತಪ್ರಿಯರು, ಈ ರೀತಿಯ ಗೊಂದಲಗಳು ಆದಾಗ ಅಲ್ಲಿ ಏನಾಗುತ್ತದೆಯೋ, ಗೊತ್ತಾಗುವುದಿಲ್ಲ. ಆದುದರಿಂದ ಈ ವಿಷಯದ ಬಗ್ಗೆ ಸರ್ಕಾರ ತಕ್ಷಣ ಗಮನ ಹರಿಸಿ, ಅದ್ದರ ಬಗ್ಗೆ ವಿಶೇಷವಾದಂತಹ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ಸಚಿವರು) : ಮಾನ್ಯ ಛೇರ್ಮನ್‌ರವರೆ, ಮಾನ್ಯ ಸದಸ್ಯರು ಈ ವಿಷಯವನ್ನು ಶಾಸನಸಭೆಯಲ್ಲಿ ಮಾತನಾಡುವುದನ್ನೂ ಬಿಟ್ಟರೆ, ಇವರು ಸರ್ಕಾರಕ್ಕೆ ಪತ್ರವನ್ನು ಬರೆದಿರುವುದಾಗಲೀ ಅವರೇ ಒಂದು ಕೇಸನ್ನು ದಾಖಲು ಮಾಡುವುದಾಗಲೀ, ಅಥವಾ ಸಂಬಂಧಪಟ್ಟ ಮಂತ್ರಿಯವರಿಗೆ ತಿಳಿಸುವುದಾಗಲೀ, ಗೃಹ ಮಂತ್ರಿಯವರಿಗಾಗಲೀ, ಮಾನ್ಯ ಮುಖ್ಯಮಂತ್ರಿಯವರಿಗಾಗಲೀ ಪತ್ರವನ್ನು ಬರೆದಿರುವಂಥಾದ್ದು, ಇಲ್ಲ. ಇವರು ನೇರವಾಗಿ ಶಾಸನ ಸಭೆಯಲ್ಲಿ ಆಪಾದನೆಯನ್ನು ಮಾಡಿದ್ದಾರೆ. ಇಲ್ಲಿ ಅವರು ನಿಮ್ಮ ಗಮನವನ್ನು ಸೆಳೆದಿದ್ದಾರೆ. ತಾವು ನಮ್ಮ ಗಮನಕ್ಕೆ ತಂದಿದ್ದೀರಿ, ಆದುದರಿಂದ ಈ ವಿಷಯವನ್ನು ಪರಿಶೀಲನೆ ಮಾಡೋಣ.

ಛೇರ್ಮನ್ : ಮಾನ್ಯ ಚಂದ್ರೇಗೌಡರೆ, ನಾನು ಮೊದಲೇ ಅವರನ್ನು ಕೇಳಿದೆ, ನೀವು ಏನಾದರೂ ತಕ್ಷಣ ಕಂಪ್ಲೇಂಟ್ ಕೊಟ್ಟಿದ್ದಿರಾ ಎಂದು ಅವರನ್ನು ಕೇಳಿದೆ.ಅವರು ದೂರು ಕೊಟ್ಟಿಲ್ಲ. ಈ ರೀತಿ ಸೂರು ಕೊಟ್ಟಿಲ್ಲದೇ ಇರುವುದನ್ನು ಭಾರಿ ತಪ್ಪು ಎಂದು ಯೋಚನೆ ಮಾಡುವುದಕ್ಕೆ ಮೊದಲು, ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಅದರ ಆಧಾರದ ಮೇಲೆ ಇವತ್ತು ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಛೇರ್ಮನ್‌ರವರೆ, ಆ ಕಾಲ ಕಾಲಕ್ಕೆ ತಕ್ಕಹಾಗೆ ಸಂಬಂಧಪಟ್ಟವರ ಗಮನಕ್ಕೆ ತರದೇ, ಶಾಸನ ಸಭೆಯಲ್ಲಿ ಚರ್ಚೆ ಮಾಡುವಂಥಾದ್ದು, ಇದು ನಾವು ರಾಜ್ಯವನ್ನು ನಡೆಸುವಂತಹ ಕ್ರಮವಲ್ಲ. ಶಾಸನಸಭೆಯ ಸದಸ್ಯರಾಗಿ, ಯಾರು ಏನೇ ಬರೆದರೂ, ಅದಕ್ಕೆ ಉತ್ತರ ಕೊಡುವವರು, ಅದನ್ನು ಪರಿಶೀಲನೆ ಮಾಡುವುದು ಸರ್ಕಾರ ಅದರ ಬದಲು ಶಾಸನ ಸಭೆಯಲ್ಲೇ ಚರ್ಚೆ ಮಾಡುತ್ತಿದ್ದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಛೇರ್ಮನ್‌ರವರೇ, ಮಾನ್ಯ ಡಿ.ಬಿ. ಚಂದ್ರೇಗೌಡರು ಬಹಳ ಟೆಕ್ನಿಕಲ್ ಆಗಿ ಹೊರಟಿದ್ದಾರೆ ಇವತ್ತು ಒಂದು ಘಟನೆ, ಅದು ಯಾವುದೇ ಒಬ್ಬ ಇನ್‌ಸ್ಪೆಕ್ಟರ್‌ರವರಿಗೆ, ಅಥವಾ ಅಧಿಕಾರಿಯ ಗಮನಕ್ಕೆ ಬಂದರೆ, ಅವರು ಮಾಹಿತಿಯನ್ನು ತೆಗೆದುಕೊಂಡರು, ತಕ್ಷಣ ಕ್ರಮ ತೆಗೆದುಕೊಂಡು ಎಫ್‌ಐಆರ್ ಕಳುಹಿಸುವುದಕ್ಕೂ ಅಧಿಕಾರವಿದೆ. ಆ ಪ್ರಕಾರ ನಿಯಮವಿದೆ. ಇವತ್ತು ಯಾರೋ ಒಬ್ಬ ಏನೋ ಆಗಿದ್ದರೆ ಅವನೇ ದೂರು ಕೊಡಬೇಕೆಂದು ಅಲ್ಲ. ಈಗಾಗಲೇ ಈ ವಿಷಯ ಡಿವೈಎಸ್‌ಪಿಯ ಗಮನಕ್ಕೆ ಬಂದಿದೆ. ಫ್ಲಾಗನ್ನು ಸೀಜ್ ಮಾಡಿದ್ದಾರೆ ಎಂದು ಹೇಳಿದ್ದಾರೆ. ಮತ್ತೆ ಒಂದು ವಿಚಾರವೇನೆಂದರೆ ಡಿವೈಎಸ್‌ಪಿ ಯಾರು ಕಲ್‌ಪ್ರಿಟ್ಸ್ ಇದ್ದಾರೆ, ಅವರ ಮೇಲೆ ಎಫ್‌ಐಆರ್ ಮಾಡಿ ಚಾರ್ಜ್‌ಶೀಟನ್ನು ಹಾಕಬೇಕೆಂದರೆ, ಅವರನ್ನು ಅಲ್ಲಿಂದ ವರ್ಗಾವಣೆ ಮಾಡುತ್ತಾರೆ. ಇಲ್ಲಿ ಯಾರು ಆನೆಸ್ಟ್ ಅಧಿಕಾರಿಗಳು ಇರುತ್ತಾರೆ. ಅವರನ್ನು ಕೇಸ್ ಹಾಕಬೇಡಿ ಎಂದು ಹೇಳುತ್ತಾರೆ ಯಾವುದೋ ಒಂದು ಕಾರಣಕ್ಕೆ ಅದಕ್ಕಾಗಿ ಆದುದರಿಂದ ಇದನ್ನು ಸಕಾರ ಇದನ್ನು ಟೆಕ್ನಿಕಲ್ ಆಗಿ ನೋಡಬಾರದು, ಇಲ್ಲಿ ಇವರು ದೂರು ಕೊಡಬೇಕು ಎಂದು ಹೇಳುವುದು, ಇಲ್ಲಿ ಒಬ್ಬ ಅಧಿಕಾರಿಯವರ ಗಮನಕ್ಕೆ ಬಂದಿದ್ದರೂ ಸಹಿತ, ಇಲ್ಲಿ ಆ ಇನ್‌ಸ್ಪೆಕ್ಟರ್

ಅವರೇ ಎಫ್ಐಆರ್ ಅನ್ನು ಮಾಡಬಹುದು. ಈ ಕಾನೂನು ನಿಮಗೂ ಗೊತ್ತಿದೆ. ಆದುದರಿಂದ ಸರ್ಕಾರ ಇದನ್ನು ಟೆಕ್ನಿಕಲ್ ಆಗಿ ಹಾಗೆ ಆಗಲಿಲ್ಲ. ಹೀಗೆ ಆಗಲಿಲ್ಲ. ಎನ್ನದೇ ಇವತ್ತು ಇಲ್ಲಿ ಚರ್ಚೆಯಾಗಿದೆಯಲ್ಲಾ, ತಾವು ಇದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳು ಯಾರಿದ್ದಾರೆ, ವ್ಯಕ್ತಿಗಳು ಯಾರಿದ್ದಾರೆ, ಆ ದೇಶದ್ರೋಹಿಗಳು ಯಾರಿದ್ದಾರೆ, ಅವರ ಮೇಲೆ ಕಾನೂನಿನ ರೀತಿಯಲ್ಲಿ ಕ್ರಮ ತೆಗೆದುಕೊಂಡು ಬಂಧಿಸುವಂತಹ ಕೆಲಸವಾಗಬೇಕು.

ಛೇರ್ಮನ್ : ಅವರು ಸಮಯಕ್ಕೆ ಸರಿಯಾಗಿ ಆಪಾದನೆಯನ್ನು ಮಾಡದೇ ಇದ್ದರೂ, ಇವತ್ತು ಸದನದಲ್ಲಿ ಈ ವಿಷಯ ಚರ್ಚೆಯಾಗಿರುವುದರಿಂದ, ಅದು ಆಪಾದನೆಯಾಗಿದೆ.

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) : ಮಾನ್ಯ ಛೇರ್ಮನ್‌ರವರೆ, ಮಾನ್ಯ ಅಪ್ಪಚ್ಚುರಂಜನ್‌ರವರು ಏನು ಅಪಾದನೆಯನ್ನು ಮಾಡಿದ್ದಾರೆ, ಇದರ ಬಗ್ಗೆ ಇಲ್ಲಿ ಮಾತನಾಡಿದ್ದು ಅಪ್ರಸ್ತುತವೆಂದು ಹೇಳುತ್ತೇನೆ. ಇಲ್ಲಿ ಏನಾಗಿದೆ ಎಂದರೆ ನಾನು ಉಸ್ತುವಾರಿ ಸಚಿವನಾಗಿ ಅಲ್ಲಿರಲಿಲ್ಲ. ನನ್ನ ಗೈರು ಹಾಜರಿಯಲ್ಲಿ ಅಪ್ಪಚ್ಚುರಂಜನ್‌ರವರು ಅವರ ಕ್ಷೇತ್ರಕ್ಕೆ ಹೋದಾಗ, ಈ ಘಟನೆ ನಡೆದಾಗ ಅಲ್ಲಿನ ಪೊಲೀಸ್ ಅಧಿಕಾರಿಗಳೆಲ್ಲಾ ಸೇರಿ, ಅಲ್ಲೆ ರಾಜೀ ಪಂಚಾಯತಿಯನ್ನು ಮಾಡಿ, ಎಲ್ಲವನ್ನೂ ಸೆಟಲ್ ಮಾಡಿ ಹೊರಗಡೆ ಬಂದಿದ್ದಾರೆ. ಆನಂತರ ಡಿವೈಎಸ್‌ಪಿಯವರ ಟ್ರಾನ್ಸ್‌ಫರ್ ಆಗಿದೆಯೆಂದು ಹೇಳುತ್ತಾರೆ. ಅದು ನಮ್ಮ ಗಮನಕ್ಕೆ ತಂದು ಆಡಳಿತ ದೃಷ್ಟಿಯಿಂದ ವರ್ಗಾವಣೆ ಮಾಡಿದ್ದಾರೆ. ಟ್ರಾನ್ಸ್‌ಫರ್ ಕೆಲವು ಇನ್‌ಸ್ಪೆಕ್ಟರ್‌ಗಳಿಗೆ ಪ್ರಮೋಷನ್ ಕೊಡುವಾಗ ಇವರಿಗೆ ಹೊಸದಾಗಿ ಪೋಸ್ಟಿಂಗ್ ಕೊಡುವಾಗ ಅವರನ್ನು ಅಲ್ಲಿಂದ ವರ್ಗಾವಣೆ ಮಾಡಿ ಬೇರೆ ಕಡೆ ಹಾಕಿದ್ದಾರೆ. ಆ ಘಟನೆಗೂ ಈ ವರ್ಗಾವಣೆಗೂ ಯಾವುದೇ ಸಂಬಂಧವಿಲ್ಲ. ಈಗ ಮಾನ್ಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಮಾನ್ಯ ಸಗೀರ್ ಅಹಮದ್‌ರವರು ಹೇಳಿದಹಾಗೆ ಸರ್ಕಾರ ಕೂಡ ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡುತ್ತದೆ. ಪರಿಹಾರವನ್ನು ಕೊಡುತ್ತದೆ. ಮತ್ತೆ ಶಾಸಕರಿಗೆ ಏನು ಭಯ, ಭೀತಿಯ್ನನು ಹುಟ್ಟಿಸಿದ್ದಾರೆ, ಅದರ ಬಗ್ಗೆಯೂ ಸರ್ಕಾರ ಅವರಿಗೆ ಸೂಕ್ತ ರಕ್ಷಣೆಯನ್ನು ಕೊಡುವ ಬದ್ಧತೆಯಿದೆ. ಒಂದು ಸಲ ರಾಜೀ ಪಂಚಾಯತಿಯನ್ನು ನಡೆಸಿ, ಈ ಶಾಂತಿ ಸಭೆ ನಡೆಸಿ, ಸೆಟಲ್ ಆದಮೇಲೆ, ಮಾತುಕತೆಯಾಗಿ, ಆ ಗೋಜಿನಲ್ಲಿ ಗೊಂದಲದಲ್ಲಿ, ಏಕೆಂದರೆ It was a commotion ಯಾರಿಗೆ ಏನು ಆಗಿದೆ, ಎಂಬುದು ಗೊತ್ತಿಲ್ಲ. ಯಾರು ಹೇಳಿದರೋ ಗೊತ್ತಿಲ್ಲ. ಅದನ್ನು ಹಿಂದೂಗಳು ಹೇಳಿದ್ದಾರೋ, ಮುಸ್ಲಿಂ ಹೇಳಿದರೋ, ಜೈನರು ಹೇಳಿದರೋ ಸಿಕ್ ಹೇಳಿದರೋ, ಯಾರು ಹೇಳಿದ್ದಾರೆಂಬುದು ಯಾರಿಗೂ ಕೂಡ ಗೊತ್ತಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಛೇರ್ಮನ್‌ರವರೇ, ಈ ವಿಷಯದ ಬಗ್ಗೆ ತಪ್ಪು ಮಾಹಿತಿ ಹೋಗಬಾರದು, ಇದು ನಡೆದಿರುವಂಥಾದ್ದು ರಾತ್ರಿ, ಒಂದು ಅಲ್ಪ ಸಂಖ್ಯಾತರಿಗೆ ಸಂಬಂಧಪಟ್ಟಂತಹ ಹೋಟೆಲ್ ಆಗಿದೆ ಆ ಹೋಟೆಲ್‌ನಲ್ಲಿ ದೋಸೆ ರುಬ್ಬುವವನು, ರುಬ್ಬುವಾಗ ಶಬ್ದ ಬರುತ್ತದೆಂದು ಹೇಳಿ, ಮಸೀದಿಗೆ ಸಂಬಂಧಪಟ್ಟಂಹ ಅಧ್ಯಕ್ಷರು ಬಂದು ಇವರಿಗೆ ಜೋರು ಮಾಡಿ, ಆ ಹೋಟೇಲ್‌ನ ಮಾಲಿಕರನ್ನು ಕರೆಸಿ...........

ಛೇರ್ಮನ್ : ದಯವಿಟ್ಟು ಇದರ ಬಗ್ಗೆ ಹೆಚ್ಚಿನ ಚರ್ಚೆ ಬೇಡ ಇದು ಸರ್ಕಾರದ ಗಮನಕ್ಕೆ ಬಂದಿದೆ, ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಬಿಟ್ಟು ಇಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ದಯವಿಟ್ಟು ಚರ್ಚೆ ಬೇಡ.

ಶ್ರೀ ಎಂ.ಎಂ. ನಾಣಯ್ಯ : ಇದು ಒಂದು ಸೆಟಲ್ಡ್ ಇಷ್ಯೂ. ಇದನ್ನು ಪುನಃ ಕೆದಕಿ ತೆಗೆಯಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಇಲ್ಲ, ಇಲ್ಲ, ಯಾವುದೇ ಕಾಂಪ್ರಮೈಸ್ ಆಗಿಲ್ಲ. ಅಲ್ಲಿ ಕೇಸ್ ಕೂಡ ದಾಖಲೆ ಮಾಡಿಲ್ಲ. ಕೇಸ್ ದಾಖಲೆ ಮಾಡುವುದಕ್ಕೆ ಮುಂಚೆ ಅವರನ್ನು ವರ್ಗಾವಣೆ ಮಾಡಿದರು. ಇದು ಸೆಟಲ್ ಆಗಿಲ್ಲ, ಮಾತುಕತೇನೂ ಮಾಡಿಲ್ಲ. ಏನೂ ಮಾಡಿಲ್ಲ. ಈ ವಿಚಾರದಲ್ಲಿ ಯಾವುದೇ ಕಂಪ್ಲೇಂಟ್ ದಾಖಲೆ ಮಾಡಲಿಲ್ಲ. ನಾನು ಹೇಳುತ್ತಿರುವುದು ಪಾಕಿಸ್ಥಾನಕ್ಕೆ ಜಿಂದಾಬಾದ್ ಎಂದು ಕೂಗಿದ ವಿಚಾರ. ಮೊನ್ನೆ ಲಕೋಟೆಯಲ್ಲಿ ಬಂದಿದ್ದು, ನಾಲ್ಕು ಫ್ಲ್ಯಾಗ್, ಇದು 12 ವರ್ಷದ ಹಿಂದೆ ಒಂದು ಸಾರಿ ಪಾಕಿಸ್ಥಾನದ ಫ್ಲ್ಯಾಗ್ ಹಾಕಿದ್ದರು ಈವತ್ತು ಆ ಕೇಸ್ ಮೈಸೂರಿನಲ್ಲಿ ನಡೆಯುತ್ತಿದೆ, ಈ ವಿಚಾರದಲ್ಲಿ ನನ್ನ ಜೊತೆಗೆ ಇನ್ನೂ ನಾಲ್ಕು ಜನರನ್ನು ಕೊಲ್ಲುತ್ತೇವೆ. ಎಂದು ಲೆಟರ್‌ನಲ್ಲಿ ಬರೆದಿದ್ದಾರೆ. ಅವರು ಕಂಪ್ಲೇಂಟ್ ಕೊಟ್ಟಿದ್ದಾರೆ. ಕೇಸ್ ರಿಜಿಸ್ಟರ್ ಆಗಿದೆ. ಇದು ಬೇರೆ ವಿಚಾರ, ಆದರೆ ಇದು ಸತತವಾಗಿ ನಡೆಯುತ್ತಿದೆ. ಎಂಬುದಕ್ಕೆ ನಾನು ಈ ಉದಾಹರಣೆ ಹೇಳಿದೆ.

ಚೇರ್ಮನ್ : ನೀವು ಈಗ ಸದನದಲ್ಲಿ ಹೇಳಿದ್ದೀರಿ, ಸರ್ಕಾರ ಗಮನಿಸಿದೆ. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂಥ ವ್ಯವಸ್ಥೆ ಸರ್ಕಾರ ಮಾಡುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಅದರ ಬಗ್ಗೆ ಫರ್ದರ್ ಚರ್ಚೆ ಬೇಡ. ರಾಜ್ಯಪಾಲರ ಭಾಷಣದ ಬಗ್ಗೆ ಮುಂದುವರಿಸಿ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ನಾನು ಈ ವಿಚಾರವನ್ನು ಏತಕ್ಕೆ ಹೇಳಿದೆ, ಅಂದರೆ, ನಮ್ಮ ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಅದಕ್ಕೆ ಉದಾಹರಣೆಯನ್ನು ಕೊಟ್ಟಿದ್ದೇನೆ. ಯಾವುದೇ ಸರ್ಕಾರ ಇರಬಹುದು, ನೀವು ಒಂದು ಮಾತನ್ನು ಹೇಳಿದಿರಿ. ಅಲ್ಲಿ ಯಾವುದೇ ಶಾಸಕರನ್ನು ಕೇಳದೆ ಯಾವುದೇ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದಿಲ್ಲವೆಂದು. ಆದರೆ ನಮ್ಮ ತಾಲ್ಲೂಕಿನಲ್ಲಿ ಒಂದು ಸಬ್‌ಇನ್ಸ್‌ಪೆಕ್ಟರ್ ಅಲ್ಲ, ಒಂದು ಕಾನ್ಸ್‌ಟೇಬಲ್ ಅನ್ನು ಕೇಳಿದರೂ ನಾವು ಹೇಳಿದವರನ್ನು ಹಾಕಿಲ್ಲ. ಅಧಿಕಾರಿಗಳನ್ನು ಕೇಳಿದರೆ, ಹೇಳುತ್ತಾರೆ. ಇಲ್ಲ ಸ್ವಾಮಿ, ನಮ್ಮದೇನೂ ಇಲ್ಲ, ಅದೆಲ್ಲಾ ಮೇಲಿಂದ ಬರುತ್ತದೆ. ಅವರೇ ಮಾಡಬೇಕಾಗಿದೆ. ನಮಗೆ ಯಾವುದೇ ಕಾನ್ಸ್‌ಟೇಬಲ್ ಆಗಲಿ. ಸಬ್‌ಇನ್ಸ್‌ಪೆಕ್ಟರ್ ಆಗಲಿ, ಯಾವುದೇ, ಡಿವೈಎಸ್‌ಪಿಯನ್ನಾಗಲಿ ಇಟ್ಟುಕೊಂಡು ರಾಜಕೀಯ ಮಾಡಲು ಗೊತ್ತೇ ಇಲ್ಲ. ನಾನು ಆ ರೀತಿ ರಾಜಕೀಯ ಮಾಡಿಯೂ ಇಲ್ಲ. ಯಾರನ್ನೇ ಬೇಕಾದರೂ ಹಾಕಲಿ. ಪ್ರಾಮಾಣಿಕರು ಬಂದು ಕೆಲಸ ಮಾಡಿದರೆ ನನ್ನದೇನೂ ಅಭ್ಯಂತರ ಇಲ್ಲ. ಈ ರೀತಿ ಶಾಸಕರಿಗೆ ಸರ್ಕಾರದಲ್ಲಿ ನ್ಯಾಯ ದೊರಕಿಸಿ ಕೊಡಲು ಆಗುವುದಿಲ್ಲ ಎಂದರೆ, ಕರ್ನಾಟಕದ ಜನತೆಗೆ ಯಾವ ರೀತಿ ನ್ಯಾಯ ದೊರಕಿಸಿ ಕೊಡಲು ಸಾಧ್ಯವಾಗುತ್ತದೆ. ಇದನ್ನು ಚಿಂತನೆ ಮಾಡಬೇಕಾಗಿದೆ. ಈ ಸರ್ಕಾರ ಚಿಂತನೆ ಮಾಡಬೇಕಾಗಿದೆ. ಈ ಸರ್ಕಾರ ಎಲ್ಲಾ ರೀತಿಯಲ್ಲಿ ಪೊಳ್ಳು ಭರವಸೆ ಅಥವಾ ಪೊಳ್ಳು ಆಶ್ವಾಸನೆ ಕೊಡುವ ಸರ್ಕಾರ. ಈ ಮೂರು ವರ್ಷದಲ್ಲಿ ಏನೆಲ್ಲಾ ಬಜೆಟ್ ಮಂಡನೆ ಮಾಡಿದ್ದಾರೆ, ಅದರಲ್ಲಿ ಶೇ. 50ರಷ್ಟು ಸಕ್ಸೀಡ್ ಮಾಡುವಂಥ ಕೆಲಸವನ್ನೂ ಕೂಡ ಮಾಡಲಿಲ್ಲ. ಈ ರಾಜ್ಯಪಾಲರ ಭಾಷಣವನ್ನು ವಿರೋಧಿಸಿ, ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

† **ಶ್ರೀ ಸಯ್ಯದ್ ಯಾಸ್ಮಿನ್ (ರಾಯಚೂರು)** : ಸನ್ಮಾನ್ಯ ಅಧ್ಯಕ್ಷರೆ, ನಮಗೆ ಈ ಅವಕಾಶ ಕೊಟ್ಟಿದ್ದೀರಿ. ಬಹಳ ಸಂತೋಷ. ಇಲ್ಲಿ ನಾನು His Excellency the Governor

ರವರು ಮಾಡಿರುವ speechಗೆ ಸ್ವಲ್ಪ remarks ಮಾಡಬೇಕೆಂದು ನಿಂತಿದ್ದೇನೆ. Regarding the Special Economic Zone, His excellency the Governor has said that the Special Economic Zome has been proposed for Hassan and Bangalore and the Special Economic Zone in the Hyderabad-Karnataka region is under consideration. In this connection, I would like to bring to the notice of the Government that Raichur is the most backward area. We have to find out which is the most backward area in the Hyderabad Karnataka area and what are the infrastructures to be provided. In Raichur, thanks to our Hon'ble Chief Minister S.M. Krishnaji, we have been able to get our Rs. 30 Crore Infrastructure project Development i.e. from Karnataka Urban Water Supply and Drainage Department. We have completed it in three years and we have given one MLD of water to the industrial area.

Sir, in Raichur 2,000 acres of land have been acquired by Karnataka Industrial Area Development Board for Industrial Growth Centre. Our Government has connected Gingera to Raichur and Raichur to Andhra Pradesh border at a cost of Rs. 160 Crores sanctioned through world Bank which has also resulted in the industrial growth at Raichur and as I said earlier, we have got raw water supply from the second line from Krishna River which we have completed recently through KUWS & DB nearly about one MLD, one lakh gallon per day of raw water have been provided to industrial area through this project. This is also a very achievement of our Government in Raichur.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಸದಸ್ಯರು ಇಂಗ್ಲಿಷ್‌ನಲ್ಲಿ ಮಾತನಾಡುವುದಕ್ಕೆ ಹಕ್ಕಿದೆ, ಆದರೆ ಅವರು ಕರ್ನಾಟಕದಲ್ಲೇ ಜನಿಸಿದವರು, ಅವರೇನಾದರೂ ಕರ್ನಾಟಕದ ಹೊರಗೆ ಜನಿಸಿದವರು ಅಥವಾ ಬಂದವರೆಂದು ಆ ಮಾತು ಬೇರೆ. ಅವರು ಕನಿಷ್ಟಪಕ್ಷ ನಾಲ್ಕು ವರ್ಷಗಳಲ್ಲಿ ಕನ್ನಡ ಮಾತನಾಡುವುದನ್ನು ಕಲಿಯಬೇಕಾಗಿತ್ತು, ಇಲ್ಲದಿದ್ದರೆ ಇದು ಖಂಡಿತವಾಗಿಯೂ ಸರಿಯಲ್ಲ. ಅವರಿಗೆ ಹಿಂದೆಯೂ ಕೂಡ ಎಚ್ಚರಿಸಿದಾಗ, ಬರುವುದಿಲ್ಲ ಪಾಟೀಲರೆ ಏನು ಮಾಡುವುದೆಂದು ಹೇಳಿದ್ದರು, ಅವರು ಕರ್ನಾಟಕದಲ್ಲೇ ಇದ್ದಾರೆ.

ಶ್ರೀ ಸಯ್ಯದ್ ಯಾಸೀನ್ : ಮಾನ್ಯ ಸಭಾಧ್ಯಕ್ಷರೆ, ನಿಜಾಮು ಕಾಲದಲ್ಲಿ they have earmarked, 398 acres of land for Airport in Raichur. ರಾಯಚೂರಿನಲ್ಲಿ landing facility ಇದೆ. World Bank road ಇದೆ and proximity with the second line of broad gauge facility ಇದೆ. Hyderabad ಮತ್ತು Bombay ಮತ್ತು Delhi, from port to port line connectivity ಇದೆ. Therefore, all infrastructure facilities

are available in Raichur for setting up of special Economic Zone. So, I request the Government to consider Raichur for setting up of the special economic zone. ಏಕೆಂದರೆ, ಅಲ್ಲಿ RTPS is generating power i.e. about 1,670 MW. We have already completed VII Units because of our initiative of our Hon'ble Chief Minister. With the air strip, we can have air connectivity to regiona head quarters like Managalore Hubli and Belgaum and our Government has taken steps to have Air link with Hampi and Gulbarga soon...Sir, Mysore, Gulbarga and Hampi are all important tourist places in the country and at the same time Raichur is also an important tourist and historic place. ಏಕೆಂದರೆ ಇಲ್ಲಿ ಆರ್.ಟಿ.ಪಿ.ಎಸ್. ಇದೆ. OPEC assisted 350 bedded hitech hospital and good Roads formed with world Bank Assistance ಇದೆ. Therefore, I request the Government to take steps to connect Raichur by air to other parts of the state and the country which will go a long way for the industrial development of this area. As we all know at present, Raichur is the most backward area. ಇಲ್ಲಿ employment opportunities ಇಲ್ಲ. But Infrastructure ಇದೆ. water ಇದೆ. electricity ಇದೆ, land for air port ಇದೆ. Suppose if you want to give air connectivity to other places you have to invest crores of rupees. But in Raichur, we need not invest on land because 398 acres of land are already available in Raichur and landing facility is also there. According to the Deccan Airways, they want only few acres. But we have got 398 acres of land. It is already under the control of the Government. For the information of the Hon. Members of the House, I would mention here that in 1957, the then Prime Minister of India Sri. Jawaharlal Nehru through Megdoot landed at Raichur on emergency force landing. This Histrory itself shows that landing facilities are available at Raichur. Deccan Airways, have requested to provide only one k.m. of runway for landing but one and half k.m. of runway is already existing in Raichur. Therefore, I request our Government should consider all these facts and ensure that the airport is constructed at Raichur. Our Hon'ble Chief Minister Sri S.M. Krishnaji and our Mallikarjuna Kharge Sab and our Dharam Singh Sab have already taken up this issue and I am sure that Raichur will also have air connectivity alongwith Gulbarga, Mysore and Hampi. ಏಕೆಂದರೆ

Sir, the Agriculture University College ನಮ್ಮ ಕ್ಷೇತ್ರವಾದ ರಾಯಚೂರಿನಲ್ಲಿ ಇದೆ. 560 acres of land ಇದೆ. ನಿಜಾಮ ಕಾಲದಲ್ಲಿ, 1932ನಲ್ಲಿ they have awarded, they have kept for the Agricultural and Groundnut seeds Research Centre. in 1990 the Hon'ble Union Agriculture Minister Jagjeevan Ramji visited Raichur and inaugurated B.Sc Agriculture Science course in the Agriculture college which is now Affiliated to Dharwad University. We have got M.Sc. course in Agriculture Science. We have got good Labs ಇದೆ. 250 acres of irrigated land ಇದೆ and irrigation facility ಇದೆ. Therefore, I would like to bring to the notice of this August House that without in increasing the teaching stagg like professors and without any investment in infrastructures, we can convert it into the University of Agriculture. The administration is there; professors are there, lecturers are there, lab technicians are there. All the infrastructures required to convert it into University are already available. If it is converted into a university of Agriculture, it would be a boon to the Hyderabad-Karnataka area. Thanks to our Chief Minister, that in the last budget he has declared that a veterinary science university will be established in Bidar and a women's university in Bijapur. In the larger interest of the state, ಈ ತರಹ ರಾಯಚೂರಿನಲ್ಲಿ ಮಾಡಬೇಕು ಏಕೆಂದರೆ without investment we can have a beautiful university.

His Excellenvy in his speech, has mentioned about Raichur Thermal Power Station. We are generating about 1470 MW from all units i.e. 210 MW from each unit and after the inception of our Government, thanks to our Hon'ble Chief Minister, he has given VII Units to Raichur and VIII also is under progress. Sir, this is the wealth of Karnataka. That comes under Z category in the Country and this is precious and we are generating totally about 1,470 MW. It is near to a super thermal power project. This important wealth is available. In Raichur taluk, we are totally dependent on the Krishna river water for this. In the last two summer seasons, I was observing acute shortage of water in the river. If there is total shortage of water in Krishna river, tomorrow, there will be possibility of closing down of RTPS which will damage the economy of our state. Our Hon.Chief Minister has given a

thought to have barrage at Krishna River and at the same time has ordered for survey. Thanks to our Hon. Minister for power and our Hon. Chief Minister for this gesture. He has reserved 3 tmc of Krishna water during the summer from Narayanapur dam for the better survival of our RTPS. I would wholeheartedly welcome this decision. This is the only important wealth in Raichur. Now I think in Munirabad with very good infrastructure, we are generating only about 200 MW. Therefore the generation of power in RTPS is remarkable. The credit goes to our Hon. Chief Minister and our Government for utilising this invaluable wealth available in Raichur. I request our Hon. Chief Minister to include in the budget the construction of barrage in Krishna river. Our area is a very backward area. We can utilize it for thermal power station. Even for the drinking water for Raichur city nearly about more than two lakhs of population is there. The drinking water intake is from Krishna River and at the same time the backward area will get benefit our of irrigation also from this barrage.

As regards, irrigation, ನಮ್ಮ ಸರ್ಕಾರ ಬಹಳ funds irrigation ಗೆ ಕೊಟ್ಟಿದೆ. In every area, we have canals and reservoirs. Since Raichur is a backward area, utmost attention need to be given. The other areas are linked with the reservoir and Irrigation facilities. In Raichur we need the NRBC. They have completed up to 90 miles. So, we want extension up to 152 kmts to cover the most of our backward areas. The Raichur taluka is suffering because it is most backward as well as Naxalite infested area. The people have been neglected very badly in this area and it is only after the inception of our Government, we can see the real all round progress due to implementation of social welfare activities and developmental activities like roads, water facility, power etc., everything. Thanks to Hon. Chief Minister for his concern farmers, I remember very well that the moment I entered into this House, during the first session, I heard from our Hon. Chief Minister about his priorities. The most important priority which he mentioned in this House was watershed development programme. He has fulfilled the assurance or promise that he had given in these four years. With regard to percolation of underground water in the dry areas, it is necessary to find out the result of watershed development programmes, whether the level of water

has gone up etc in the state. For example, ನಮ್ಮ ಕ್ಷೇತ್ರದಲ್ಲಿ in 53 villages, there was no water supply at all. Now because of the watershed development we got excellent results due to precolation of water. our mini-water scheme and our piped water schemes ಚೆನ್ನಾಗಿ ಅಲ್ಲಿ ನಡೆಯುತ್ತಿದೆ. Sources ಇದೆ. Thanks to our Hon. Chief Minister for his vision for the percolation of underground water for the future. Now we got the visible results within this four year is our State. Even our Hon. Chief Minister has ordered for the Satellite survey system and we have got very good results. Whereever we spent money, the percolation of underground water is there and bore-wells are working well. But, at the same time we have to find out the exact picture of availability of water.

ಚೇರ್ಮನ್ : ಸ್ವಲ್ಪ ಈಗ conclude ಮಾಡಿ

Sri. Syed Yasin : So, to conclude, I would like to say in this House that His Exvellency, the Governor in his speech has announced number of development programmes like Nirmalnagar, Nirmaljyothi and solid waste management. This is the new technology which our Hon. Chief Minister has developed in the urban areas as well as in the rural areas also for the facility of drinking water.

If you allocate very small amount, we, in Raichur will give you big results in any field be it education, Industry, Agriculture, Irrigation etc..

I also request our Hon.Chief Minister to give us provisional fund for the distribution of pipe line system in Raichur. I would heartily welcome the Governor's Address which gives the people of our state and the country the progress that we have achieved for the past 4 years in the states and also the programmes to be taken up in future.

I thank the Chair for giving me an opportunity to speak and conclude. ಎಲ್ಲರಿಗೂ ಅಭಿನಂದನೆಗಳು.

4.50 ಪಿಎಂ

† ಶ್ರೀ ಕೃಷ್ಣ ಭೈರೇಗೌಡ (ವೇಮಗಲ್) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಪ್ರತಿಕ್ರಿಯಿಸಲು ನನಗೆ ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳನ್ನು ತಿಳಿಸುತ್ತಾ, ನಾನು ಈ ಸದನಕ್ಕೆ ಹೊಸ ಸದಸ್ಯನಾಗಿ ಬಂದಿದ್ದು ಇತ್ತೀಚೆಗೆ ಕಳೆದ 7-8 ದಿನಗಳ ಸದನದ ಸಮಯದಲ್ಲಿ ಓಡಾಡುತ್ತಿದ್ದಾಗ ಅನೇಕ ಸದಸ್ಯರು "ಯಾರಪ್ಪಾ ಈತ ಓಡಾಡುತ್ತಿದ್ದಾನೆ, ಎಲ್ಲಿಂದ ತಪ್ಪಿಸಿಕೊಂಡು ಬಂದ ಎಂದು ನೋಡುತ್ತಿದ್ದರು." ಆದರೆ ಇವತ್ತು ನನ್ನ ಪರಿಚಯ

ಮಾಡಿಕೊಳ್ಳೋಣವೆಂದಿದ್ದು ಈ ಸದನದಲ್ಲಿ ತಮ್ಮ ಮುಖಾಂತರ ಸದನದ ಎಲ್ಲಾ ಸದಸ್ಯರಿಗೆ ನನ್ನ ಅಭಿನಂದನೆಗಳನ್ನು ತಿಳಿಸುತ್ತಾ ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅನೇಕ ಅಂಶಗಳು ಇರುವುದರಿಂದ ಅದರಲ್ಲಿ ಕೆಲವು ವಿಷಯಗಳ ಬಗ್ಗೆ ತಮ್ಮ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ ಮತ್ತು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ. ಈ ಅಂಶಗಳನ್ನು ಈಗಾಗಲೇ ಅನೇಕ ಹಿರಿಯ ಸದಸ್ಯರು ಸದನದ ಗಮನಕ್ಕೆ ತಂದಿದ್ದರು ಸಹ ಅದರ ಗಂಭೀರತೆಯನ್ನು ನಾನು ಮತ್ತೊಮ್ಮೆ ಒತ್ತಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಪ್ರಥಮವಾಗಿ ನಮ್ಮ ರಾಜ್ಯದಲ್ಲಿ ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಅತೀ ತೀವ್ರವಾಗಿ ಜನತೆಯನ್ನು ಕಾಡುತ್ತಿದೆ. ಅದರಲ್ಲೂ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಕೋಲಾರ ಉಪ ವಿಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿ ಇರುವುದು ಇಡೀ ರಾಜ್ಯಕ್ಕೆ ಗೊತ್ತಿರುವಂಥ ವಿಚಾರ. ಏಕೆಂದರೆ ನಮ್ಮದೊಂದು ಬರಪೀಡಿತ ಪ್ರದೇಶ, ಮಳೆಯ ನೀರನ್ನೇ ಅಧರಿಸಿ ನಾವು ಕುಡಿಯುವ ನೀರನ್ನು ಸರಬರಾಜು ಮಾಡಬೇಕಾಗಿದೆ. ಕಳೆದ 3 ವರ್ಷದಿಂದ ಮಳೆ ಕೈಕೊಟ್ಟಿರುವ ಕಾರಣದಿಂದಾಗಿ ಇವತ್ತು ಕುಡಿಯುವ ನೀರನ್ನು ಒದಗಿಸುವುದು ಅತೀ ತೀವ್ರವಾದ ಸಮಸ್ಯೆಯಾಗಿದೆ. ಈ ಸಂದರ್ಭದಲ್ಲಿ ಕೆಲವೊಂದು ಅಂಕಿಅಂಶಗಳ ಮುಖಾಂತರ ಇದರ ತೀವ್ರತೆಯ ಬಗ್ಗೆ ಸದನದ ಗಮನವನ್ನು ಸೆಳೆಯಲಿಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಸುಮಾರು ಕೊಳವೆ ಬಾವಿಗಳನ್ನು ಕೊರೆದು ಆರೇಳು ತಿಂಗಳುಗಳು ಆಗಿದ್ದರು ಸಹ ಇದುವರೆಗೆ ಸರ್ಕಾರ ಆ ಕೊಳವೆ ಬಾವಿಗಳಿಗೆ ತಕ್ಕ ಪಂಪು ಮೋಟರುಗಳನ್ನು ಕೊಡುವುದಾಗಲೀ ಅಥವಾ ತಕ್ಕ ಪೈಪುಗಳ ವ್ಯವಸ್ಥೆ ಮಾಡುವುದಾಗಲೀ ಮಾಡಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಪುಟ 3 ಮತ್ತು 4ರಲ್ಲಿ ಸರ್ಕಾರ ಏನು ಹೇಳುತ್ತದೆಂದರೆ – "ಜನಸಾಮಾನ್ಯರಿಗೆ ನೀರು ದೊರೆಯುವಂತೆ ಮಾಡಲು ನನ್ನ ಸರ್ಕಾರವು ಸಾಧ್ಯವಾದ ಎಲ್ಲಾ ಕ್ರಮಗಳನ್ನು ಕೈಕೊಳ್ಳುವುದೆಂದು ನಾನು ಈ ಸಂದರ್ಭದಲ್ಲಿ ಭರವಸೆ ನೀಡುತ್ತೇನೆ." ಎನ್ನುವ ಮಾತನ್ನು ರಾಜ್ಯಪಾಲರು ಹೇಳಿದ್ದಾರೆ. ಆದರೆ ಕೊಳವೆ ಬಾವಿಯನ್ನು ಕೊರೆಯಲೇ ಬೇಡಿ ಎಂದು ಹೇಳಿದಾಗ ಯಾವ ರೀತಿ ಅವರು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳುವುದನ್ನು ಸಮರ್ಥಿಸಿಕೊಳ್ಳುತ್ತಾರೆ ಎನ್ನುವುದು ನನಗಂತೂ ಅರ್ಥವಾಗುತ್ತಿಲ್ಲ. ಕೆಲವೊಂದು ಕಡೆ ಸಂಬಂಧಪಟ್ಟ ಜಿಯಾಲಜಿಸ್ಟ್ ಬಂದು ಇಲ್ಲಿ ನೀರು ಸಿಗುತ್ತದೆಂದು ಹೇಳಿ ಆ ಊರುಗಳಲ್ಲಿ ಎರಡು ವರ್ಷದಿಂದಲೂ ನೀರು ಇಲ್ಲ. ಇವತ್ತು ಬೆಳಗ್ಗಿನ ಜಾವ ಸಹ ನಾನು ಅಧಿಕಾರಿಗಳ ಜೊತೆ ಮಾತನಾಡಿಕೊಂಡು ಬಂದಿದ್ದೇನೆ. ಇಲ್ಲಿ ನೀರು ಸಿಗುತ್ತದೆಂದು ಸೆಂಟ್ರಲ್ ಜಿಯಾಲಿಜಿಸ್ಟ್ ಬಂದು ಹೇಳಿದ್ದಾರೆ. ಅಲ್ಲಿ ಸರ್ಕಾರ ಕೊಳವೆ ಬಾವಿ ಕೊರೆಯಬೇಡಿ ಎಂದು ಆದೇಶ ಹೊರಡಿಸಿದೆ. ಆದ್ದರಿಂದ ನಾವು ಕೊಳವೆ ಬಾವಿ ಕೊರೆಸುವುದಕ್ಕೆ ಆಗುವುದಿಲ್ಲ ಎಂದು ಅಧಿಕಾರಿಗಳು ಹೇಳಿದರು. ನೀರು ಸಿಗುತ್ತದೆ ಎಂದರೂ ಕೊಡಬೇಡಿ ಎಂದು ಹೇಳಿದರೆ ಸರ್ಕಾರದ ಉದ್ದೇಶ ಏನು ಎನ್ನುವುದನ್ನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಕೊಳವೆ ಬಾವಿಗಳನ್ನು ಕೊರೆದು 6 ತಿಂಗಳು ಆಯಿತು. ನಮ್ಮ ತಂದೆಯವರು ನಿಧನ ಆಗುವುದಕ್ಕೆ ಮೊದಲು ಕೊರೆದ ಕೊಳವೆ ಬಾವಿಗೆ ಇವತ್ತಿಗೂ ಸಹ ಪಂಪು ಕೊಟ್ಟಿಲ್ಲ ಮೋಟರು ಕೊಟ್ಟಿಲ್ಲ ಪೈಪು ಕೊಟ್ಟಿಲ್ಲ. ಇನ್ನು ಯಾವ ರೀತಿ ಇವರು ಕುಡಿಯುವ ನೀರನ್ನು ಒದಗಿಸುತ್ತಾರೆ? "ನಾವು ಕುಡಿಯುವ ನೀರನ್ನು ಒದಗಿಸುವುದರಲ್ಲಿ ಎಲ್ಲಾ ಕ್ರಮಗಳನ್ನು

ಕೈಕೊಳ್ಳುತ್ತೇವೆ ಎನ್ನುವುದನ್ನು ಯಾವ ಆಧಾರದ ಮೇಲೆ ಹೇಳುತ್ತಾರೆ ಎನ್ನುವುದಕ್ಕೂ ಸಹ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ನಾನು ಏಕೆ ಈ ಸಮಸ್ಯೆಯನ್ನು ತೀವ್ರವಾಗಿ ಪ್ರಶ್ನಿಸುತ್ತಿದ್ದೇನೆಂದರೆ, ನಾನು ಚುನಾವಣೆಯಲ್ಲಿ ಗೆದ್ದು 3–4 ತಿಂಗಳು ಆಯಿತು. ಏನೋ ಒಂದು ವರ್ಷಕ್ಕೆ ನಮ್ಮ ಗೌಡರ ಮಗ ಎಂದು ನಮ್ಮ ಕ್ಷೇತ್ರದ ಜನತೆ ನಮ್ಮ ತಂದೆಯವರು ಮಾಡಿದ ಒಳ್ಳೆಯ ಕೆಲಸದ ಆಧಾರದ ಮೇಲೆ ನಮ್ಮನ್ನು ಆಶೀರ್ವದಿಸಿ ನಮ್ಮ ಕ್ಷೇತ್ರದ ಜನತೆ ಅಷ್ಟೇ ನಿಷ್ಟೆಯಿಂದ ನಮ್ಮನ್ನು ವಿಧಾನಸಭೆಗೆ ಕಳುಹಿಸಿಕೊಟ್ಟಿದ್ದಾರೆ. 2 ತಿಂಗಳ ನಂತರ ಚುನಾವಣೆ ಬರುವುದರಿಂದ ಪುನಃ ಅದೇ ಜನತೆ ಹತ್ತಿರ ನಾನು ಹೋಗಬೇಕು. ಆಗ ನೀರು ಕೊಟ್ಟಿಲ್ಲ ಹಾಗಾಗಿ ನಾವು ಕೃಷಿ ಹೇಗೆ ಮಾಡುವುದೆಂದು ಅವರು ಖಾಲಿ ಕೊಳವೆ ಬಾವಿಗಳನ್ನು ತೋರಿಸುತ್ತಾರೆ. ಇದರ ಬಗ್ಗೆ ನನ್ನನ್ನು ಮಾತ್ರ ಪ್ರಶ್ನೆ ಮಾಡುವುದಲ್ಲ ಸರ್ಕಾರವನ್ನೂ ಸಹ ಪ್ರಶ್ನೆ ಮಾಡುತ್ತಾರೆ. ಅದನ್ನು ಸಹ ಇವರು ಅರಿತುಕೊಳ್ಳಬೇಕಾಗಿದೆ. ಇದರಲ್ಲಿ 180 ಕೋಟಿರೂಪಾಯಿಗಳನ್ನು ಕುಡಿಯುವ ನೀರಿಗೋಸ್ಕರ ಖರ್ಚು ಮಾಡುವುದಕ್ಕೆ ನಾವು ತಯಾರಾಗಿದ್ದೇವೆಂದು ಹೇಳುತ್ತಾರೆ. ಇವತ್ತು ಕೇವಲ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕುಡಿಯುವ ನೀರಿನ ವಿಷಯದಲ್ಲಿ ಆಗಿರುವ ಕಾಮಗಾರಿಗಳಿಗೆ ಸುಮಾರು 2 ಕೋಟಿ ರೂಪಾಯಿ ಸಾಲ ಸರ್ಕಾರದಿಂದ ಬಾಕಿ ಇದೆ. ಕೊಳವೆ ಬಾವಿಗಳನ್ನು ಕೊರೆದಿರುವಂಥ ಗುತ್ತಿಗೆದಾರರಿಗೆ 1 ಕೋಟಿ 30 ಲಕ್ಷ ರೂಪಾಯಿಗಳ ಬಾಕಿ ಸರ್ಕಾರದಿಂದ ಇದೆ. ಹಾಕಿರುವ ಕೊಳವೆ ಬಾವಿ ಸಣ್ಣ ಗುತ್ತಿಗೆದಾರರಿಗೆ 1 ಕೋಟಿ 30 ಲಕ್ಷ ರೂ. ಬಾಕಿ ಇದೆ. ಇನ್ನು ನೀವು ಕುಡಿಯುವ ನೀರನ್ನು ಹೇಗೆ ಕೊಡುತ್ತೀರಿ? ಇರುವ ಬಾಕಿಯನ್ನೇ ನೀವು ಪೂರ್ಣಗೊಳಿಸಿಲ್ಲ. ಇನ್ನು ಮುಂದೆ ಟ್ಯಾಂಕರ್ ಮೂಲಕ ಸಹ ಕೊಡುತ್ತೇವೆಂದು ಹೇಳುತ್ತಾರೆ. ಇವತ್ತಿಗೆ ನನ್ನ ಕ್ಷೇತ್ರದಲ್ಲಿ ಒಂದು ಹಳ್ಳಿಗೂ ಸಹ ಟ್ಯಾಂಕರ್ ಮೂಲಕ ನೀರು ಕೊಟ್ಟಿಲ್ಲ. ಇನ್ನು ಬೇರೆ ವ್ಯವಸ್ಥೆ ಮಾಡುತ್ತೇವೆನ್ನುತ್ತಾರೆ. ಇನ್ನು ಯಾವಾಗ ಮಾಡುವುದು? ಚುನಾವಣೆ ಬರುತ್ತದೆ. ಹೋಗುತ್ತದೆ. ಅಷ್ಟರಲ್ಲಿ ಇವರೇನು ಮಾಡುವುದು ನನಗೇನೂ ಕಾಣುತ್ತಿಲ್ಲ. ಈ ರೀತಿಯಾಗಿ ತೀವ್ರವಾಗಿ ಸಮಸ್ಯೆ ಕಾಡುತ್ತಿದೆ. ಸರ್ಕಾರ ಇದರ ಬಗ್ಗೆ-ಸತ್ಯಕ್ಕೆ ದೂರವಾದ ಭರವಸೆಗಳನ್ನು ಪತ್ರಿಕೆಗಳ ಮೂಲಕ ಕೊಡುವುದನ್ನು ಆದಷ್ಟು ಕಡಿಮೆ ಮಾಡಿ ತಮ್ಮ ಕೈಯಲಾದಷ್ಟು ಮಟ್ಟಿಗೆ ಆದರೂ ಸಹ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕು. ಅದರಲ್ಲೂ ಕೋಲಾರ ಜಿಲ್ಲೆಗೆ ಹೆಚ್ಚಿನ ಆದ್ಯತೆ ಸರ್ಕಾರ ಕೊಡಬೇಕಾಗುತ್ತದೆ. ಏಕೆಂದರೆ ನಮ್ಮದು ಬರಡು ಭೂಮಿ. ಕೊಳವೆ ಬಾವಿಗಳ ಮೂಲಕವೇ ನಾವು ಕುಡಿಯುವ ನೀರನ್ನು ತೆಗೆಯಬೇಕು ಹಾಗೂ ಕೊಡಬೇಕು. ನಮಗೆ ಬೇರೆ ಯಾವುದೇ ಶಾಶ್ವತ ನೀರಾವರಿ ಯೋಜನೆ ಇಲ್ಲ. ಹೀಗಿರುವಾಗ ಕೋಲಾರ ಜಿಲ್ಲೆಗೆ ಹೆಚ್ಚಿನ ಆಸಕ್ತಿಯನ್ನು ಒದಗಿಸಿ ಸರ್ಕಾರ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ಸರ್ಕಾರವನ್ನು ತಮ್ಮ ಮೂಲಕ ವಿನಂತಿಸುತ್ತೇನೆ. ಹಾಗೆಯೇ, ಹಿರಿಯ ಸದಸ್ಯರಾದ ಶ್ರೀ ಸಿಂಧ್ಯಾರವರು ಮಾತನಾಡುತ್ತಾ, ಸಣ್ಣ ಕೈಗಾರಿಕೆಗಳಿಗೆ ಸಹಾಯಧನವನ್ನು ಒದಗಿಸುವ ವಿಷಯವನ್ನು ಗಮನಕ್ಕೆ ತಂದಿದ್ದರು. ಅವರ ಜೊತೆಗೆ ನಾನೂ ಸಹ ಧ್ವನಿಗೂಡಿಸುತ್ತಾ, ರೇಷ್ಮೆ ನೂಲು ಬಿಚ್ಚುವವರ ಏನು ಸಣ್ಣ ಕೈಗಾರಿಕೆಗಳಿವೆ, ನನ್ನ ಕ್ಷೇತ್ರದಲ್ಲಿ ಅಂಥವರು ಅನೇಕರಿದ್ದಾರೆ. 1999ರಲ್ಲಿ ಅವರಿಗೆ ನೀಡುವ ಸಹಾಯಧನವನ್ನು ಸರ್ಕಾರ ಮಂಜೂರು ಮಾಡಿದೆ. ಅದಕ್ಕೆ ನನ್ನ ಬಳಿ ಪತ್ರಗಳಿವೆ. 1999ರಲ್ಲಿ ಉತ್ತಮವಾದ ಯಂತ್ರಗಳನ್ನು ಅಳವಡಿಸಿಕೊಳ್ಳಲು ಸರ್ಕಾರ 25 ರಿಂದ 50 ಸಾವಿರ ರೂ.ಗಳನ್ನು

ಕೊಡುತ್ತೇವೆಂದು ಹೇಳಿ ಮಂಜೂರು ಮಾಡಿದೆ. ಆ ಮಂಜೂರಾತಿಯಾಧಾರದ ಮೇಲೆ ಅವರ ಯಂತ್ರಗಳನ್ನು ಅಳವಡಿಸಿ ಸುಮಾರು 4 ವರ್ಷಗಳಾಗಿದೆ. ಆ 4 ವರ್ಷಗಳಲ್ಲಿ ಸುಮಾರು 40 ಸಾವಿರ ರೂ. ಬಡ್ಡಿ ಕಟ್ಟಿದ್ದಾರೆ. ಕೊಡುವ 25 ಸಾವಿರ ರೂ.ಗಳನ್ನು ಕೊಡುತ್ತೇವೆಂದು ಇವರೇನು 1999ರಲ್ಲಿ ಮಂಜೂರು ಮಾಡಿದ್ದರೋ, ಆ ಪತ್ರದ ಆಧಾರದ ಮೇಲೆ ರೇಷ್ಮೆ ನೂಲು ಬಿಚ್ಚುವಂಥವರು ಧೈರ್ಯ ಮಾಡಿ ಹೊಸ ಯಂತ್ರಗಳನ್ನು ಅಳವಡಿಸಿ ಅವರು ತಮ್ಮ ಕೆಲಸವನ್ನು ಶುರು ಮಾಡಿದರು. ಸುಮಾರು 30–40 ಸಾವಿರ ರೂ.ಗಳ ಬಡ್ಡಿಯನ್ನು ಆ ಯಂತ್ರಗಳನ್ನು ಕೊಂಡುಕೊಂಡಿದ್ದಕ್ಕೆ ಕಟ್ಟಿದ್ದಾರೆ. ಇದುವರೆಗೆ ಅವರ ಬಳಿ ಖಾಲಿ ಮಂಜೂರಾತಿ ಪತ್ರ ಮಾತ್ರವಿದೆ. ಹಣವಂತೂ ಬಂದಿಲ್ಲ. ಸಹಾಯಧನ ಮಂಜೂರಾಗಿರುವ ಪತ್ರ ಮಾತ್ರ ಅವರ ಬಳಿ ಇದೆ. ಇವತ್ತಿನವರೆಗೂ ಅವರ್‍ಯಾರಿಗೂ ಒಂದು ಬಿಡಿಗಾಸೂ ಬಂದಿಲ್ಲ. ಹಾಗೆಯೇ, ರೇಷ್ಮೆ ನೂಲು ಬಿಚ್ಚುವವರಿಗೆ ಇವತ್ತು ರಾತ್ರಿ ಹೊತ್ತು ವಿದ್ಯುತ್ತನ್ನು ಸರ್ಕಾರ ಏನು ಕೊಡುತ್ತಿದೆ, ಇದರಿಂದ ಅವರು ತುಂಬಾ ತತ್ತರಿಸಿ ಹೋಗಿದ್ದಾರೆ. ಏಕೆಂದರೆ, ಅವರು ಕೂಲಿ ಕಾರ್ಮಿಕರನ್ನಾಧರಿಸಿ, ಇದನ್ನು ನಡೆಸುತ್ತಾರೆ. ತಾವು ರಾತ್ರಿ ಹೊತ್ತು ಅವರಿಗೆ ವಿದ್ಯುತ್ ಒದಗಿಸಿದರೆ, ರಾತ್ರಿ ಹೊತ್ತು ಯಾವ ಕೂಲಿ ಕಾರ್ಮಿಕರು ಬಂದು ಕೆಲಸ ಮಾಡುತ್ತಾರೆ? ಅದೂ ಹಳ್ಳಿ ಪ್ರದೇಶಗಳಲ್ಲಿ ನಗರದಲ್ಲಿ ಒಂದು ಷಿಫ್ಟ್ ಎಂದು ಹೇಳಿಕೊಂಡು ಕಾರ್ಖಾನೆಗಳನ್ನು ನಡೆಸಬಹುದು. ಆದರೆ, ಹಳ್ಳಿ ಪ್ರದೇಶಗಳಲ್ಲಿ ರಾತ್ರಿ ಹೊತ್ತು ನಾವು ಒಂದು ಸಣ್ಣ ಕೈಗಾರಿಕೆಯನ್ನು ನಡೆಸುತ್ತೇವೆಂದರೆ ಕಾರ್ಮಿಕರು ಎಲ್ಲಿಂದ ಬರುತ್ತಾರೆ? ಈ ಸಮಸ್ಯೆಯನ್ನೂ ಸಹ ಸರ್ಕಾರ ಅರಿತಿಲ್ಲ. ಇದು ಕೇವಲ ರೇಷ್ಮೆ ನೂಲು ಬಿಚ್ಚುವವರಿಗೆ ಅನ್ವಯಿಸುತ್ತದೆಂದಲ್ಲ. ರೇಷ್ಮೆ ನೂಲು ಬಿಚ್ಚುವವರು, ರೇಷ್ಮೆ ಗೂಡನ್ನು ಕೊಂಡುಕೊಳ್ಳುವುದನ್ನು ಕಡಿಮೆ ಮಾಡಿದರೆ, ಅದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತದೆ. ರೇಷ್ಮೆ ಗೂಡಿನ ಧಾರಣೆ ಏನಿದೆ ಅದು ಕುಸಿಯುತ್ತದೆ. ಕುಸಿದಾಗ, ನಮ್ಮ ಕೋಲಾರ ಜಿಲ್ಲೆಯಲ್ಲಿರುವ ಹಾಗೂ ಸುತ್ತಮುತ್ತಲ ಜಿಲ್ಲೆಗಳ ಎಲ್ಲಾ ರೇಷ್ಮೆ ಬೆಳೆಗಾರರಿಗೂ ಅದರಿಂದ ತುಂಬಾ ತೊಂದರೆಯಾಗುತ್ತದೆ. ಇದನ್ನು ಸರ್ಕಾರ ಗಮನಿಸಬೇಕು ಎಲ್ಲೆಲ್ಲಿ ರೇಷ್ಮೆ ನೂಲು ಬಿಚ್ಚುವವರಿಗೆ ಹೆಚ್ಚಿನ ಕಾನ್‌ಸಂಟ್ರೇಷನ್ ಇರುತ್ತದೆ. ಅಂಥವರಿಗೆ ಹಗಲಿನ ಸಮಯ ವಿದ್ಯುತ್ ಕೊಡುವುದಕ್ಕೂ ಸಹ ಸರ್ಕಾರ ಮುಂದೆ ಹೆಜ್ಜೆ ಇಡಬೇಕು. ಇದು ರೇಷ್ಮೆ ನೂಲು ಬಿಚ್ಚುವವರಿಗೆ ಮಾತ್ರವಲ್ಲ. ರೈತರಿಗೂ ಸಹ ತುಂಬಾ ಅನುಕೂಲವಾಗುತ್ತದೆಂಬುದನ್ನು ನಾನು ಸದನದ ಗಮನಕ್ಕೆ ತರಲು ತಮ್ಮ ಮೂಲಕ ಇಚ್ಛೆಪಡುತ್ತೇನೆ. ಹಾಗೆಯೇ, ಮಾನ್ಯ ಸಿಂಧ್ಯಾರವರು ಹಾಗೂ ಅನೇಕ ಸದಸ್ಯರು ಮುಖ್ಯಮಂತ್ರಿಗಳ ಗ್ರಾಮೀಣ ಸಡಕ್ ಯೋಜನೆ ಬಗ್ಗೆ ಸಹ ಸದನದ ಗಮನ ಸೆಳೆದಿದ್ದಾರೆ. ಅವರ ಬಳಿ ಬಂದ ಹಾಗೆ ಸಂಬಂಧಪಟ್ಟ ಇಂಜಿನಿಯರ್ ನನ್ನ ಬಳಿ ಬಂದು ಎರಡೂವರೆ ಕೋಟಿ ರೂ. ಬರುತ್ತದೆ. ಪಟ್ಟಿ ಕೊಡಿ ಎಂದರು. ನಾನು, ಸರ್ಕಾರವೇ ಎರಡೂವರೆ ಕೋಟಿ ರೂ. ಕೊಡುತ್ತದೆಂದಾಗ, ಇನ್ನು ಒಂದು 5–10 ಲಕ್ಷ ರೂ.ಗಳನ್ನು ಹೆಚ್ಚಿಗೆ ಸೇರಿಸಿ, ಎಂದು ಹೇಳಿ ಎಲ್ಲಾ ಪಟ್ಟಿ ತಯಾರಿಸಿ ಕೊಟ್ಟಿದ್ದೇನೆ. ಇವತ್ತು ಬೆಳಿಗ್ಗೆ ಸಹ ಒಂದು ಊರಿಗೆ ಒಂದು ಸಭೆ ನಡೆಸುವುದಕ್ಕೆ ಹೋಗಿದ್ದೆ. ಅಲ್ಲಿ ಸಹ, ಏನು ಸಾರ್ ರಸ್ತೆ ಮಾಡಿಸುತ್ತೇವೆಂದು ಹೇಳಿದ್ದಿರಿ, ರಸ್ತೆಗಳಲ್ಲಿ ಹಳ್ಳಗಳು ಬಿದ್ದಿವೆ. ಇನ್ನೂ ಏನೂ ಆಗಲಿಲ್ಲವೆಂದು ಕೇಳಿದರು. ನಾವು ತತ್‌ಕ್ಷಣ ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಸರ್ಕಾರ ಪತ್ರಿಕೆಗಳ ಮೂಲಕ ಒಂದೂ ಕಾಲು ಕೋಟಿ ರೂ ಎರಡೂವರೆ ಕೋಟಿ ರೂ. ಕೊಡುತ್ತೇವೆಂದು ಹೇಳುತ್ತಿದೆಯೇ ವಿನಃ ಒಂದು ಪೈಸೆ ಕೊಟ್ಟಿದ್ದಂತೂ

ಇಲ್ಲ. ಸದನದ ಎಲ್ಲಾ ಸದಸ್ಯರೂ ಸಹ ಅದನ್ನು ಅನುಭವಿಸುತ್ತಿದ್ದೇವೆ. ಕೇವಲ ವಿರೋಧ ಪಕ್ಷದ ಸದಸ್ಯರು ಅಲ್ಲ. ಸದನದ ಎಲ್ಲಾ ಸದಸ್ಯರೂ ಅನುಭವಿಸುತ್ತಿದ್ದಾರೆ. ನಾವು ಜನರಿಗೆ, ನಿಮ್ಮ ರಸ್ತೆ ಆಗುತ್ತದೆಂದು ಭರವಸೆ ಕೊಟ್ಟ ನಂತರ ಪ್ರತಿನಿತ್ಯ ನಾವು ಇನ್ನೂ ಬಂದಿಲ್ಲ. ಸರ್ಕಾರದಿಂದ ಇನ್ನೂ ಬರಲಿಲ್ಲ. ಬರುತ್ತದೆ ಎಂದು ಹೇಳುತ್ತಿದ್ದರೆ, ಚುನಾವಣೆಯೇ ಬಂತು. ಇನ್ನು ಯಾವಾಗ ರಸ್ತೆ ಆಗುವುದು? ನಾವು ಮತ್ತೆ ಚುನಾವಣೆ ಜನರ ಮುಂದೆ ಹೋಗಬೇಕು. ಏನ್ ಸಾರ್ ಈ ರಸ್ತೆ ಮಾಡುಸುತ್ತೇವೆಂದು ಹೇಳಿದ್ದಿರಿ, ಏನಾಯಿತೆಂದು ಕೇಳಿದಾಗ ನಾವು ಯಾರನ್ನು ದೂಷಣೆ ಮಾಡಿ ಉತ್ತರ ಕೊಡಬೇಕು? ಅದಕ್ಕೆ ಸಂಬಂಧಪಟ್ಟ ಹಾಗೆ ರಸ್ತೆಗಳನ್ನು ದುರಸ್ತೀಕರಣ ಮಾಡುವುದಕ್ಕೆ 40 ಕೋಟಿ ರೂ.ಗಳ ಒಂದು ಪ್ರಾವಿಜನ್ ಮಾಡುತ್ತೇವೆಂದೂ ಸಹ ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಇದು ಒಂದು ಸ್ವಾಗತಾರ್ಹ ಕ್ರಮ. ತುಂಬಾ ತಡವಾಗಿ ಬಂದಿದ್ದರೂ ಸಹ ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗಿಸುತ್ತಾ, ಆದರೆ, ಇದೇ ಕ್ರಮವನ್ನು ಮೊದಲೇ ಮಾಡಿದ್ದಿದ್ದರೆ, ಚೆನ್ನಾಗಿತ್ತು. 40 ಕೋಟಿ ರೂ.ಗಳ ಅನುದಾನವನ್ನು ಕೊಡುತ್ತೇವೆಂದು ಹೇಳಿದ್ದಾರಷ್ಟೇ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ, ರಸ್ತೆಗಳ ದುರಸ್ತಿ ಬಗ್ಗೆ ಎಲ್ಲಿಯೂ ಒಂದು ಗುಣಿಯನ್ನು ಮುಚ್ಚಿದ್ದನ್ನು ನಾನು ಕಂಡಿಲ್ಲ. ಮುಂದಕ್ಕೆ ಮುಚ್ಚುವುದಾದರೆ ಭಾರೀ ಒಳ್ಳೆಯದು. ಆದರೆ, 40 ಕೋಟಿ ರೂ. ಸಾಲದು. ಏಕೆ ಸಾಲದೆಂದರೆ, ನಾವು ಒಂದು ರಸ್ತೆಯನ್ನು ಉತ್ತಮ ಸ್ಥಿತಿಯಲ್ಲಿ ಉಳಿಸಿಕೊಂಡಾಗ, ಆ ರಸ್ತೆಯ ಬಾಳು ಏನಿರುತ್ತದೆ. ಅದು 3 ವರ್ಷ ಹೆಚ್ಚಾಗುತ್ತದೆ. 3 ವರ್ಷ ಹೆಚ್ಚಾಗುವುದರಿಂದ ನಾವು ಹೊಸದಾಗಿ ರಸ್ತೆ ಮಾಡುವುದರಲ್ಲಿ ನಾವು ಕೋಟ್ಯಾಂತರ ರೂಪಾಯಿಗಳನ್ನು ಉಳಿಸುತ್ತೇವೆ. ಇದನ್ನು ಸರ್ಕಾರ ತೀವ್ರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ನಾವು ಯಾವಾಗ ರಸ್ತೆಗಳ ದುರಸ್ತೀಕರಣಕ್ಕೆ ಕೇವಲ ಒಂದು ಕೋಟಿ ರೂ. ಕೊಟ್ಟರೆ, ಹೊಸ ರಸ್ತೆ ಮಾಡುವುದರಲ್ಲಿ 20 ಕೋಟಿ ರೂ. ಉಳಿಸಬಹುದು. ಸರ್ಕಾರ ಕೇವಲ 40 ಕೋಟಿ ರೂ. ಅಲ್ಲ, ಇನ್ನೂ ಹೆಚ್ಚಿನ ಹಣವನ್ನು ರಸ್ತೆ ದುರಸ್ತೀಕರಣಗೊಳಿಸಲು ಅನುವು ಮಾಡಿಕೊಡಬೇಕು ಮತ್ತು ಆದಷ್ಟು ಬೇಗ ಪತ್ರಿಕೆಗಳಲ್ಲಿ ಹಾಗೂ ಭಾಷಣಗಳಲ್ಲಿ ಹೇಳುವುದನ್ನು ಬಿಟ್ಟು, ಆದಷ್ಟು ಅದನ್ನು ಕಾರ್ಯಗತಗೊಳಿಸಬೇಕೆಂದು ಸರ್ಕಾರವನ್ನು ನಾನು ಒತ್ತಾಯಿಸುತ್ತಿದ್ದೇನೆ. ಹಾಗೆಯೇ, ಸುಳ್ಳು ಭರವಸೆಗಳು ಇಲ್ಲಿಗೇ ಮುಗಿಯುವುದಿಲ್ಲ. ಗ್ರಾಮ ಪಂಚಾಯಿತಿಗೆ, 5 ಲಕ್ಷ ರೂ. ಕೊಡುತ್ತೇವೆಂದು ಅವರಿಗೆಲ್ಲಾ ಆಸೆ ತೋರಿಸಿ, ಅವರ ಹತ್ತಿರ ಪಟ್ಟಿ ತರಿಸಿಕೊಂಡು, 5 ಲಕ್ಷ ರೂ.ಗೆ ಯೋಜನೆ ಕೊಡಿ ಎಂದು ಹೇಳಿ ಅವರಿಂದ ಯೋಜನೆಯನ್ನು ತರಿಸಿಕೊಂಡು, ಸುಮಾರು 6 ತಿಂಗಳು ಆಗುತ್ತಾ ಬರುತ್ತಿದೆ. 6 ತಿಂಗಳಿಂದ ಹಿಂದೆ ಸುಮಾರು 5 ಲಕ್ಷ ರೂ.ಗೆ ಯೋಜನೆ ತಯಾರಿಸಿ ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರೂ ಸಹ ಹಳ್ಳಿಗಳಲ್ಲಿ, ನಿಮ್ಮ ಊರಿನಲ್ಲಿ ಈ ಕೆಲಸ ಮಾಡುತ್ತೇವೆ, ನಿಮ್ಮ ಊರಿನಲ್ಲಿ ಆ ಕೆಲಸ ಮಾಡುತ್ತೇವೆಂದು ಹೇಳಿಬಿಟ್ಟಿದ್ದಾರೆ. ಇವರು ಇದಕ್ಕೆಲ್ಲಾ ಉತ್ತರವಾಗಿ ಮೊನ್ನೆ ಚುನಾವಣೆ ಸಂದರ್ಭದಲ್ಲಿಯೂ ಸಹ ಸರ್ಕಾರ ಹೇಳಿಕೆ ಕೊಟ್ಟಿತ್ತು. ಡಿಸೆಂಬರ್ 1ನೇ ತಾರೀಖಿಗೆ 5 ಲಕ್ಷ ರೂ.ಗಳನ್ನು ನಾವು ಪ್ರತಿಯೊಂದು ಪಂಚಾಯಿತಿಗೂ ಸಹ ಕೊಟ್ಟೇ ತೀರುತ್ತೇವೆಂದು ಮೊನ್ನೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆದಾಗ ಹೇಳಿಕೆ ಕೊಟ್ಟಿತ್ತು. ಆದರೆ, ಏನಾಯಿತು? 1 ಲಕ್ಷ ರೂ. ಕೊಟ್ಟು, ಇನ್ನು 4 ಲಕ್ಷ ರೂ.ಗಳನ್ನು ವಿದ್ಯುತ್ತಿಗೆ ಕೊಟ್ಟಿದ್ದೇವೆಂದು ಹೇಳಿದರು. ಕಳೆದ 3 ವರ್ಷಗಳಿಂದ ಯಾವ ರೀತಿ ಶಾಸಕರ ನಿಧಿಯನ್ನು ಅಲ್ಲಿಗೆ, ಇಲ್ಲಿಗೆ ಕೊಡುತ್ತೇವೆಂದು ಹೇಳಿಕೊಂಡು ಬರುತ್ತಿದ್ದಾರೆಯೋ, ಅದೇ ರೀತಿ ಇವತ್ತು 4 ಲಕ್ಷ ರೂ.ಗಳನ್ನು

ವಿದ್ಯುತ್ತಿಗೆ ಕೊಟ್ಟಿದ್ದೇವೆಂದು ಹೇಳಿದರು. ಎಲ್ಲಿ ಕೊಟ್ಟಿದ್ದಾರೆ? ವಿದ್ಯುತ್ತಿಗೆ ಕೊಡುವುದಕ್ಕೆ ಸರ್ಕಾರ ಬೇರೆ ಯೋಜನೆ ಹಾಕಿಕೊಂಡಿರಲಿಲ್ಲವೇ? ವಿದ್ಯುತ್ತನ್ನು ಜನ ಬಳಸುತ್ತಾರೆ. ಅದಕ್ಕೆ ನಾವು ಸೂಕ್ತ ತಯಾರಿ ಮಾಡಿಕೊಳ್ಳಬೇಕೆಂದು ಪರಿಜ್ಞಾನ ಸರ್ಕಾರಕ್ಕಿರಲಿಲ್ಲವೇ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡಬೇಕಾಗುತ್ತದೆ. ಹಾಗಿದ್ದ ಪಕ್ಷದಲ್ಲಿ ತಾವು ಏಕೆ 5 ಲಕ್ಷ ರೂ. ಯೋಜನೆ ಕೊಡಿ ಎಂದು ಹೇಳಿದಿರಿ? ಕೊಟ್ಟು ಮೇಲೆ, ಇವತ್ತು ಕೇವಲ ಒಂದು ಲಕ್ಷ ರೂ. ಬಿಡುಗಡೆ ಮಾಡಿ ಮಿಕ್ಕಿದ್ದೆಲ್ಲಾ ಏನಾಯಿತು? ಏಕೆ ಈ ರೀತಿಯ ಮಾತುಗಳನ್ನು ಹೇಳಬೇಕು? ಸರ್ಕಾರ ಏಕೆ ಈ ರೀತಿಯ ಭರವಸೆಗಳನ್ನು ಜನತೆಗೆ ಕೊಡಬೇಕು? ಏನಿದ್ದರೂ ನಿಜವಾಗಿ ಹೇಳಿ. ಒಂದು ಲಕ್ಷ ರೂ. ಕೊಡುತ್ತೇವೆಂದು ಹೇಳಿ ಅಷ್ಟನ್ನು ಬಿಡುಗಡೆ ಮಾಡಿ. ಅದು ಮಾಡುವುದಿಲ್ಲ. 5 ಲಕ್ಷ ರೂ. ಎನ್ನುವುದು, ಯಾವ ಸದ್ದೂ ಸುದ್ದಿಯಿಲ್ಲದೆ ಒಂದು ಲಕ್ಷ ರೂ. ಮಾತ್ರ ಬಿಡುಗಡೆ ಮಾಡಿದ್ದಾರೆ. ಇದು ತುಂಬಾ ಖಂಡನಾರ್ಹ. ಏಕೆಂದರೆ, ಒಂದೊಂದು ಪಂಚಾಯಿತಿಗೆ, 60 ಲಕ್ಷ ರೂ.ವರೆಗೂ ಕೊಡುತ್ತೇವೆಂದು ಈ ಭಾಷಣದಲ್ಲಿ ಹೇಳಿದ್ದಾರೆ. 60 ಲಕ್ಷ ರೂ. ಹೋಗಿ, ಇವತ್ತು ಒಂದು ಲಕ್ಷ ರೂ.ಗೆ ಉಳಿದುಕೊಂಡಿದೆ. ಇನ್ನು ಇವರು ಯಾವಾಗ ಉಳಿದ 59 ಲಕ್ಷ ರೂ. ಕೊಡುತ್ತಾರೆ? ಚುನಾವಣೆಗೆ ಇನ್ನು 3 ತಿಂಗಳಿದೆ, ಏಕೆ ಈ ರೀತಿ ಸತ್ಯಕ್ಕೆ ದೂರವಾದ ಭರವಸೆಗಳನ್ನು ಕೊಡುತ್ತಿದ್ದೀರಿ ಎಂದು ನಾನು ಈ ಸರ್ಕಾರವನ್ನು ಪ್ರಶ್ನೆ ಮಾಡಲು ಇಚ್ಛೆಪಡುತ್ತೇನೆ. ಕೊನೆಯದಾಗಿ, ಪರಿಶಿಷ್ಟ ಜಾತಿ/ವರ್ಗದ ಜನತೆಗೆ ಕೊಳವೆ ಬಾವಿಗಳನ್ನು ಮುಫತ್ತಾಗಿ ಭರಿಸುವ, ಅದಕ್ಕೆ ತಕ್ಕ ಪಂಪು, ಮೋಟಾರ್ ಕೊಡುವ ಒಂದು ಯೋಜನೆ ಸರ್ಕಾರದಡಿಯಲ್ಲಿ ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಇದರ ಬಗ್ಗೆ ಹಿಂದೆ ಸಹ ಚರ್ಚೆಯಾಗಿದ್ದಾಗ, ಅದರಲ್ಲಿ 350 ಅಡಿ ಕೊಳವೆ ಬಾವಿ ಕೊರೆಸುವುದಕ್ಕೆ ಹಾಗೂ 50 ಅಡಿ ಕಬ್ಬಿಣದ, ಉಕ್ಕಿನ ಪೈಪ್ ಹಾಕುವುದಕ್ಕೆ ಪ್ರಾವಿಜನ್ ಇದೆ. ಇದನ್ನು ಹೆಚ್ಚು ಮಾಡಬೇಕು. ಹಿಂದೆಯೂ ಕೂಡ ಇದರ ಬಗ್ಗೆ ಚರ್ಚೆ ನಡೆದಿತ್ತು. ಏಕೆಂದರೆ, ನಮ್ಮ ಜಿಲ್ಲೆಯಲ್ಲಂತೂ ಇಂದು ಸುಮಾರು 700–800 ಅಡಿಗೆ ಮೇಲ್ಪಟ್ಟು ಯಾವುದೇ ಕೊಳವೆ ಬಾವಿಯಲ್ಲಿ ನೀರು ಸಿಗುವುದು ಕಷ್ಟವಾಗಿದೆ. ಇಂಥ ಸಂದರ್ಭದಲ್ಲಿ ನಾವು ಪರಿಶಿಷ್ಠ ಜಾತಿ, ವರ್ಗ, ಹಿಂದುಳಿದ ವರ್ಗದವರಿಗೆ ಹಾಗೂ ಅಲ್ಪಸಂಖ್ಯಾತರಿಗೆ ಏನು ಕೊಳವೆ ಬಾವಿಗಳನ್ನು ಕೊರೆಸಿ ಕೊಡುತ್ತೇವೆ, ಅದರಲ್ಲಿ ನಾವು ಬರೀ 350 ಅಡಿಗಳಷ್ಟು ಮಾತ್ರ ಕೊರೆಸಿ ಕೊಡುತ್ತೇವೆಂದರೆ ಅರ್ಥವಿಲ್ಲದ್ದು ಆಗುತ್ತದೆ. ಏಕೆಂದರೆ, 750 ಅಡಿಗೆ ಮೇಲೆ ಎಲ್ಲೂ ನೀರು ಸಿಕ್ಕುತ್ತಿಲ್ಲ ಇವತ್ತು, ಹಾಗೆಯೇ 750 ಅಡಿಗೆ ನಾವು ಪಂಪ್ ಮೋಟಾರ್‌ನ್ನೂ ಸಹ ಅಲ್ಲಿ ಅಷ್ಟೇ ಆಳಕ್ಕೆ ಬಿಡಬೇಕಾಗುತ್ತದೆ. ನಾವು ಅಷ್ಟೇ ಆಳದಲ್ಲಿ ನಾವು ಪಂಪ್ ಮೋಟರ್ ಇರತಕ್ಕಂಥ ಆಳಕ್ಕೆ ಕೇಬಲ್ ಅನ್ನು ಸಹ ಬಿಡಬೇಕಾಗುತ್ತದೆ. ಇದೆಲ್ಲವನ್ನೂ ಸರ್ಕಾರ ಮರುಪರಿಶೀಲನೆ ಮಾಡಿ ಸರ್ಕಾರ ಹೊಸ ಇದಕ್ಕೆ ನೀತಿಯನ್ನು ರೂಪಿಸಬೇಕಾಗಿರುವುದರ ಬಗ್ಗೆ ಹಿಂದೆ ಚರ್ಚೆ ನಡೆದಿದ್ದು, ಸರ್ಕಾರ ಪರಿಶೀಲಿಸುತ್ತೇವೆ ಎಂದು ಹೇಳಿಕೆ ಕೊಟ್ಟಿದ್ದಾರೆಂದು ನಾನು ಭಾವಿಸುತ್ತೇನೆ, ಏಕೆಂದರೆ, ನಾನು ಹೊಸ ಸದಸ್ಯನಾಗಿದ್ದರೂ ಸಹ ಇದರ ಬಗ್ಗೆ ತಿಳಿದುಕೊಂಡಿರುವ ಮಾಹಿತಿಯ ಪ್ರಕಾರ ಹಿಂದೆ ಸರ್ಕಾರ ಇದರ ಬಗ್ಗೆ ಪರಿಶೀಲಿಸುತ್ತೇನೆಂದು ಹೇಳಿದ್ದರು, ಆದರೆ ಇದುವರೆವಿಗೂ ಸಹ ಸರ್ಕಾರ ಪರಿಶೀಲಿಸಿದೆಯೋ ಗೊತ್ತಿಲ್ಲ. ಅದರ ಬಗ್ಗೆ ಉತ್ತರವೂ ಬಂದಿಲ್ಲ. ಅದರ ಬಗ್ಗೆ ಕ್ರಮನೂ ತೆಗೆದುಕೊಂಡಿಲ್ಲ. ನಾವು ಅವರಿಗೆ ಫ್ರೀಯಾಗಿ ಕೊಳವೆ ಬಾವಿ ಕೊಡುವುದಂತೂ ಉಂಟು. ಕೊಟ್ಟಿದ್ದನ್ನು ನಾವು ಸರಿಯಾಗಿಯೇ ಕೊಡಬಹುದಲ್ಲಾ, 350 ಅಡಿ ಕೊರೆದರೆ ಅಲ್ಲಿ ಬರೀ ಧೂಳು ಬೀಳುತ್ತದೆಯೇ

ಹೊರತು ನೀರಂತೂ ಒಂದು ಹನಿ ಬೀಳುವುದಿಲ್ಲ. ನಾವು 350 ಅಡಿ ಮಾತ್ರ ಕೊರೆದು ಉಳಿದಿದ್ದು ನೀನು ಕೊರೆಸಬೇಕು ಅದಕ್ಕೆ ದುಡ್ಡು ನೀನು ತರಬೇಕು ಅಂದರೆ ಆ ಬಡವ ಎಲ್ಲಿಂದ ತರುತ್ತಾನೆ? ಕೊಡುವತಕ್ಕಂಥ ಕೊಳವೆಬಾವಿಗಳಿಗೆ ನಾವು ಸಾಕಷ್ಟು ಹಣವನ್ನು ಮೀಸಲಾಗಿಟ್ಟು ಕೊಡಬೇಕು ಎಂದು ನಾನು ಸರ್ಕಾರದಲ್ಲಿ ಮತ್ತೊಮ್ಮೆ ಒತ್ತಾಯವನ್ನು ಮಾಡುತ್ತಾ, ತಾವು ಏನು ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅನೇಕ ಅಂಶಗಳು, ಕಳೆದ ನಾಲ್ಕು ವರ್ಷದ್ದನ್ನು ಸೇರಿಸಿ ಒಂದೇ ಭಾಷಣದಲ್ಲಿ ಎಲ್ಲಾ ಸೇರಿಸಿ ರಾಜ್ಯಪಾಲರು ಸದನದ ಗಮನವನ್ನು ಸೆಳೆದಿದ್ದಾರೆ. ಇದರಲ್ಲಿ ಅನೇಕ ಪೊಳ್ಳು ಭರವಸೆಗಳು ತುಂಬಿವೆ, ಅವೆಲ್ಲವನ್ನೂ ಮಾತನಾಡಲಿಕ್ಕೆ ಸಮಯವಿಲ್ಲದೇ ಇರುವ ಕಾರಣಕ್ಕೆ ನಾನು ಇಷ್ಟು ಅಂಶಗಳನ್ನು ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯುತ್ತಾ ಇವುಗಳಿಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತಾ, ಇದರ, ಬಗ್ಗೆ ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ತಮಗೂ ಸಹ ವಂದಿಸಿ, ನನ್ನ ಧನ್ಯವಾದಗಳನ್ನು ತಿಳಿಸುತ್ತಾ ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ವಂದನೆಗಳು.

ಛೇರ್ಮನ್ : ಸನ್ಮಾನ್ಯ ಕೃಷ್ಣೆಗೌಡರು ವಯಸ್ಸಿನಲ್ಲಿ ಚಿಕ್ಕವರು, ಈ ಸದನದಲ್ಲಿ ಬಹುಶಃ ಅವರೇ ಚಿಕ್ಕವಯಸ್ಸಿನವರು. ರಾಜಕೀಯದ ಸಂಪರ್ಕವಿಲ್ಲದೇ ದೇಶ ಬಿಟ್ಟು ಬಹುದೂರ ದೇಶದಲ್ಲಿ ಇದ್ದಂಥ ಒಬ್ಬ ಯುವಕ, ಇವತ್ತು ಅವರ ಸದನದ ಚೊಚ್ಚಲ ಭಾಷಣ, ಬಹುಶಃ ಎಲ್ಲರು ಮೆಚ್ಚುವಂಥ ರೀತಿಯಲ್ಲಿ ಪಾಯಿಂಟು ಟೂ ಪಾಯಿಂಟು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ಅತಿ ಅವಶ್ಯಕವಾಗಿರುವಂಥ ರೀತಿಯಲ್ಲಿ ಅವರು ಮಾತನಾಡಿದ್ದು ತುಂಬಾ ಅಭಿನಂದನಾರ್ಹರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಅವರಿಗೆ ಹೇಳಿ ನನ್ನ ಧನ್ಯವಾದಗಳನ್ನು ಅವರಿಗೆ ಅರ್ಪಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಆ ಬ್ಲಡ್ ಇದೆ ಅಲ್ಲವೇ? ಆ ಸಂಸ್ಕಾರ ಮಾನ್ಯ ಕೃಷ್ಣೆಗೌಡರವರಿಗೆ ಇದೆ. ಹುಲಿ ಹೊಟ್ಟೆಯಲ್ಲಿ ಬೆಕ್ಕು ಗಿಕ್ಕು ಹುಟ್ಟಿಬಿಟ್ಟರೆ ನಾವೇನಾದರೂ ಹೇಳಬಹುದಿತ್ತು, ಹುಲಿಯ ಹೊಟ್ಟೆಯಲ್ಲಿ ಹುಲಿ ಹುಟ್ಟಿರುವುದರಿಂದ, ಆ ಬ್ಲಡ್ ಇದೆ ಅಲ್ಲಾ ಆ ಸಂಸ್ಕಾರ ಆ ರಕ್ತದ ಸಂಸ್ಕಾರ ಅದು ಮಾನ್ಯ ಕೃಷ್ಣೆಗೌಡರಿಗೆ ಇದೆ.

ಶ್ರೀ ಎಸ್.ಜಿ. ನಂಜಯ್ಯನಮಠ್ : ಮಾನ್ಯ ಕೃಷ್ಣಮೂರ್ತಿಯವರೇ, ನಾವು ಅದಕ್ಕೆ ಸಂತೋಷಪಡುತ್ತೇವೆ.

ಶ್ರೀ ಕೃಷ್ಣೆಭೈರೇಗೌಡ : ತಾವು ಹಾಗೂ ಸದನದ ಸದಸ್ಯರು ಏನು ಪ್ರೀತಿ ವಿಶ್ವಾಸ ನಮ್ಮ ತಂದೆಯವರ ಮೇಲೆ ತೋರಿಸಿದ್ದರೆ. ನಮ್ಮ ತಂದೆಯ ಮೇಲೆ ಎಲ್ಲಾ ಪಕ್ಷದ ಸದಸ್ಯರು ಇದೇ ರೀತಿಯ ಗೌರವವನ್ನು ತೋರಿಸುತ್ತಿದ್ದರು ಎಂಬುದು ನನಗೆ ತಿಳಿದಿತ್ತು. ಅದೇ ರೀತಿಯ ಪ್ರೀತಿ ವಿಶ್ವಾಸವನ್ನು ನನ್ನ ಮೇಲೆ ಕೂಡ ತೋರಿಸಿದ್ದಾರೆ. ಅದಕ್ಕಾಗಿ ತಮ್ಮೆಲ್ಲರಿಗೂ ಕೂಡ ನನ್ನ ಧನ್ಯವಾದಗಳನ್ನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ವಂದನೆಗಳು.

ಛೇರ್ಮನ್ : ನೆಕ್ಸ್ಟ್ ರೇವುನಾಯಕ್ ಬೆಳಮಗಿಯವರು, ಒಂದು ವಿಷಯ, ಗಮನದಲ್ಲಿಟ್ಟು ಕೊಳ್ಳಬೇಕು, ಬೆಳಿಗ್ಗೆ ಹೇಳಿರುವಾಗೆ ಸದನ ಮುಂದುವರಿಯುವುದಿಲ್ಲ. ಇವತ್ತು ತೀರುತ್ತೆ. ಮಾನ್ಯ ಕಾನೂನು ಮಂತ್ರಿಗಳು ಉತ್ತರಕ್ಕೆ 5–30ಕ್ಕೆ ನನಗೆ ಅವಕಾಶ ಮಾಡಿಕೊಡಬೇಕೆಂದು

ಕೇಳಿದರು, ಒಂದು ಹತ್ತು ನಿಮಿಷ ಜಾಸ್ತಿ ಹೋಗಬಹುದು, ಆದರೆ ಭಾರಿ ಸಮಯ ತೆಗೆದುಕೊಳ್ಳದೆ, ಸನ್ಮಾನ್ಯ ಕೃಷ್ಣೆಗೌಡರವರು ಏನು ಹೇಳಿದರು ಆ ರೀತಿಯಲ್ಲಿ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂಥ ತಮಗೆ ಆಗಿರತಕ್ಕಂಥ ತೊಂದರೆ ಏನೂ ಇದೆ, ಇಷ್ಟು ಬಿಟ್ಟು, ಇಡೀ ರಾಜ್ಯಪಾಲರ 62 ಪುಟವನ್ನು ಕೈಗೆ ತೆಗೆದುಕೊಳ್ಳುವುದು ಬೇಡಿ ಎಂಬುದು ನನ್ನ ಬೇಡಿಕೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ನನಗೆ ಅವಕಾಶ ಮಾಡಿಕೊಡಬೇಕು.

ಛೇರ್ಮನ್ : ತಮಗೆ ಅವಕಾಶ ಕೊಡುತ್ತೇನೆ, ಬೆಳಿಗ್ಗೆ ತಮ್ಮನ್ನು ಕರೆದೆ ತಾವು ಇರಲಿಲ್ಲ. ಮಾತನಾಡಲಿಕ್ಕೆ ಹೆಸರು ಕೊಟ್ಟ ಮೇಲೆ ಕಾಯಬೇಕಾಗುತ್ತದೆ, ನಾನು ತಮ್ಮನ್ನು ಬೆಳಿಗ್ಗೆ ಎರಡು ಸಲ ಕೆರೆದೆ, ಆದರೆ ತಾವು ಇರಲಿಲ್ಲ. ಎರಡು ಸಲ ಕೂಗಿದಾಗಲೂ ತಾವು ಬರಲಿಲ್ಲ. ಕೊಡೋಣ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ನಮ್ಮ ಕಡೆಯವರು ಯಾರೋ ತೀರಿ ಹೋದರು ಹೀಗಾಗಿ ಇರಲಿಲ್ಲ.

ಛೇರ್ಮನ್ : ಆಗಲಿ ಸಮಯ ಕೊಡೋಣ, ರೌಂಡು ಸುತ್ತಿಕೊಂಡು ಬರುತ್ತದೆ ಅಲ್ಲವೆ?

† ಶ್ರೀ ರೇವುನಾಯಕ ಬೆಳಮಗಿ (ಕಮಲಾಪುರ) : ಮಾನ್ಯ ಛೇರ್ಮನ್ ಅವರೇ, ರಾಜ್ಯಪಾಲರ ಭಾಷಣದ ವಂದನಾರ್ಪಣೆಯ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಹೇಳುತ್ತಾ, ಗುಲ್ಬರ್ಗ ಹಾಗೂ ಬೀದರ್ ಜಿಲ್ಲೆಗಳು ಸತತ ಮೂರು ವರ್ಷಗಳಿಂದ ಬರಗಾಲದಿಂದ ಬಳಲುತ್ತಿರುವುದನ್ನು ನೋಡುತ್ತಿದ್ದೇವೆ. ಈ ಬರಗಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ, ದನಕರುಗಳಿಗೆ ಮೇವಿನ ಸಮಸ್ಯೆ, ಅನೇಕ ಸಮಸ್ಯೆಗಳು ಮೂರು ವರ್ಷಗಳಿಂದ ಸತತ ಬರಗಾಲ ಇರುವುದರಿಂದ ಬಹಳ ಸಮಸ್ಯೆಯಾಗಿದೆ. ಅದರಲ್ಲಿ ಗುಲ್ಬರ್ಗ ಜಿಲ್ಲೆಯ ಕಮಾಲಾಪುರ ಕ್ಷೇತ್ರವೆಂದರೆ, ತೀರಾ ಹಿಂದುಳಿದ ಕ್ಷೇತ್ರ, ಅಲ್ಲಿ ಕೂಲಿಕಾರ್ಮಿಕರ ಸಂಖ್ಯೆ ಹೆಚ್ಚಿಗೆ ಇದೆ, ರೈತರು ಬರಗಾಲದ ಭೀತಿಯಿಂದ ಬೀದಿಪಾಲಾಗುತ್ತಿದ್ದಾರೆ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಕುಡಿಯುವ ನೀರಿನ ಸಮಸ್ಯೆಗೆ ಸರ್ಕಾರಕ್ಕೆ ನಾವು ಬಹಳಷ್ಟು ಒತ್ತಾಯ ಮಾಡಿದರೂ ಪರಿಹಾರ ಸಿಕ್ಕುತ್ತಿಲ್ಲ. ನಮ್ಮ ಕಡೆಗೆ ಸಾಕಷ್ಟು ಸರ್ಕಾರದವರು ಬೋರ್ ಹಾಕಿದರೂ ಕೂಡ ನೀರು ಸಿಕ್ಕುತ್ತಿಲ್ಲ. ಯಾವ ಹಳ್ಳಿಗಳಿಗೂ ಹೋದರೂ ಸಮಸ್ಯೆಯಿರತಕ್ಕಂಥ ಹಳ್ಳಿಗಳಿಗೆ ಹೋಗಲಿಕ್ಕೆ ನಮಗೆ ಹೆದರಿಕೆಯಾಗುತ್ತಿದೆ. ನಮ್ಮ ತಾಯಂದಿರು ಈ ಊರಿಗೆ ಎಂಎಲ್‌ಎ ಬರುತ್ತಾರೆಂದರೆ ಕೊಡ ತೆಗೆದುಕೊಂಡು ದಾರಿಯಲ್ಲಿ ಅಡ್ಡಗಟ್ಟಿ ಅವರು ಛೀಮಾರಿ ಹಾಕುತ್ತಿದ್ದಾರೆ. ಉದಾಹರಣೆಗೆ ಹೇಳಬೇಕೆಂದರೆ, ಅನೂರು ಎನ್ನುವ ಗ್ರಾಮದಲ್ಲಿ ಕೊಳವೆ ಬಾವಿ ಹಾಕಿದರೆ ನೀರು ಬೀಳುತ್ತಿಲ್ಲ. ಅವರು ಡಿಮ್ಯಾಂಡ್ ಮಾಡುತ್ತಿದ್ದಾರೆ ನೀವು ಎಷ್ಟು ಕೊಳವೆ ಬಾವಿಗಳನ್ನು ಹಾಕಿದರೂ ನೀರು ಬೀಳುವುದಿಲ್ಲ. ನಮ್ಮ ಭಾಗಕ್ಕೆ ತೆರೆದ ಬಾವಿ ಹೊಡೆದರೆ ಮಾತ್ರ ನೀರು ಬೀಳುತ್ತದೆ ಇದು ಸರ್ಕಾರ ಗಮದಲ್ಲಿಟ್ಟುಕೊಂಡು ತೆರೆದ ಬಾವಿಗೆ ನೀವು ಅವಕಾಶ ಮಾಡಿಕೊಡಬೇಕೆಂದು ಜನರು ಒತ್ತಾಯಿಸುತ್ತಿದ್ದಾರೆ. ಉದಾಹರಣೆಗಾಗಿ ಒಂದು ಗೋಗಿ ತಾಂಡಾ ಇದೆ ನೀರು ಬೀಳುತ್ತಿಲ್ಲ. ಅಲ್ಲಿ ಓಪನ್ ಬಾವಿ ಹೊಡೆದಿದ್ದಾರೆ ನೀರು ಬಿದ್ದಿದೆ. ಅದಕ್ಕಾಗಿ ಅಲ್ಲಿಂದ ಪೈಪ್ ಲೈನ್ ಮಾಡಲಿಕ್ಕೆ ದುಡ್ಡು ಇಲ್ಲ. ಆ ತಾಂಡಾಕ್ಕೆ ನೀರು ಕೊಡಿಸಬೇಕೆಂದರೆ ಆಗುತ್ತಿಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ

ಮಾಡುತ್ತಿದ್ದೇನೆ. ಹೋದ ಸಲ ನಾನು ಇದೇ ಸದನದಲ್ಲಿ ಮಾತನಾಡಿದ್ದೇನೆ. ನೀರಿನ ಸಮಸ್ಯೆಗಾಗಿ ಇಬ್ಬರು ನಮ್ಮ ತಾಯಂದಿರು ಕುಡಿಯುವ ನೀರಿನ ಸಮಸ್ಯೆಯ ಸಲುವಾಗಿ ಒಂದು ನಾಗಮ್ಮ ವೀರಣ್ಣ ಪೂಜಾರಿ ಕೊಟ್ಟರಗಾ ಗ್ರಾಮದವರು ಮತ್ತೊಂದು ಮಲ್ಲಾಮ್ಮ ಕಲ್ಯಾಣಿ ಬಿಂಪೂರೆ ಬದನೂರು ಗ್ರಾಮದವರು, ಬಾವಿಯಲ್ಲಿ ನೀರು ತರಲಿಕ್ಕೆ ಹೋಗಿ ಆ ಬಾವಿಯಲ್ಲಿ ಬಿದ್ದು ಪ್ರಾಣ ಕಳೆದುಕೊಂಡರು. ಇದೇ ಸದನದಲ್ಲಿ ನಾನು ಬಹಳ ದುಃಖದಿಂದ ನೊಂದು ಮಾತನಾಡಿದ್ದೇನೆ. ಸರ್ಕಾರಕ್ಕೆ ನಾನು ಒತ್ತಾಯ ಮಾಡಿದ್ದೇನೆ. ಅವರ ಕುಟುಂಬಕ್ಕೆ ಒಂದೊಂದು ಲಕ್ಷ ರೂಪಾಯಿ ಪರಿಹಾರಧನ ಕೊಡಬೇಕೆಂದು ನಾನು ಒತ್ತಾಯ ಕೂಡ ಮಾಡಿದ್ದೇನೆ. ಆದರೆ ಸರ್ಕಾರ ಇಲ್ಲಿಯವರೆಗೆ ಯಾವ ಕ್ರಮ ಕೈಗೊಂಡಿಲ್ಲ. ಇವತ್ತು ಸಿಡಿಲು ಬಿದ್ದರೆ ಒಂದು ಲಕ್ಷ ರೂ ಪರಿಹಾರ ಕೊಡುತ್ತಾರೆ, ಮನೆ ಕುಸಿದು ಸತ್ತರೆ ಒಂದು ಲಕ್ಷ ಪರಿಹಾರ ಕೊಡುತ್ತಾರೆ, ಆದರೆ ನೀರಿಗಾಗಿ ಬಾವಿಯಲ್ಲಿ ಬಿದ್ದು ಪ್ರಾಣ ಕಳೆದುಕೊಂಡಿದ್ದಾರೆ. ಅದಕ್ಕೆ ಇಲ್ಲಿಯವರೆಗೆ ಅವರಿಗೆ ಪರಿಹಾರ ಸಿಕ್ಕಿಲ್ಲ. ಅದಕ್ಕೆ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. ಕಳಕಳಿಯ ವಿನಂತಿ ಮಾಡುತ್ತೇನೆ. ಆ ನೊಂದವರ ಮನೆಗೆ, ಅವರು ತಹಸೀಲ್ದಾರ್ ಆಫೀಸ್‌ಗೆ, ಡಿಸಿ ಆಫೀಸ್‌ಗೆ ಅವರು ಓಡಾಡಿ ಓಡಾಡಿ ಅವರು ಸೋತಿದ್ದಾರೆ, ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಆ ಕುಟುಂಬದವರಿಗೆ ಒಂದೊಂದು ಲಕ್ಷ ರೂ. ಪರಿಹಾರಧನ ಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಾ, ಅದರ ಜೊತೆಯಲ್ಲಿ ನಮ್ಮ ಯುವಕ ಶಾಸಕರು ಒಂದು ಮಾತು ಹೇಳಿದರು. ಎಸ್‌ಸಿ-ಎಸ್‌ಟಿ ಜನಾಂಗಕ್ಕೆ ಬೋರ್‌ವೆಲ್ ಕೊರೆಯುವುದರ ಬಗ್ಗೆ, ಇವತ್ತೇನು ನೀವು ಬೋರ್‌ವೆಲ್ ಕೊರೆಯುತ್ತೀರಿ, ಬೇಕಾದರೆ ಅದರ ಟಾರ್ಗೆಟ್ ಕಡಿಮೆ ಮಾಡಿರಿ, ಆದರೆ ಏನಾಗಿದೆ ಎಂದರೆ, 65 ಸಾವಿರ ರೂಪಾಯಿ ನೀವು ಲಿಮಿಟ್ ಮಾಡಿದಿರಿ, ಅದು ಬೋರ್‌ವೆಲ್ ಕೊರೆದ ಬಳಿಕ ಒಂದು ಮೋಟಾರ್‌ಗೆ ಅದಕ್ಕೆ ಅಡ್ಜಸ್ಟ್ ಆಗುತ್ತಿಲ್ಲ. ಆಫೀಸರ್‌ಗಳು ನಮ್ಮ ಕೈಯಲ್ಲಿ ಆಗುವುದಿಲ್ಲವೆಂದು ಹೇಳುತ್ತಾರೆ. ನೀವು 25 ಸಾವಿರ, 35 ಸಾವಿರ ತುಂಬಿ ಎಂದು ಹೇಳುತ್ತಾರೆ. ಈ ಕೂಲಿ ಮಾಡುವವರು ಎಲ್ಲಿಂದ ತುಂಬಬೇಕು? ಅದಕ್ಕಾಗಿ ಸರ್ಕಾರದವರು ದೊಡ್ಡ ಮನಸ್ಸು ಮಾಡಿ, ನಿಮಗೆ ಕಳಕಳಿಯಿದ್ದರೆ ಎಸ್‌ಸಿ-ಎಸ್‌ಟಿ ಜನಾಂಗದ ಬಗ್ಗೆ ಕಳಕಳಿಯಿತ್ತು ಎಂದರೆ ಒಂದೊಂದು ಲಕ್ಷ ರೂಪಾಯಿ ಮಾಡಿ, ಅವನಿಗೆ ಕೊಳವೆ ಬಾವಿ ಹೊಡೆಸಿ, ಮೋಟಾರ್ ಕೂಡಿಸಿ, ಪೈಪ್‌ಲೈನ್ ಮಾಡಿ ಅವರಿಗೆ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಒಂದು ನಿಮಿಷ, ಮಾನ್ಯ ಕಾಗೋಡು ತಿಮ್ಮಪ್ಪನವರು ಆಗ ಸಚಿವರು ಆಗಿದ್ದರು, ಆಗಿನಿಂದ ಮತ್ತೇನೂ ನಮಗೆ ಬರಲೇ ಇಲ್ಲ. ತೆರೆದ ಬಾವಿ ಎಂದು ಕೊಟ್ಟಿರಿ, ಆಗ ತಾವು ಇದ್ದೀರಿ, ಮತ್ತೆ ಪಟ್ಟಿ ತೆಗೆದುಕೊಳ್ಳುತ್ತಿದ್ದಾರೆ. ಇದು ಆಗಲೇ ಇಲ್ಲ. ಆಗಲೇ ಮಾನ್ಯ ಕೃಷ್ಣಭೈರೇಗೌಡರವರು ಹೇಳಿದರು. ಹಾಗೂ ನಮ್ಮ ಅನುಭವ ಕೂಡ. 350 ಅಡಿ, 450 ಅಡಿ ಎಂದು ಕೇಸಿಂಗ್ ಕೊಡುವುದು, ಮತ್ತೆ ಅವರು 35 ಸಾವಿರ ತುಂಬುವುದು ಪುನಃ ಪವರ್‌ಗೆ ತುಂಬುವುದು ಎಂದು ಹೇಳಿಕೊಂಡು, ಏನೂ ಕೆಲಸವಾಗುತ್ತಿಲ್ಲ. ಇದು ಗಂಗಾಕಲ್ಯಾಣವಾಗಬಹುದು ಅಥವಾ ವೈಯಕ್ತಿಕ ಕೊಳವೆ ಬಾವಿ ಆಗಬಹುದು. ಎರಡರಲ್ಲೂ ಏನೂ ಕೆಲಸವಾಗುತ್ತಿಲ್ಲ ಆ ಸಮಾಜಕ್ಕೆ, ದಯವಿಟ್ಟು ತಾವು ಏನೋ ಹೇಳುತ್ತಿದ್ದೀರಿ ಹೇಳಿ.

5.20 ಪಿಎಂ

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ನಮ್ಮ ಹತ್ತಿರ ಲಭ್ಯವಿದ್ದಂಥ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಆ ಸಂದರ್ಭದಲ್ಲಿ ಈ ಒಂದು ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಭೂಮಿ ಇರತಕ್ಕಂಥ ಎಲ್ಲಾ ಪರಿಶಿಷ್ಟವರ್ಗ ಮತ್ತು ಪರಿಶಿಷ್ಟ ಜಾತಿಯ ಜನಾಂಗದವರಿಗೆ ಏಕಕಾಲದಲ್ಲಿ ನಮ್ಮ ಕಡೆಯಿಂದ ಕೊಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೋಸ್ಕರ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೂಡ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನೂ ಕೂಡ ರಚನೆ ಮಾಡಿದ್ದೇವೆ. ಒಂದು ಘಟಕದ ವೆಚ್ಚ 65 ಸಾವಿರ ರೂಪಾಯಿಗಳನ್ನು ಮುಫತ್ತಾಗಿ ಕೊಡುತ್ತೇವೆ. ಅದಕ್ಕಿಂಥ ಹೆಚ್ಚಾಗಿ ಅಂದರೆ 75 ಸಾವಿರ ರೂಪಾಯಿ ಅದಲ್ಲಿ ಉಳಿದ 10 ಸಾವಿರ ರೂಪಾಯಿಗಳನ್ನು ನಿಗಮದ ವತಿಯಿಂದ ಸಾಲದ ರೂಪದಲ್ಲಿ ಕೊಡುತ್ತೇವೆ ಎಂದು ಹೇಳಿದ್ದೆವು. ಸಾಧ್ಯವಾದಮಟ್ಟಿಗೆ 65 ಸಾವಿರ ರೂಪಾಯಿ ವೆಚ್ಚದಲ್ಲಿ ಆಗತಕ್ಕಂಥ ಘಟಕವನ್ನೇ ಆಯ್ಕೆ ಮಾಡಿ ಎಂದು ಹೇಳಲಾಗಿತ್ತು. ನಾನು ಒಂದು ಸಾರಿ ಬಾಗಲಕೋಟೆಗೆ ಹೋಗಿದ್ದೆ. ಅಲ್ಲೊಂದು ಕಡೆ ಬೋರ್‌ವೆಲ್‌ನ್ನು ತೋಡಿದ್ದರು. ಈ ಬೋರ್‌ವೆಲ್‌ಗೆ ವಿದ್ಯುಚ್ಛಕ್ತಿ ನೀಡುವುದಕ್ಕಾಗಿ 2.5 ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿತ್ತು. ನಮ್ಮಲ್ಲಿ ಫಲಾನುಭವಿಗಳ ಆಯ್ಕೆಗೆ ಏನೂ ತೊಂದರೆಯಿಲ್ಲ. ನಮ್ಮಲ್ಲಿ ಎಲ್ಲಾ ಜನರಿಗೆ ಕೊಡತಕ್ಕಂಥ ಒಂದು ವ್ಯವಸ್ಥೆ ಇದ್ದಿದ್ದರೆ ಆಗ ಅದು 1 ಅಥವಾ 2 ಕಿ.ಮೀ. ದೂರದಲ್ಲಿದ್ದರೂ ಕೂಡ ಅದಕ್ಕೆ ವಿದ್ಯುತ್ ಕೊಡತಕ್ಕಂಥ ವ್ಯವಸ್ಥೆ ಮಾಡಬಹುದು. ಐದು ಸಾವಿರ ವೈಯಕ್ತಿಕ ಬೋರ್‌ವೆಲ್‌ಗೆ ಅನುಮತಿ ಕೊಟ್ಟಾಗ ಒಂದೊಂದು ಕ್ಷೇತ್ರಕ್ಕೆ ಹಿಂದುಳಿದ ವರ್ಗ ಮತ್ತು ಇತರೆ ಎಲ್ಲಾ ವರ್ಗದವರೆಲ್ಲರೂ ಸೇರಿ ಸುಮಾರು 50 ಬೋರ್‌ವೆಲ್ ಬರುವಂತೆ ಒಂದು ಕಾರ್ಯಕ್ರಮವನ್ನು ರೂಪಿಸಿದ್ದೆವು. ತದನಂತರ ಅದರ ಪೂಲಿಂಗ್‌ನಲ್ಲಿ ಸಾಕಷ್ಟು ಹಣ ಸಿಗಲಿಲ್ಲ. ಆದರೆ, ಒಂದು ವರ್ಷ ಇದನ್ನು ಮಾಡಿದೆವು. ಇದರಲ್ಲಿ ಎಸ್‌ಸಿ:ಎಸ್‌ಟಿ ವರ್ಗದವರಿಗೆ 25 ಬೋರ್‌ವೆಲ್‌ಗಳನ್ನು ಕೊಡತಕ್ಕಂಥ ವ್ಯವಸ್ಥೆ ಇತ್ತು. ಸುಮಾರು 25 ಬೋರ್‌ವೆಲ್‌ಗಳನ್ನು 65 ಸಾವಿರ ರೂಪಾಯಿ ವೆಚ್ಚದಲ್ಲಿ ಬರತಕ್ಕಂಥ ಘಟಕಗಳನ್ನು ಸಾಧ್ಯವಾದ ಮಟ್ಟಿಗೆ ಗುರುತಿಸಿದರೆ ಫಲಾನುಭವಿಗೆ ಮುಫತ್ತಾಗಿ ಇದನ್ನು ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ನಾನು ಕಳುಹಿಸಿರತಕ್ಕಂಥ ಸುತ್ತೋಲೆಯಲ್ಲಿ ಏನು ಹೇಳಿದ್ದೇನೆ ಎಂದರೆ, ಸಾಧ್ಯವಾದಮಟ್ಟಿಗೆ ಒಂದು ಘಟಕಕ್ಕೆ 65 ಸಾವಿರ ರೂಪಾಯಿ ವೆಚ್ಚ ಬರುವ ರೀತಿಯಲ್ಲಿ ಆಯ್ಕೆ ಮಾಡಿ ಎಂದು ಹೇಳಿದ್ದೇನೆ. ಆದ್ದರಿಂದ ವಿವೇಚನೆ ಮಾಡಿ ಆಯ್ಕೆ ಮಾಡಿದ್ದರೆ ಮಾತ್ರ ಸಂಬಂಧಪಟ್ಟವರಿಗೆ ಮುಫತ್ತಾಗಿ ಈ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ನಮ್ಮ ಕಡೆ ಸುಮಾರು 700 ಅಡಿ ಆಳಕ್ಕೆ ಬೋರ್ ಹಾಕಿದ್ದರೂ ಕೂಡ ನೀರು ಬರುತ್ತಿಲ್ಲ. ಆದ್ದರಿಂದ ಈಗಾಗಲೇ ನಿಗದಿ ಮಾಡಿರತಕ್ಕಂಥ ಯೂನಿಟ್ ಕಾಸ್ಟ್ ಸಾಕಾಗುವುದಿಲ್ಲ. ಆದ್ದರಿಂದ ಇದನ್ನು ಜಾಸ್ತಿ ಮಾಡಬೇಕೆಂದು ಈಗಾಗಲೇ ಹೇಳಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಎಲ್ಲಾ ಕಡೆ ಒಂದೇ ರೀತಿಯಲ್ಲಿರುವುದಿಲ್ಲ. ಅಂದರೆ, ನಮ್ಮ ಕಡೆ ಒಂದು ರೀತಿ ಇದೆ. ಮತ್ತೆ ನಿಮ್ಮ ಕಡೆ ಒಂದು ರೀತಿಯಿರುತ್ತದೆ. ಈ ಒಂದು ಕಾರಣದಿಂದಲೇ ಇವತ್ತಿನದಿವಸ ಓಪನ್ ವೆಲ್ ಮಾಡಬಹುದೆಂದು ಮತ್ತು ಹೊಳೆ ಅಥವಾ ಕೆರೆಯಿಂದ ಜಾಕ್‌ವೆಲ್ ವ್ಯವಸ್ಥೆ ಮಾಡಿಕೊಳ್ಳಬಹುದೆಂದು ಹೇಳಿದ್ದೇನೆ. ಕೇವಲ ಬೋರ್‌ವೆಲ್‌ಗಳನ್ನೆ ತೆಗೆದುಕೊಂಡು ಈ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳಿಲ್ಲ.

ಮಲೆನಾಡು ಪ್ರದೇಶದಲ್ಲಿ ಹೊಳೆ ಮತ್ತು ಕೆರೆ ಬದಿಯಲ್ಲಿ ಹಾಕುವುದಕ್ಕೆ ಬರುತ್ತದೆ. ಇವತ್ತಿನದಿವಸ ನಮಗೆ ಬೇಕಾದಷ್ಟು ಹಣ ಸಿಕ್ಕಿದರೆ ಏನೂ ತೊಂದರೆಯಾಗುವುದಿಲ್ಲ. ಇದಕ್ಕೆ ಸಾಕಾಗುವಷ್ಟು ಹಣ ನಮಗೆ ಬೇಕಾಗಿದೆ. ಹಣದ ಲಭ್ಯತೆಯ ದೃಷ್ಟಿಯಿಟ್ಟುಕೊಂಡು ನಾವು ವಿಚಾರ ಮಾಡುತ್ತೇವೆ.

ಶ್ರೀ ರೇವುನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ, ಈಗೇನು ನಮ್ಮಲ್ಲಿ ಕೊಳವೆ ಬಾವಿಗಳನ್ನು ಕೊರೆದಿದ್ದಾರೆ ಅದರಲ್ಲಿ ಸಾಕಷ್ಟು ನೀರು ಇದೆ. ಈ ವಿಷಯವನ್ನು ಅಲ್ಲಿರತಕ್ಕಂಥ ಜನರೇ ಬಂದು ನನ್ನ ಹತ್ತಿರ ಹೇಳಿದ್ದಾರೆ. ಆದರೆ, ಹೆಚ್ಚುವರಿಯಾಗಿ ತಗಲತಕ್ಕಂಥ 10 ರಿಂದ 20 ಸಾವಿರ ರೂಪಾಯಿಗಳನ್ನು ಅವರಿಂದ ತುಂಬುವುದಕ್ಕೆ ಅವರ ಕೈಯಿಂದ ಆಗುವುದಿಲ್ಲ. ನೀರಿದ್ದರೂ ಕೂಡ ಅವರಿಗೆ ಹಣದ ಕೊರತೆ ಇರುವುದರಿಂದ ಅದನ್ನು ಹಾಗೆ ಬಿಟ್ಟುಬಿಡಬೇಕಾಗುತ್ತದೆ. ಏಕೆಂದರೆ, ಅವರು ಕೂಲಿಕಾರ್ಮಿಕರು ಮತ್ತು ಕಡುಬಡವರಾಗಿರುತ್ತಾರೆ. ಇಂಥವರನ್ನೆ ನಾವು ಇವತ್ತಿನದಿವಸ ಆಯ್ಕೆ ಮಾಡುತ್ತೇವೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಜನರು ನನ್ನ ಹತ್ತಿರ ಬಂದು ಬೋರ್‌ವೆಲ್‌ನಲ್ಲಿ ಸಾಕಷ್ಟು ನೀರು ಸಿಕ್ಕಿದೆ. ಆದರೆ ಹೆಚ್ಚುವರಿ ಹಣವನ್ನು ನನ್ನಿಂದ ತುಂಬುವುದಕ್ಕೆ ಸಾಧ್ಯವಾಗುತ್ತಿಲ್ಲ. ತಾವು ನನಗೆ ಸ್ಯಾಂಕ್ಷನ್ ಮಾಡಿದ್ದಕ್ಕೆ ತಮಗೆ ಧನ್ಯವಾದಗಳು ಎಂದು ಹೇಳಿ ಹೋಗುತ್ತಿದ್ದಾರೆ. ಆದ್ದರಿಂದ, ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಇದಕ್ಕೆ ಒಂದು ಲಕ್ಷ ರೂಪಾಯಿ ಮಾಡಿದರೆ ಮಾತ್ರ ಅವರಿಗೆ ಅನುಕೂಲವಾಗುತ್ತದೆ ಎಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಹಾಗೆಯೇ ಇದನ್ನು ಕಳಕಳಿಯಿಂದ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಕೂಡ ಮಾಡಿಕೊಳ್ಳುತ್ತೇನೆ. ಇವತ್ತಿನದಿವಸ ರೈತರ ಸಮಸ್ಯೆ ಬಗ್ಗೆ ಈಗಾಗಲೇ ಸಾಕಷ್ಟು ಜನ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಆದರೆ, ನಮ್ಮಲ್ಲಿ ಆಗಿರತಕ್ಕಂಥ ತಾರತಮ್ಯದ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಸಲ ರೈತರಿಗೆ ಬೆಳೆ ವಿಮೆಗಾಗಿ ಕೊಟ್ಟಿರತಕ್ಕಂಥದ್ದರಲ್ಲಿ ಜೇವರ್ಗಿಗೆ 80 ಪರ್ಸೆಂಟ್ ಮತ್ತು ಗುರುಮಿಠಕಲ್ ಹಾಗೂ ಯಾದ್‌ಗಿರಿಯಲ್ಲಿ 85 ಮತ್ತು 90 ಪರ್ಸೆಂಟ್‌ನಷ್ಟು ಬೆಳೆ ವಿಮೆ ಹಣವನ್ನು ಕೊಟ್ಟಿದ್ದಾರೆ. ಆದರೆ, ಆಳಂದ ಮತ್ತು ಗುಲ್ಬರ್ಗ ತಾಲ್ಲೂಕಿನ ರೈತರಿಗೆ ಕೇವಲ 18 ರಿಂದ 20 ಪರ್ಸೆಂಟ್‌ನಷ್ಟು ಬೆಳೆ ವಿಮೆ ಹಣವನ್ನು ಕೊಟ್ಟಿದ್ದಾರೆ. ಈ ರೀತಿಯಾದ ತಾರತಮ್ಯವನ್ನು ಸರ್ಕಾರದವರು ಏಕೆ ಮಾಡುತ್ತಿದ್ದಾರೆ? ನಾವು ಬಿ.ಜೆ.ಪಿ. ಶಾಸಕರು ಎಂದು ಈ ರೀತಿ ಮಾಡಲಾಗುತ್ತಿದೆಯೆ? ನೀವು ಬಿ.ಜೆ.ಪಿ ಶಾಸಕರಾಗಿರುವುದರಿಂದಲೇ ನಮಗೆ ಈ ರೀತಿಯಾಗಿದೆ ಎಂದು ರೈತರೇ ಹೇಳುತ್ತಿದ್ದಾರೆ. ಈ ಮಾತನ್ನು ನಾನು ಬಹಳ ನೊಂದು ಹೇಳಬೇಕಾಗಿದೆ. ನಾವು ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ ರೈತರನ್ನು ಮತ್ತು ಕೂಲಿಕಾರ್ಮಿಕರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತೇವೆ. ಆದ್ದರಿಂದ ಅಧಿಕಾರಕ್ಕೆ ಬಂದ ನಂತರ ಎಲ್ಲರನ್ನೂ ಸಮಾನ ರೀತಿಯಲ್ಲಿ ನೋಡಿಕೊಳ್ಳುವುದು ನಮ್ಮ ಕರ್ತವ್ಯವೆಂದು ಈ ಸದನದ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ನಮ್ಮಲ್ಲಿ ಹೆಚ್ಚು ಬರಗಾಲವಿರುವುದರಿಂದ ನಮ್ಮಲ್ಲಿ ದನಗಳನ್ನು ಕಸಾಯಿಖಾನೆಗೆ ಹೋಗುತ್ತಿವೆ. ಕೆ.ಡಿ.ಪಿ. ಸಭೆಯಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಕೃಷಿ ಅಧಿಕಾರಿಗಳು ಕುಳಿತುಕೊಂಡು ಮೇವು ಅಲ್ಲಿಗೆ ಹೋಯಿತು. ಇಲ್ಲಿಗೆ ಹೋಯಿತು ಎಂದು ಅಂಕಿ-ಅಂಶ ಹೇಳುತ್ತಾರೆ. ಎಲ್ಲಿಗೆ ಹೋಗುತ್ತದೆ ಎನ್ನತಕ್ಕಂಥದ್ದು ಗೊತ್ತಿಲ್ಲ. ಇವತ್ತಿನದಿವಸ ನಾವು ಹಳ್ಳಿಗೆ ಹೋದರೆ ರೈತರು ನಮಗೆ ಘೆರಾವು ಮಾಡುತ್ತಿದ್ದಾರೆ. ಮೇವು ಇಲ್ಲದೆ ದನಗಳನ್ನು

ಕಸಾಯಿಖಾನೆಗೆ ಕೊಡುತ್ತಿದ್ದಾರೆ. ಮತ್ತೆ ಒಂದು ಜೋಡಿ ಚೆನ್ನಾಗಿರತಕ್ಕಂಥ ಎತ್ತುಗಳ ಬೆಲೆ ಸುಮಾರು 40 ರಿಂದ 50 ಸಾವಿರ ರೂಪಾಯಿ ಇದ್ದರೆ ಇವತ್ತಿನದಿವಸ ಮೇವು ಇಲ್ಲದೇ ಇರುವುದರಿಂದ ಕೇವಲ 10 ರಿಂದ 11 ಸಾವಿರ ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. ಆದ್ದರಿಂಡ ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಒತ್ತಾಯ ಮಾಡುವುದೇನೆಂದರೆ, ಪ್ರತಿ ಎರಡು ಗ್ರಾಮ ಪಂಚಾಯತಿಗೊಂದು ಗೋಶಾಲೆಯನ್ನು ಪ್ರಾರಂಭ ಮಾಡಿ ರೈತರ ರಕ್ಷಣೆಗೆ ಸರ್ಕಾರ ಬರಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ, ರೈತರು ಮತ್ತು ಕೂಲಿಕಾರ್ಮಿಕರು ಸರ್ಕಾರಕ್ಕೆ ಶಾಪ ಹಾಕುತ್ತಾರೆಂದು ಹೇಳುತ್ತಿದ್ದೇನೆ. ಇವತ್ತಿನದಿವಸ ಒಂದು ತಿಂಗಳಿಗೆ 10 ರಿಂದ 12 ಲಕ್ಷ ರೂಪಾಯಿವರೆಗೆ ಸ್ಕೇರ್‌ಸಿಟಿ ಮೇಲೆ ಕೆಲಸ ಕೊಡುತ್ತಿದ್ದಾರೆ. ಈ ರೀತಿಯಾದರೆ ಕೂಲಿಕಾರ್ಮಿಕರು ಏನು ಮಾಡಬೇಕು? ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ಕೂಲಿಗಾಗಿ ಕಾಳು ಕಾರ್ಯಕ್ರಮವನ್ನು ಚಾಲನೆ ಮಾಡಿದ್ದಾರೆ. ಆದರೆ ಏನಾಗಿದೆ ಎಂದರೆ, ಇವತ್ತಿನದಿವಸ ಬಸ್‌ಸ್ಟ್ಯಾಂಡ್ ಮತ್ತು ರೈಲ್ವೆ ಸ್ಟೇಷನಲ್ಲಿ ಹೋಗಿ ನೋಡಿದರೆ ಇಲ್ಲಿರತಕ್ಕಂಥ ಕೂಲಿ ಕಾರ್ಮಿಕರು ಮುಂಬಯಿ ಅಥವಾ ಪೂನಾಗೆ ಹೋಗುತ್ತೇವೆಂದು ಕಣ್ಣಿನಲ್ಲಿ ನೀರು ಸುರಿಸಿ ಗುಳೆ ಹೋಗುತ್ತಿದ್ದಾರೆ. ಇವತ್ತಿನ ದಿವಸ ನಮ್ಮಲ್ಲಿರತಕ್ಕಂಥ ಬರಗಾಲವನ್ನು ಎದುರಿಸಬೇಕಾದರೆ ಕನಿಷ್ಟಪಕ್ಷ ಎರಡು ಗ್ರಾಮ ಪಂಚಾಯತಿ ನಡುವೆ ಒಂದು ಕೆಲಸವನ್ನಾದರೂ ತೆಗೆದುಕೊಳ್ಳಬೇಕು ಮತ್ತು ಎರಡು ಗ್ರಾಮ ಪಂಚಾಯತಿ ನಡುವೆ ಒಂದು ಗೋಶಾಲೆಯನ್ನು ತೆಗೆಯಬೇಕು. ಈ ರೀತಿ ಮಾಡಿದರೆ ಮಾತ್ರ ನಮ್ಮ ಜಾನುವಾರುಗಳು ಉಳಿಯುತ್ತವೆ ಮತ್ತು ಮುಂದಿನ ದಿನಗಳಲ್ಲಿ ನಮ್ಮ ರೈತರಿಗೆ ಒತ್ತುಕೊಡುವುದಲ್ಲದೆ ಅವರು ಬದುಕುವುದಕ್ಕೆ ಆಸೆ ಬರುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಹಳ್ಳಿಗಳಲ್ಲಿರತಕ್ಕಂಥ ರಸ್ತೆಗಳು ಬಹಳಷ್ಟು ಹದಗೆಟ್ಟಿವೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಈಗಾಗಲೇ ಯುವ ಸದಸ್ಯರಾಗಿರತಕ್ಕಂಥ ಮಾನ್ಯ ಕೃಷ್ಣೇಗೌಡರು ಹೇಳಿದ್ದಾರೆ. ಎರಡು ಅಥವಾ ನಾಲ್ಕು ತಿಂಗಳಲ್ಲಿ ಚುನಾವಣೆ ಇರುವುದರಿಂದ ನಾವು ಹಳ್ಳಿಗೆ ಹೋದಾಗ ಏನೂ ಮಾತನಾಡುವುದಕ್ಕೆ ಆಗುವುದಿಲ್ಲ. ಇದು ಜನರಿಗೆ ಬಿಟ್ಟ ವಿಷಯ. ಇವತ್ತಿನದಿವಸ ಪಿ.ಡಬ್ಲ್ಯೂಡಿ. ರಸ್ತೆಗಳು ಎಲ್ಲಾ ಹಳ್ಳಿಗಳಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆಯಾಗಿದೆ. ಆದರೆ, ಜಿಲ್ಲಾ ಪಂಚಾಯತ್ ರಸ್ತೆಗಳು ಇವತ್ತಿನದಿವಸ ಪೂರ್ಣವಾಗಿ ಹದಗೆಟ್ಟಿವೆ. ನಾನು ಜೇವರ್ಗಿಗೆ ಹೋದಾಗ ಅಲ್ಲಿನ ರೈತರು ನನ್ನ ಮೂರು ಗಂಟೆಗಳ ಕಾಲ ಅಲ್ಲಿಯೇ ಕೂರಿಸಿಕೊಂಡಿದ್ದರು. ನಾವೇನು ಮಾಡುವುದಕ್ಕೆ ಸಾಧ್ಯವಿದೆ? ಆದ್ದರಿಂದ ಸರ್ಕಾರ ಇದಕ್ಕೆ ಒತ್ತುಕೊಟ್ಟು ರಸ್ತೆ ರಿಪೇರಿಗಾಗಿ ಹಣ ಕೊಡಬೇಕು. ರಿಪೇರಿ ಮಾಡಿದಾಗ ಮಾತ್ರ ಜನರು ಸ್ವಲ್ಪ ಓಡಾಡುವುದಕ್ಕೆ ಅನುಕೂಲವಾಗುತ್ತದೆ. ಇವತ್ತಿನದಿವಸ ಚುನಾಯಿತ ಪ್ರತಿನಿಧಿಗಳು ಯಾರೇ ಇರಲಿ ಅಂದರೆ, ಶಾಸಕರಾಗಲಿ ಅಥವಾ ಜಿಲ್ಲಾಪಂಚಾಯತ್ ಅಥವಾ ತಾಲ್ಲೂಕು ಪಂಚಾಯತ್ ಸದಸ್ಯರು ಯಾರೇ ಆಗಿರಲಿ ರಸ್ತೆಯನ್ನು ರಿಪೇರಿ ಮಾಡಿದರೆ ಅಲ್ಲಿ ಓಡಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. 11 ಲಕ್ಷ ಮನೆಗಳನ್ನು ಕೊಡುತ್ತೇವೆಂದು ಮಾನ್ಯ ಸಗೀರ್ ಅಹಮದ್‌ರವರು ಈಗಾಗಲೇ ಹೇಳಿದ್ದರು. ಒಂದು ಮಾತನ್ನು ಬಹಳ ದುಃಖದಿಂದ ಇಲ್ಲಿ ಹೇಳಬೇಕಾಗುತ್ತದೆ. ಏನೆಂದರೆ, ನನ್ನ ಕ್ಷೇತ್ರದಲ್ಲಿ *150* ಮನೆಗಳನ್ನು....

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ರೇವುನಾಯಕ್ ಬೆಳಮಗಿಯವರೆ, ಒಂದು ನಿಮಿಷ ಯೀಲ್ಡ್ ಆಗಬೇಕು. ಕುಡಿಯುವ ನೀರಿನ ವಿಚಾರದ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಬರಗಾಲಕ್ಕೋಸ್ಕರ ಬಿಡುಗಡೆ ಮಾಡುತ್ತಿರುವ ಹಣದಲ್ಲಿಯೇ ಹೆಚ್ಚುವರಿ ಪೈಪ್ ಹಾಕಿಕೊಳ್ಳುವುದಕ್ಕೆ ಮತ್ತು ರಿಪೇರಿ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಹೊಸದಾಗಿ ಬೋರ್‌ವೆಲ್ ಹಾಕುವುದನ್ನು ಬಿಟ್ಟರೆ ಉಳಿದ ಎಲ್ಲಾ ಕೆಲಸವನ್ನು ಮಾಡುವುದಕ್ಕೆ ಅದರಲ್ಲಿ ಅವಕಾಶ ಇದೆ. ಈಗ ನಿಮ್ಮಲ್ಲಿರತಕ್ಕಂಥ ವಾಟರ್‌ಸಪ್ಲೈ ಸ್ಕೀಂನಲ್ಲಿ ಹೆಚ್ಚುವರಿ ಪೈಪ್ ಹಾಕುವುದಕ್ಕೆ ಅಥವಾ ಪಂಪ್ ಕೆಟ್ಟು ಹೋಗಿದ್ದರೆ ಅವುಗಳನ್ನು ದುರಸ್ತಿ ಮಾಡುವುದಾಗಲಿ ಅಥವಾ ಹೆಚ್ಚುವರಿ ಟ್ಯಾಪ್ ಹಾಕುವುದಕ್ಕೆ ಈಗಾಗಲೇ ಕೊಟ್ಟಿರತಕ್ಕಂಥ ಹಣ ಕಡಿಮೆಯಾದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಒಂದು ಪಟ್ಟಿ ಮಾಡಿ ಜಿಲ್ಲಾಧಿಕಾರಿಗಳಿಗೆ ಅಥವಾ ನಿಮ್ಮಲ್ಲಿರತಕ್ಕಂಥ ಸ್ಕೇರ್‌ಸಿಟಿ ಕಮಿಟಿಗೆ ಕೊಟ್ಟರೆ ಇದಕ್ಕೆ ಎಷ್ಟೇ ಹಣ ಖರ್ಚಾದರೂ ಕೂಡ ನಾವು ಕೊಡುವುದಕ್ಕೆ ತಯಾರಿದ್ದೇವೆಂದು ನಾವು ಪದೇ ಪದೇ ಹೇಳುತ್ತಿದ್ದೇವೆ. ಈಗ ನಮಗೆ ಪಟ್ಟಿಕೊಟ್ಟರೂ ಕೂಡ ಹಣ ಕೊಡುವುದಕ್ಕೆ ತಯಾರಿದ್ದೇವೆ.

ಶ್ರೀ ರೇವುನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ, ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊಟ್ಟರಗಾಗ್ರಾಮದಲ್ಲಿ ಬಾವಿಗೆ ಬಿದ್ದು ನಮ್ಮ ತಾಯಿಂದರು ತೀರಿಕೊಂಡರು. ಈಗ ಅಲ್ಲಿಗೆ ಜನರು ಹೋಗುವುದಕ್ಕೆ ಭಯಭೀತರಾಗಿದ್ದಾರೆ. ಏಕೆಂದರೆ,ಈ ಬಾವಿ ಕುಸಿದು ಬಿದ್ದಿದೆ ಮತ್ತು ಇದರಲ್ಲಿ ಇನ್ನೂ ನೀರು ಸಹ ಇದೆ. ಈ ಬಾವಿಯನ್ನು ಮತ್ತೆ ಕಟ್ಟುವುದಕ್ಕಾಗಿ 6.5 ಲಕ್ಷ ರೂಪಾಯಿ ಅಂದಾಜನ್ನು ತಯಾರು ಮಾಡಿ ಕೊಡಲಾಗಿದೆ. ಆದರೆ ಡಿ.ಸಿ.ಯವರು ಇದಕ್ಕೆ ಇದುವರೆಗೂ ಹಣ ಕೊಟ್ಟಿಲ್ಲ. ಹಣ ಬಂದರೆ ಕೊಡುತ್ತೇವೆಂದು ಹೇಳುತ್ತಾ ಬರುತ್ತಿದ್ದಾರೆ. ಇದೊಂದು ಉದಾಹರಣೆಯನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ. ಇವತ್ತಿನದಿವಸ ನಮ್ಮ ಕಡೆ ಬಹಳಷ್ಟು ಸಮಸ್ಯೆಗಳಿವೆ. ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಈಗಾಗಲೇ ಇದರ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಬಾವಿ ಬಿದ್ದುಹೋಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈ ಒಂದು ಕಾರ್ಯವನ್ನು ಜನ ಸಂರಕ್ಷಣಾ ಯೋಜನೆ ಅಡಿಯಲ್ಲಿ ತೆಗೆದುಕೊಳ್ಳುವುದಕ್ಕೂ ಕೂಡ ಅವಕಾಶ ಇದೆ. ಮತ್ತು ಸ್ಕೇರ್‌ಸಿಟಿಯಲ್ಲಿಯೂ ಕೂಡ ಈ ಒಂದು ಬಾವಿಯನ್ನು ದುರಸ್ಥಿ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದ ಹಾಗೆ ಅವರ ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ಇವತ್ತಿನದಿವಸ ಪರಿಸ್ಥಿತಿ ಯಾವರೀತಿ ಇದೆ ಎನ್ನತಕ್ಕಂಥದ್ದು ತಮಗೂ ಕೂಡ ಗೊತ್ತಿದೆ. ಈ ವಿಷಯದ ಬಗ್ಗೆ ಡಿ.ಸಿಯವರಿಗೆ ಪತ್ರ ಬರೆದು ಇದರ ದುರಸ್ಥಿಗಾಗಿ ಸುಮಾರು 6 ಲಕ್ಷ ರೂಪಾಯಿ ಖರ್ಚು ಬರುತ್ತದೆ ಎಂದು ಅವರ ಗಮನಕ್ಕೆ ತಂದಿದ್ದಾರೆ. ಆದರೆ ಈ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳುವುದಕ್ಕೆ ಅವರು ತಯಾರಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಯಾವ ಗ್ರಾಮದಲ್ಲಿ ಈ ಬಾವಿ ಇದೆ ಎನ್ನತಕ್ಕಂಥದ್ದನ್ನು ಹೇಳಿ.

ಶ್ರೀ ರೇವುನಾಯಕ್ ಬೆಳಮಗಿ : ಆಳಂದ ತಾಲ್ಲೂಕಿನ ಕೊಟ್ಟರಗಾ ಗ್ರಾಮದಲ್ಲಿರುವ ಬಾವಿ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಇಲ್ಲಿರತಕ್ಕಂಥ ಬಾವಿ ರಿಪೇರಿ ಆಗಬೇಕೆ?

ಶ್ರೀ ರೇವುನಾಯಕ್ ಬೆಳಮಗಿ : ಆ ಗ್ರಾಮದ ಮಹಿಳೆ ಅದಕ್ಕೆ ಬಿದ್ದು ತೀರಿ ಕೊಂಡಿದ್ದಾರೆ. ಅದರೊಳಗೆ ಇವತ್ತೂ ಕೂಡ ನೀರಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಬಾವಿಯ ಮೇಲ್ಭಾಗದಲ್ಲಿದ್ದಂಥ ಪ್ಯಾರಾಪಟ್ ವಾಲ್ ಕುಸಿದು ಹೋಗಿದೆ ಎಂದು ಕಾಣುತ್ತದೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಒಂದು ಬಾವಿ ರಿಪೇರಿಗಾಗಿ ಕೂಡ ವಿಧಾನಸಭೆಯಲ್ಲಿ ಮೆನ್‌ಷನ್ ಮಾಡಿ ಮಾನ್ಯ ಸಚಿವರ ಕಡೆಯಿಂದ ಉತ್ತರ ತೆಗೆದುಕೊಳ್ಳಬೇಕಾದರೆ ಇವತ್ತಿನದಿವಸ ಯಾವ ಸ್ಥಿತಿ ಬಂದಿದೆ ಎನ್ನತಕ್ಕಂಥದ್ದನ್ನು ನೋಡಿ?

ಶ್ರೀ ಕಾಗೋಡು ತಿಮ್ಮಪ್ಪ : ಇಲ್ಲಿ ಕೇವಲ ಭಾಷಣ ಮಾಡುವುದೇ ಮುಖ್ಯವಲ್ಲ. ಸಮಸ್ಯೆಗಳನ್ನು ಬಿಡಿಸತಕ್ಕಂಥ ವಿಚಾರದಲ್ಲಿ ಮತ್ತು ಅಭಿವೃದ್ಧಿ ಕೆಲಸದ ಬಗ್ಗೆ ನಿರಂತರವಾದ ಹೋರಾಟದಲ್ಲಿ ನಾವು ತೊಡಗಿಸಿಕೊಳ್ಳಲೇ ಬೇಕು.

ಶ್ರೀ ರೇವುನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ, ಭಾಷಣ ಮಾಡುವುದಕ್ಕೆ ನನಗೇನೂ ಬರುವುದಿಲ್ಲ. ಆದರೆ, ನನ್ನ ಕ್ಷೇತ್ರದ ಸಮಸ್ಯೆ ಬಗ್ಗೆ ಮಾತ್ರ ಇಲ್ಲಿ ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಹೈದಾರಾಬಾದ್ ಕರ್ನಾಟಕ ಅತೀ ಹಿಂದುಳಿದ ಪ್ರದೇಶವೆಂದು ಎಲ್ಲರೂ ಹೇಳುತ್ತಾರೆ. ಆದರೆ, ನಮ್ಮ ಕಡೆಗೆ 6 ಮಂದಿ ಸಚಿವರನ್ನು ಕೊಟ್ಟಿರತಕ್ಕಂಥದ್ದೇ ನಮಗೆ ಸಂತೋಷದ ವಿಚಾರವಾಗಿದೆ. ಆದರೆ, ನಮ್ಮ ಭಾಗದ ಕೆಲಸ ಯಾವುದೂ ಕೂಡ ಆಗುತ್ತಿಲ್ಲ. ನಮ್ಮ ಜಿಲ್ಲೆಯ ಕೆ.ಡಿ.ಪಿ. ಸಭೆಯಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ನಮ್ಮ ಕಡೆಯ ಮುಖ್ಯಮಂತ್ರಿಗಳೆಂದು ಹೇಳುತ್ತೇವೆ. ಕರ್ನಾಟಕದ ಮುಖ್ಯಮಂತ್ರಿ ಮಾನ್ಯ ಎಸ್.ಎಂ. ಕೃಷ್ಣರವರು ಇದ್ದರೆ ನಮ್ಮ ಭಾಗಕ್ಕೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ಮುಖ್ಯ ಮಂತ್ರಿಯೆಂದು ಹೇಳುತ್ತೇವೆ. ನಮ್ಮ ಜಿಲ್ಲೆಯಲ್ಲಿ ನಾನೊಬ್ಬನೇ ಬಿ.ಜೆ.ಪಿ ಶಾಸಕನಾಗಿದ್ದೇನೆ. ನನ್ನ ಕ್ಷೇತ್ರದಲ್ಲಿರತಕ್ಕಂಥ ಯಾವುದೇ ಸಮಸ್ಯೆ ಬಗ್ಗೆ ಅಥವಾ ನೀರಿನ ಸಮಸ್ಯೆ ಬಗ್ಗೆ ಕೆ.ಡಿ.ಪಿ ಸಭೆಯಲ್ಲಿ ಪ್ರಸ್ತಾಪ ಮಾಡಿದರೆ ನಿನ್ನದು ಬಹಳ ದೊಡ್ಡ ಕ್ಷೇತ್ರ ಇದೆ ಎಂದು ಹೇಳುತ್ತಾರೆ. ನಮ್ಮ ಜಿಲ್ಲೆಗೆ ಅರ್ಧ ಡಜನ್ ಮಂತ್ರಿಗಳನ್ನು ಕೊಟ್ಟಿರುವುದೇ ನಮ್ಮೆಗೆಲ್ಲಾ ಖುಷಿ. ಇವತ್ತಿನದಿವಸ ಅಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕೆಲಸ ಆಗುತ್ತಿಲ್ಲ. ನಮ್ಮ ಕಡೆ ರಸ್ತೆಗಳು ಬಹಳ ಹದಗೆಟ್ಟಿವೆ ಮತ್ತು ನೀರಿನ ಸಮಸ್ಯೆ ಬಹಳಷ್ಟು ಇದೆ. ಮತ್ತೆ ಹೈಸ್ಕೂಲ್ ಮತ್ತು ಕಾಲೇಜುಗಳಿಗೆ ಟೀಚರ್‌ಗಳನ್ನು ಆಯ್ಕೆ ಮಾಡಿಲ್ಲ. ಇವತ್ತಿನದಿವಸ ನನ್ನ ಕ್ಷೇತ್ರದಲ್ಲಿ ಎಲ್ಲಾ ಕ್ಷೇತ್ರಕ್ಕಿಂತ ಹೆಚ್ಚಿನ ಸಮಸ್ಯೆ ಇದೆ. 11 ಲಕ್ಷ ಮನೆಗಳನ್ನು ಕೊಟ್ಟಿದ್ದೇವೆ ಈಗಾಗಲೇ ಮಾನ್ಯ ಸಗೀರ್‌ಅಹಮದ್‌ರವರು ಹೇಳಿದರು. ಈ ವಿಷಯವನ್ನು ನಾನು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ವಸತಿ ಸಚಿವರು ಆಗಿರತಕ್ಕಂಥ ಮಾನ್ಯ ಸಗೀರ್ ಅಹಮದ್ ಸಾಹೇಬರು ಇಲಿಲ್ಲ. ನಾವು 150 ಮನೆಗಳನ್ನು ಸೆಲೆಕ್ಷನ್ ಮಾಡಿ ಕೊಟ್ಟಿದ್ದೇವೆ. ಅವರು ಡಾಕ್ಯುಮೆಂಟ್ಸ್ ಎಲ್ಲಾ ಮಾಡಿದ್ದಾರೆ, ಆ ಮನೆಗಳನ್ನು ವಿಥ್‌ಡ್ರಾ ಮಾಡಿಕೊಂಡರೆ ನಮ್ಮ ಗತಿ ಏನು? ಇವರು 4 ಜರನ್ನು ಸೆಲೆಕ್ಷನ್ ಕಮೀಟಿಯ ಮೆಂಬರ್ ಮಾಡಿದ್ದಾರೆ, ಒಂದು ತಾಲ್ಲೂಕಿಗೆ 5 ಜನ ಇರುತ್ತಾರೆ, ಇವರು ವಿಥ್‌ಡ್ರಾ ಮಾಡಿಕೊಂಡು ಆ ಫಲಾನುಭವಿಗಳನ್ನು ನಮ್ಮ ಮನೆಗೆ ಕಳುಹಿಸಿಕೊಡುತ್ತಾರೆ. ಎಂಎಲ್‌ಎ ಆಗಿ ಕೆಲಸ ಮಾಡಿ ಕೂಡ ನನ್ನ ಹಣೇಬರಹ ಇಂತಹದ್ದು. ಎಲ್ಲಾ ರೀತಿಯಿಂದಲೂ ತೊಂದರೆ ಇದೆ.0

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಇವರು ಹೀಗೆ ಹೇಳುತ್ತಾರೆ. ನಮ್ಮ ತೀರ್ಥಹಳ್ಳಿಯಲ್ಲಿ ಇದೇ ರೀತಿಯಾಗಿತ್ತು. ಆಗ ನಾನು ಹೇಳಿದೆ, ಮಾನ್ಯ ಶಾಸಕರು ಹೇಳಿದ ಹಾಗೆ ಕೊಟ್ಟು ಬಿಡಿ, ಹೆಚ್ಚಿಗೆ ಬೇಕಾದರೆ ಕೊಟ್ಟು ಬಿಡೋಣ. ಸ್ವಲ್ಪ ಹೊಂದಿಕೊಂಡು ಹೋಗಬೇಕು. ನಿಮ್ಮ ಕೇಂದ್ರ ಸರ್ಕಾರ ಇದೆ. ಅವರು ನಾಮಿನೇಶನ್ ಮಾಡುವಾಗ ಕಾಂಗ್ರೆಸ್‌ನವರನ್ನು ಮಾಡುತ್ತಾರೆಯೇ? ಏನ್ರಿ ಮಾನ್ಯ ಜಗದೀಶ್ ಶೆಟ್ಟರೆ?

ಶ್ರೀ ಶ್ರೀನಿವಾಸಗೌಡ, ಕುದುವನಹಳ್ಳಿ (ಕೋಲಾರ) : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಟಾಸ್ಕಫೋರ್ಸ್ ಕಮಿಟಿ ಮಾಡಿದ್ದಾರೆ. ಇದರಲ್ಲಿ ಬಂಗಾರಪೇಟೆಯ ತಾಲ್ಲೂಕಿನ 54 ಗ್ರಾಮಗಳು ಸೇರುತ್ತವೆ, ಆ ಕ್ಷೇತ್ರದ ಎಂಎಲ್‌ಎ ಒಂದೂ ಕೆಲಸ ನಮ್ಮದು ಹಾಕುವುದಿಲ್ಲ ನಾವು ಏನು ಮಾಡಬೇಕು ಹೇಳಿ? ನಾನು ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿ ನಮ್ಮ ನಮ್ಮ ಕ್ಷೇತ್ರಕ್ಕೆ ಕೊಡಿ ಎಂದರೆ, ಮಾನ್ಯ ಕಾಗೋಡು ತಿಮ್ಮಪ್ಪನವರೇ, ಹಾಗೂ ಶ್ರೀ ಎಸ್.ಎಸ್. ಪಾಟೀಲರೆ ತಾವು ಕೇಳಬೇಕು. ನಿಮ್ಮ ಪಕ್ಷದ ಒಬ್ಬ ಎಂಎಲ್‌ಎ ಕೂಡ ಅಧ್ಯಕ್ಷರಾಗಿರುತ್ತಾರೆ.ನಾವು ಕೇಳಿದರೂ ಕೂಡ ಯಾವ ಒಂದು ಕೆಲಸವನ್ನೂ ಅವರು ಸೇರಿಸುವುದಿಲ್ಲ. ನನ್ನ 54 ಗ್ರಾಮಗಳಿಗೆ ಬರಗಾಲ ಬಂದಿಲ್ಲವೆ? ಅವರ ಊರು ಮತ್ತು ಅವರಿಗೆ ಮಾತ್ರ ಬರಗಾಲ ಬಂದಿರುವುದು. ಇಂತಹ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳಿಗೆ ಹೇಳಿದ್ದು ಆಯಿತು. ನಮ್ಮ ಸಂಬಂಧಪಟ್ಟಂಥ ಮಂತ್ರಿಗಳಿಗೆ ಹೇಳಿದ್ದಾಯಿತು. ಇಂತಹದ್ದನ್ನು ನೀವು ಯಾವ ರೀತಿಯಾಗಿ ಸರಿ ಮಾಡುತ್ತೀರಿ, ಇದಕ್ಕೆ ಒಂದು ಪರಿಹಾರವನ್ನು ನೀವು ಹೇಳಿ, ಅಲ್ಲಿ ಹಣ ಬರುತ್ತದೆ ಬರೀ ಅವರು ತಮ್ಮ ಕ್ಷೇತ್ರಕ್ಕೆ ಹಾಕಿಕೊಳ್ಳುತ್ತಾರೆ. ನಮ್ಮ ಕ್ಷೇತ್ರಕ್ಕೆ ಅಲ್ಲಿ ಆಗಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಏನು ಮಾಡುತ್ತೀರಿ? ಇದರ ವಾಸ್ತವಾಂಶವನ್ನು ಬೇಕಾದರೆ ನೀವು ಜಿಲ್ಲಾಧಿಕಾರಿಗಳನ್ನು ಕೇಳಿ ಮಾಡಿ.

ಅಧ್ಯಕ್ಷರು : ಗೊತ್ತು.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ನೋಡಿ-ಮಾನ್ಯ ಅಧ್ಯಕ್ಷರಿಗೆ ಇದರ ಬಗ್ಗೆ ಗೊತ್ತಿದೆ, ನಾವು ಇನ್ನು ಏನು ಹೇಳೋಣ ಹೇಳಿ? ಅವರ ಕ್ಷೇತ್ರ ಕೂಡ ನಮ್ಮ ಪಕ್ಕದ ಕ್ಷೇತ್ರ ತಾನೆ?

ಅಧ್ಯಕ್ಷರು : ನನ್ನ ಪಕ್ಕದ ತಾಲ್ಲೂಕು ತಾನೆ?

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಮಾನ್ಯ ಅಧ್ಯಕ್ಷರೆ, ಒಂದನ್ನೂ ಕೂಡ ಮಾಡಿಸುವುದಕ್ಕಾಗಿಲ್ಲ. ನಿಮ್ಮ ಇಷ್ಟೊಂದು ಹಣ ಬಂದರೂ ಕೂಡ, ಅಲ್ಲಿ ನೀವು ತಾಲ್ಲೂಕು ವೈಸ್ ಹಣವನ್ನು ಕೊಡುತ್ತೀರಿ, ಅಲ್ಲಿ 5 ಪಂಚಾಯಿತಿಗಳು ಬರುತ್ತವೆ, ಎಷ್ಟು ಬರುತ್ತವೆ ಅಷ್ಟನ್ನು ಕೊಡಿ.

ಅಧ್ಯಕ್ಷರು : ತಾಲ್ಲೂಕುವೈಸ್ ಕೊಟ್ಟರೆ ಅವು ರೆವಿನ್ಯೂ ತಾಲ್ಲೂಕು ತಾನೆ? ರೆವಿನ್ಯೂ ತಾಲ್ಲೂಕಿನ 54 ಹಳ್ಳಿಗಳು ನಿಮಗೆ ಸೇರುತ್ತವೆ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : 54 ಹಳ್ಳಿಗಳು ಬಂಗಾರಪೇಟೆ ತಾಲ್ಲೂಕಿನದ್ದು ಬರುತ್ತದೆ.

ಅಧ್ಯಕ್ಷರು : ಆ ಕ್ಷೇತ್ರದ ಎಂಎಲ್‌ಎ ಯವರು ನಿಮಗೆ ಹಾಕುತ್ತಿಲ್ಲವೆಂದು ಹೇಳುತ್ತೀರಿ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ : ಅವರು ನಮಗೆ ಹಾಕುತ್ತಿಲ್ಲ ಅದು ಅವರ ಟಾಸ್ಕ್‌ಫೋರ್ಸ್, ಅದಕ್ಕಾಗಿ ಕ್ಷೇತ್ರವೈಸ್ ಮಾಡಿ ಎಂದು.

ಅಧ್ಯಕ್ಷರು : ಅದು ಭಾರೀ ತಪ್ಪಾಗುತ್ತದೆ. ಅದಕ್ಕಾಗಿ ನೀವುನೀವೇ ಅಲ್ಲಿ ಅಂಡರ್‌ಸ್ಟಾಂಡ್ ಮಾಡಿ ಹಾಕಿಸಿಕೊಳ್ಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತೇನೆ ತಾವು ಕೇಳಿ ಮಾನ್ಯ ಚೌಡರೆಡ್ಡಿ ಹಾಗೂ ದಿವಂಗತ ಮಾನ್ಯ ಭೈರೇಗೌಡರಿಗೆ ಭಿನ್ನಾಭಿಪ್ರಾಯ ಬಂತು, ಎಪಿಎಂಸಿಗೆ ನಾಮಿನೇಶನ್ ಮಾಡಿಕೊಳ್ಳುವಾಗ ನೀವು ಗಲಾಟೆ ಮಾಡಿಕೊಳ್ಳಲಿಲ್ಲವೆ?

ಶ್ರೀ ಶ್ರೀನಿವಾಸಗೌಡ (ಕುದುವನಹಳ್ಳಿ) : ಎಪಿಎಂಸಿ ನಾಮಿನೇಶನ್ ಮಾಡಿಕೊಳ್ಳುವುದಕ್ಕೆ ಮಾಡಿಕೊಳ್ಳಲಿ. ಆದರೆ ಅಭಿವೃದ್ಧಿ ಕೆಲಸಕ್ಕೆ ಬೇಡಿ.

ಅಧ್ಯಕ್ಷರು : ಬೆಳಮಗಿಯವರೇ ನೀವು ಯಿಲ್ಡ್ ಆಗುವುದಕ್ಕೆ ಹೋಗಬೇಡಿ. ಟೈಮ್ ಇಲ್ಲ. ಮಾನ್ಯ ಸಚಿವರು ಬಂದು ಬಿಡುತ್ತಾರೆ 5.30 ಕ್ಕೆ ರಿಪ್ಲೈ ಎಂದು ಹೇಳುತ್ತಿದ್ದೇವೆ.

ಶ್ರೀ ರೇವುನಾಯಕ್ ಬೆಳಮಗಿ : ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡಿರುತ್ತೇನೆ. ಸರ್ಕಾರಕ್ಕೆ ಕಳಕಳಿ ಇದ್ದರೆ, ಅವರಿಗೆ ರೈತರ ಬಗ್ಗೆ ಒಂದು ಕಾಳಜಿ ಇದ್ದರೆ, ಗೋಶಾಲೆಯನ್ನು ತೆಗೆದು ರೈತರುಗಳನ್ನು ಉಳಿಸಬೇಕು. ಪ್ರತಿ ಎರಡು ಗ್ರಾಮ ಪಂಚಾಯಿತಿಯಲ್ಲಿ ಕೂಲಿ ಕಾರ್ಮಿಕರಿಗೆ ಕೆಲಸವನ್ನು ಕೊಡಬೇಕು. ಕುಡಿಯುವ ನೀರಿನ ಸಮಸ್ಯೆಯ ಪಟ್ಟಿಯನ್ನು ತಮಗೆ ಕೊಡಬೇಕಾದರೆ ಬಹಳ ಇದೆ. ಆ ಸಮಸ್ಯೆಗಳ ಪರಿಹಾರವನ್ನು ಮಾಡುವುದಕ್ಕೆ ನೀವು ಮುಂದೆ ಬರಬೇಕು. ಅದರ ಜೊತೆಯಲ್ಲಿ ನಾನು ಇಬ್ಬರು ತಾಯಿಯಂದಿರು ತೀರಿಕೊಂಡಿದ್ದಾರೆ.ಅದರ ಬಗ್ಗೆ ನಾನು ಕಣ್ಣಲ್ಲಿ ನೀರು ತೆಗೆದ ಸಲುವಾಗಿ ಅದು ಅಷ್ಟಕ್ಕೆ ಕಡಿಮೆಯಾಗಿತ್ತು. ಅದರ ಬಗ್ಗೆ ಅಷ್ಟು ಗಂಭೀರವಾಗಿ ನಾನು ಮಾತನಾಡಿದರೂ ಸಹ ಏನೂ ಪ್ರಯೋಜನವಾಗಿಲ್ಲ. ದಯವಿಟ್ಟು ನೀವು ಅವರಿಗೆ ಒಂದೊಂದು ಲಕ್ಷ ರೂ.ಗಳ ಪರಿಹಾರವನ್ನು ಕೊಡುವುದಕ್ಕೆ ಮುಂದೆ ಬರಬೇಕು. ನಿಮಗೆ ಕಳಕಳಿ ಇದ್ದರೆ, ಅನುಕಂಪದ ಮೇಲೆ ಹಣ ಕೊಡಬೇಕೆಂದು ನಿಮಗೆ ಒತ್ತಾಯವನ್ನು ಮಾಡುತ್ತಾ ಹೈದ್ರಾಬಾದ್–ಕರ್ನಾಟಕ ಹಿಂದುಳಿದ ಪ್ರದೇಶವೆಂದು ಪ್ರತಿ ಎಂಎಲ್‌ಎಗೆ 50 ಲಕ್ಷ ರೂ.ಗಳನ್ನು ಕೊಡುತ್ತಾರೆ. ನಾವು ಎಲ್ಲೆಲ್ಲಿ ಕೆಲಸವನ್ನು ಮಾಡಿರುತ್ತೇವೆಂದು ಹೇಳಿರುತ್ತೇವೆ. ನಾಳೆ ದಿವಸಗಳಲ್ಲಿ ಎಲೆಕ್ಷನ್ ಬರುತ್ತದೆ. ನೀವು ಏನು ಕೆಲಸವನ್ನು ಮಾಡಿದ್ದೀರಿ ಎಂದು ಜನರು ನಮ್ಮನ್ನು ಕೇಳಿದರೆ ನಾವು ಏನು ಉತ್ತರವನ್ನು ಕೊಡಬೇಕು? ಈ ತಾರತಮ್ಯವೇಕೆ? ಹೈದ್ರಾಬಾದ್–ಕರ್ನಾಟಕ ಹಿಂದುಳಿದ ಪ್ರದೇಶವೆಂದು ನೀವೇ ಅನ್ನುತ್ತೀರಿ, ಅದನ್ನು ನೀವೇ ಸರಿಪಡಿಸುತ್ತೇವೆಂದು ಹೇಳುತ್ತೀರಿ. ಅಲ್ಲಿಗೆ 6 ಮಂದಿ ಮಂತ್ರಿಗಳನ್ನು ಕೊಟ್ಟರೆ ಸರಿಯಾಗುತ್ತದೆಯೇ? ಟಿಎ–ಡಿಎ ಪ್ರವಾಸದ ಭತ್ಯೆಯಲ್ಲಿಯೆ ಅಭಿವೃದ್ಧಿಯಾಗುತ್ತಿತ್ತು. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಹೈದ್ರಾಬಾದ್–ಕರ್ನಾಟಕ ಅಭಿವೃದ್ಧಿ ಮಂಡಳಿಗೆ 50 ಲಕ್ಷ ರೂ.ಗಳನ್ನು ಕೊಡುತ್ತೇವೆಂದು ಹೇಳುತ್ತಿದ್ದೀರಿ, ಪ್ರತಿ ಎಂಎಲ್‌ಎ ಗೆ 50 ಲಕ್ಷ ರೂ.ಗಳನ್ನು ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಎಂಎಲ್‌ಎ ಫಂಡ್ ಎಂದು 40 ಲಕ್ಷ ರೂ.ಗಳನ್ನು ಕೊಡುತ್ತೇವೆಂದು ಹೇಳಿದಿರಿ, ನನಗೊಬ್ಬನಿಗೆ ಅಲ್ಲ, ಎಲ್ಲಾ ಎಂಎಲ್‌ಎ ಗಳಿಗೆ ಕೊಟ್ಟರೆ, ಇಡೀ ನಮ್ಮ ಸದನದ ಎಲ್ಲಾ ಶಾಸಕರಿಗೆ ಗೌರವವನ್ನು ಕೊಟ್ಟಂತಾಗುತ್ತದೆ. ನಮ್ಮ ಕ್ಷೇತ್ರಗಳಿಗೆ ನಾವು ಹೋಗುವುದಕ್ಕೆ ಅನುಕೂಲವಾಗುತ್ತದೆ. ಅದರ ಜೊತೆಯಲ್ಲಿ ರೋಡ್‌ಗಳಿಗೆ ಸರ್ಕಾರ ಹೆಚ್ಚು ಒತ್ತು ಕೊಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಕೃಷ್ಣಮೂರ್ತಿಯವರು ಹಾಗೂ ಮಾನ್ಯ ಕರಡಿ ಸಂಗಣ್ಣನವರು 5 ನಿಮಿಷ ಮಾತನಾಡಬೇಕು.

† ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : 5 ನಿಮಿಷವೆಂದರೆ ಹೇಗೆ ಸ್ವಾಮಿ?

ಅಧ್ಯಕ್ಷರು : ಬೆಳಿಗ್ಗೆ ಛೇರ್‌ಮೇಲೆ ಇದ್ದವರು ತಮ್ಮನ್ನು ಕರೆದಾಗ ತಾವು ಇರಲಿಲ್ಲ. ನಿಮ್ಮ ನೇಮ್ ಕರೆದಿದ್ದಾರೆ. ನ್ಯಾಯವಾಗಿ ನಿಮಗೆ ಕೊಡಲೇಬಾರದು. ಕರೆದಾಗ ಇರಬೇಕು. ಆಯಿತು 10 ನಿಮಿಷ ಮಾತನಾಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಜೆಡಿ-ಎಸ್ ನಲ್ಲಿ ಯಾರೂ ಮಾತನಾಡಲಿಲ್ಲ. ನಾನು ಒಬ್ಬನೇ ಮಾತನಾಡುತ್ತಿರುವುದು.

ಅಧ್ಯಕ್ಷರು : ನಿಮ್ಮ ಲೀಡರ್ ಆದ ಮಾನ್ಯ ಸಿಂಧ್ಯಾರವರು ಮಾತನಾಡಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅಧ್ಯಕ್ಷರೆ, ಆಯಿತು ಸರ್, 15 ನಿಮಿಷವಾದರೂ ಕೊಡಿ. ಬರಗಾಲದ ವಿಚಾರ ಇದ್ದಾಗ್ಯೂ ಕೂಡ 2004ನೇ ಇಸ್ವಿಗೆ ಮಾನ್ಯ ರಾಜ್ಯಪಾಲರಿಂದ ವಿಧಾನಸಭೆಯಲ್ಲಿ ಭಾಷಣವನ್ನು ಮಂಡಿಸಿದ್ದೀರಿ ರಾಜ್ಯಪಾಲರ ಭಾಷಣದ ಬಗ್ಗೆ ವಂದನೆಯನ್ನು ಸಲ್ಲಿಸುವುದಕ್ಕೆ, ಈ ಸಭೆಯಲ್ಲಿ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕೆ ತಮಗೆ ಅಭಿನಂದಿಸಿ, ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಂವಿಧಾನ ಬದ್ಧವಾಗಿ ಯಾವುದೋ ಬ್ರಿಟೀಷರು ಬಿಟ್ಟು ಹೋದಂಥ ನೀತಿಯನ್ನು ನಾವು ಅನುಸರಿಸಿಕೊಂಡು ಬರುತ್ತಿದ್ದೇವೆ. ರಾಜ್ಯಪಾಲರು ಅಥವಾ ರಾಷ್ಟ್ರಪತಿಗಳು ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮುಖ್ಯಸ್ಥರು ಇದ್ದರು ಕೂಡ ಸರ್ಕಾರದ ಕಾರ್ಯಕ್ರಮಗಳನ್ನು ಜನಪ್ರತಿನಿಧಿಗಳಿಂದ ಆಯ್ಕೆಯಾದ ಸಭಾ ನಾಯಕರು ಜನರಿಗೆ ಮೂಲಭೂತ ಸೌಲಭ್ಯಗಳನ್ನು ಕೊಡಿಸಿ ಕೊಡುವುದರಲ್ಲಿ ರಾಷ್ಟ್ರೀಯ ಪಕ್ಷಗಳು, ರಾಷ್ಟ್ರದಲ್ಲಿ ಚುನಾವಣೆಯಲ್ಲಿ ಸ್ಪರ್ಧೆ ಮಾಡುವ ಸಂದರ್ಭದಲ್ಲಿ ಚುನಾವಣೆಯ ಪ್ರಣಾಳಿಕೆಯನ್ನು ಜನರ ಮುಂದೆ ಇಟ್ಟು ಯಾವ ಪಕ್ಷ ಅತ್ಯಂತ ಬಹುಮತವನ್ನು ಪಡೆಯುತ್ತದೆ. ಅವರು ಸರ್ಕಾರವನ್ನು ರಚಿಸುವುದರ ಮುಖಾಂತರ, ಆ ರಾಜ್ಯದ ಆ ದೇಶದ ಜನರಿಗೆ ಮೂಲಭೂತ ಸೌಲಭ್ಯಗಳನ್ನು ಕೊಡಿಸಿ ಕೊಡುವುದರಲ್ಲಿ ಅವರು ಯಶಸ್ವಿಯಾಗಬೇಕು. ಆದರೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ರಾಜ್ಯಕ್ಕೆ ದರಿದ್ರ ಬಂದು ಬಿಟ್ಟಿತು. ಯಾವ ಘಳಿಗೆಯಲ್ಲಿ ವಿಧಾನಸೌಧಕ್ಕೆ ಕಾಲಿಟ್ಟರೋ ನೀರು ಮತ್ತು ಎಲ್ಲಾ ಮಾಯ. ಇಲ್ಲಿ ಯಾವುದೂ ಇಲ್ಲ. ವಿದ್ಯುತ್ ಕೂಡ ಮಾಯ. ಇವರ ಹೇಳಿಕೆಗಳನ್ನು ನೋಡಿದರೆ ನನಗನ್ನಿಸುತ್ತದೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷ ಕಳೆದರೂ ಕೂಡ ಈ ರಾಷ್ಟ್ರ ಏಕೆ ಅಭಿವೃದ್ಧಿಯಾಗಲಿಲ್ಲವೆಂದರೆ ಈ ರಾಜ್ಯವನ್ನು ಕಳೆದ 50 ವರ್ಷಗಳಿಂದ ಕಾಂಗ್ರೆಸ್‌ರವರು ಆಳಿದರು. ಅವರು ಆಡಳಿತವನ್ನು ಮಾಡಿದರು. ಈ ರಾಷ್ಟ್ರ ಹಾಗೂ ರಾಜ್ಯದ ಅಭಿವೃದ್ಧಿಯಾಗಲಿಲ್ಲ. ಇವರು ಚುನಾವಣೆಯನ್ನು ಏಕೆ ಗೆದ್ದರು ಅಂದರೆ, ನಮ್ಮಗಳ ಆಂತರಿಕ ಜಗಳದಿಂದ ಈ ಸರ್ಕಾರ ಅಧಿಕಾರಕ್ಕೆ ಬಂತು. ಇವರ ಪಕ್ಷ ಬಂದಮೇಲೆ ಮಳೆ ಬರಲಿಲ್ಲ. 4ನೇ ವರ್ಷ ಕಳೆದು 5ನೇ ವರ್ಷ ಬಂದರೂ ಕೂಡ ಚುನಾವಣೆಗೆ ಹೋಗುತ್ತೇವೆ ಎನ್ನುವ ಒಂದು ಮಾತನ್ನು ಹೇಳಿದರೂ ಕೂಡ ಮಳೆ ಬರಲಿಲ್ಲ. ನನಗನ್ನಿಸುತ್ತದೆ ಇವರ ಕಾಲುಗುಣ ಸರಿಯಾಗಿಲ್ಲವೆಂದು ಅನಿಸುತ್ತದೆ. ಜನರು ತೀರ್ಮಾನ ಮಾಡಿಕೊಂಡಿದ್ದಾರೆ. ಆಮೇಲೆ ಬರಗಾಲದ ಬಗ್ಗೆ ನಾವು ಹಣವನ್ನು ಖರ್ಚು ಮಾಡಿದ್ದೇವೆ. ಹಣ ಖರ್ಚು ಮಾಡಿದ್ದೇವೆ.

ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿದ್ದೇವೆ. ಜನರಿಗೆ ಉತ್ತಮ ಗುಣಮಟ್ಟದ ವಿದ್ಯುತ್‌ನ್ನು ಕೊಟ್ಟಿದ್ದೇವೆ, ಅದನ್ನು ಇವರು ಯಾವರೀತಿ ಹೇಳುತ್ತಾರೋ ನಮಗೆ ಒಂದು ತರಹಃ ನಗು ಬರುತ್ತದೆ. ನಿಜಕ್ಕೂ ಕೂಡ ಈ ನಾಲ್ಕೂವರೆ ವರ್ಷಗಳು ಈ ರಾಜ್ಯಕ್ಕೆ ಒಂದು ಕರಾಳ ದಿವಸ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಜನರು ಎಷ್ಟರಮಟ್ಟಿಗೆ ಇದ್ದಾರೆಂದು ಹೇಳಿದರೆ, ಚುನಾವಣೆ ಎಷ್ಟು ಬೇಗ ಬರುತ್ತದೆ, ಈ ಸರ್ಕಾರವನ್ನು ಎಷ್ಟು ಬೇಗ ತೊಲಗಿಸುತ್ತೇವೆ ಎನ್ನುವ ಒಂಧು ಅಭಿಪ್ರಾಯಕ್ಕೆ ಜನ ಬಂದಾಗಿದೆ. ಮುಂದಿನ ಚುನಾವಣೆಯಲ್ಲಿ ಇವರು ಗೆಲ್ಲುವುದಕ್ಕೆ ಸಾಧ್ಯವಿಲ್ಲ. ನಾನು ಸರ್ಕಾರವನ್ನು ಏಕೆ ನೇರವಾಗಿ ಟೀಕೆ ಮಾಡುತ್ತಿದ್ದೇನೆಂದರೆ, ಈ ತರಹಃ ನಾನು ಯಾವತ್ತು ಸರ್ಕಾರವನ್ನು ಟೀಕೆ ಮಾಡಿರಲಿಲ್ಲ. ನೋಡೋಣ, ಜನರು ಇವರನ್ನು ಆಯ್ಕೆ ಮಾಡಿದ್ದಾರೆ. ಜನರಿಗೆ ಇವರು ಒಳ್ಳೆಯದನ್ನು ಮಾಡಬಹುದೇ ಎಂದು ನಾವು ಅಂದುಕೊಂಡಿದ್ದೆವು. ಈ ವರ್ಷದ ಕೊನೆಯ ರಾಜ್ಯಪಾಲರ ಭಾಷಣ ಹೇಗಿದೆ ಎಂದರೆ, ಇವೆಲ್ಲವೂ ಸತ್ಯಕ್ಕೆ ದೂರವಾಗಿದೆ. ನಾವೇನಾದರು ಕೋರ್ಟಿನಲ್ಲಿ ಸಾಕ್ಷಿಯನ್ನು ಹೇಳಬೇಕಾದರೆ ನಾವು ಹೇಳುವುದೆಲ್ಲಾ ಸತ್ಯ ಸತ್ಯವನ್ನು ಬಿಟ್ಟು ಬೇರೇನೂ ಹೇಳುವುದಿಲ್ಲ. ಎನ್ನುವ ಹಾಗೆ ರಾಜ್ಯಪಾಲರ ಭಾಷಣದಲ್ಲಿ ನನ್ನ ಸರ್ಕಾರ ನನ್ನ ಸರ್ಕಾರ ಹೇಳುತ್ತಾರೆಯೇ ಹೊರತು ಯಾವುದೇ ಒಂದು ಗುರುತರವಾದಂತಹ ಜವಾಬ್ದಾರಿಯನ್ನಿಟ್ಟುಕೊಂಡು ಇವರು ಕಾರ್ಯವನ್ನು ನಿರ್ವಹಿಸಲಿಲ್ಲ. ಹೈಟೆಕ್ ಕೂಡ ಮಾಡಲಿಲ್ಲ. ಸಿಂಗಪೂರ್ ಕೂಡ ಮಾಡಲಿಲ್ಲ. ಈ ಸರ್ಕಾರ ರೈತರ ಬಗ್ಗೆಯಂತೂ ಕೂಡ ಚಿಂತನೆಯನ್ನೂ ಕೂಡ ಮಾಡಲಿಲ್ಲ. ರೈತರ ವಿರೋಧಿಯಾಗಿ ನಾಲ್ಕೂವರೆ ವರ್ಷಗಳ ಕಾಲ ಈ ಸರ್ಕಾರ ನಡೆದುಕೊಂಡು ಬಂದಿದೆ. ನಾವು ಈ ಸರ್ಕಾರವನ್ನು ಒಪ್ಪಿಕೊಳ್ಳಬೇಕಾ ಎನ್ನುವಂತಹ ಪ್ರಶ್ನೆಯನ್ನು ಈ ಸಭೆಯಲ್ಲಿ ಹಾಕಬೇಕಾಗುತ್ತದೆ. 450 ಜನ ರೈತರು ಆತ್ಮಹತ್ಯೆಯನ್ನು ಮಾಡಿಕೊಂಡರು. ವಿಷವನ್ನು ಕುಡಿದರು, ನೇಣು ಹಾಕಿಕೊಂಡರು, ಈ ಸರ್ಕಾರದ ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ, ರೈತರ ಮನೆಯ ಬಾಗಿಲಿಗೆ ಹೋಗುವಂತಹ ಪ್ರವೃತ್ತಿಯನ್ನು ತೋರಿಸಲಿಲ್ಲವೆಂದು ಹೇಳಿದರೆ ಈ ಸರ್ಕಾರದ ಮಂತ್ರಿಗಳ, ಮುಖ್ಯಮಂತ್ರಿಗಳ ಹೃದಯ ಎಷ್ಟು ಕಠಿಣವಾಗಿದೆ ಎನ್ನುವುದನ್ನು ನಾನು ತಮ್ಮ ಮುಖಾಂತರ ಅವರ ಗಮನಕ್ಕೆ ತರುತ್ತಿದ್ದೇನೆ. ಇವತ್ತಿನದಿವಸ ಬರಗಾಲದಲ್ಲಿ ಭ್ರಷ್ಟಾಚಾರ, ಆನ್‌ಲೈನ್ ಲಾಟರಿಯಲ್ಲಿ ಭ್ರಷ್ಟಾಚಾರ ಇಂತಹ ಬರಗಾಲದಲ್ಲಿ ಅನ್‌ಲೈನ್ ಲಾಟರಿಯಿಂದ ನಾವು ಬಿಸಿ ಊಟವನ್ನು ಹಾಕುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ವಿಧಾನಸಭೆಯಲ್ಲಿ ಹೇಳಿದರು. ಈ ಬಗ್ಗೆ ನಮಗೆ ನಾಚಿಕೆಯಾಗುತ್ತದೆ. ಆಡಳಿತದ ಅನುಭವವಿರುವ ಇವರು ಸುಮಾರು 45 ವರ್ಷಗಳ ರಾಜಕೀಯ ಮುತ್ಸದ್ದಿಯಾಗಿ ನಾವು ಅನ್‌ಲೈನ್ ಲಾಟರಿಯಲ್ಲಿ ಬಂದಂತಹ ಹಣದಿಂದ ಮಕ್ಕಳಿಗೆ ಬಿಸಿ ಊಟವನ್ನು ಹಾಕಿಸುತ್ತೇವೆ ಎಂದು ಹೇಳುತ್ತಾರೆ. ಒಂದು ವಿಚಾರದ ಬಗ್ಗೆ ನಾವು ಹೇಳುವುದಾದರೆ, ಇವರು ಬಹಳ ಪ್ರಚಾರ ಪ್ರಿಯರಾಗಿದ್ದಾರೆ. ಎಷ್ಟು ಬೇಗ ಇವರು ತೀರ್ಮಾನ ತೆಗೆದುಕೊಂಡರು ಎಂದರೆ ಇವರು ಪೂರ್ವಪರವಾಗಿ ಯೋಚನೆಯನ್ನು ಮಾಡಲೇ ಇಲ್ಲ. ಯಾವ ರೀತಿಯಾಗಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತಂದರೆ ಆ ಯೋಜನೆಯಿಂದ ಮಕ್ಕಳಿಗೆ ಒಳ್ಳೆಯದಾಗುತ್ತದೆ. ಪ್ರಾರಂಭದಲ್ಲಿ ಯಾವುದೇ ಒಂದು ಇನ್‌ಫ್ರಾಸ್ಟ್ರಕ್ಚರ್‌ನ್ನು ಮಾಡಿಕೊಂಡ ಮೇಲೆ ಮಕ್ಕಳಿಗೆ ಇವರು ಬಿಸಿ ಊಟವನ್ನು ಕೊಟ್ಟರು, ಅದರ ಬಗ್ಗೆ ಪೂರ್ವಸಿದ್ದತೆ ಇಲ್ಲದೆ ಕೆಲವೊಂದು ತೊಂದರೆಯಾಯಿತು. ಒಂದು ವಿಚಾರದಲ್ಲಿ ನೀವೂ ಹೇಳುವುದಾದರೆ ಇವತ್ತು ನಮ್ಮಲ್ಲಿ ಬಡತನ ತಾಂಡವವಾಡುತ್ತಿದೆ, ಬರಗಾಲವಿದೆ. ಏನೂ ಬಡವರ

ಮಕ್ಕಳು ಊಟದಿಂದ ವಂಚಿತರಾಗಿದ್ದಾರೆ. ಆ ಒಂದು ಮಧ್ಯಾಹ್ನದ ಊಟಕ್ಕೋಸ್ಕರ ಇವತ್ತು ನಾವು ಶಾಲೆಯಲ್ಲಿ ಹಾಜರಿಯ ಸಂಖ್ಯೆ ಜಾಸ್ತಿಯಾಗಿದೆ ಎನ್ನುವಂತಹ ವಿಚಾರವನ್ನೂ ಕೂಡ ಇಲ್ಲಿ ಪ್ರಸ್ತಾಪ ಮಾಡಿದಾಗ ಅದನ್ನು ನಾವು ಒಪ್ಪಿಕೊಳ್ಳೋಣ, ಅದನ್ನು ಸ್ವಾಗತಿಸೋಣ. ಅದನ್ನು ನಾವು ಇಲ್ಲವೆಂದು ಹೇಳುವುದಿಲ್ಲ. ಏಕೆಂದರೆ ಮಧ್ಯಾಹ್ನದ ಒಂದು ಊಟ ಸಿಗುವಂತಹ ವ್ಯವಸ್ಥೆಗೋಸ್ಕರ ಮಕ್ಕಳು ಶಾಲೆಗೆ ಬರುತ್ತಿದ್ದಾರೆ, ಇವತ್ತು ಬರಗಾಲದ ಬಗ್ಗೆ ಹೇಳುವುದಾದರೆ, ಬಿಜೆಪಿಯವರ ಮೇಲೆ ಕಾಂಗ್ರೆಸ್‌ನವರು ಹೇಳುವುದು, ಕಾಂಗ್ರೆಸ್ ಮೇಲೆ ಬಿಜೆಪಿಯವರು ಹೇಳುವುದು, ಕೇಂದ್ರ ಸರ್ಕಾರ ನಮಗೆ ಸಹಕಾರವನ್ನು ನೀಡುತ್ತಿಲ್ಲ. ಆಹಾರಧಾನ್ಯಗಳನ್ನು ನಮಗೆ ಕೊಡುತ್ತಿಲ್ಲ. ಬೇರೆ ರಾಜ್ಯಗಳಿಗೆ ಕೊಟ್ಟಷ್ಟು ಹಣವನ್ನು ನಮಗೆ ಕೊಡುತ್ತಿಲ್ಲ. ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಬಿಜೆಪಿ ನಾಯಕರು ಇವರು ನಾವು ಕೊಟ್ಟಂತಹ ಹಣವನ್ನು ಖರ್ಚು ಮಾಡುತ್ತಿಲ್ಲ. ಸರಿಯಾದ ರೀತಿಯಲ್ಲಿ ವಿತರಣೆಯಾಗುತ್ತಿಲ್ಲ. ಇಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ, ಎಂದು ಬಿಜೆಪಿಯ ನಾಯಕರು ಹೇಳುತ್ತಿದ್ದಾರೆ. ಈ ಬಗ್ಗೆ ನಮ್ಮ ಪಟೇಲರು ಕಾಂಗ್ರೆಸ್‌ನವರು ಬೆಂಕಿಪೊಟ್ಟಣ, ಬಿಜೆಪಿಯವರು ಸೀಮೆ ಎಣ್ಣೆ ಎಂದು ಹೇಳುತ್ತಿದ್ದರು. ಹೀಗಾಗಿ ಇವರು ಅವರ ಮೇಲೆ ಆರೋಪ, ಅವರು ಇವರ ಮೇಲೆ ಆರೋಪವನ್ನು ಹೊರಿಸುತ್ತಿದ್ದಾರೆ. ಇವತ್ತು ಏನಾಗಿದೆ ಎಂದರೆ, ಬರಗಾಲದಲ್ಲೂ ನಾವು ಏನು ಬಡತನದ ರೇಖೆಯಲ್ಲಿರುವವರಿಗೆ ಆ ಕುಟುಂಬಗಳಿಗೆ ಏನೂ ಕೂಲಿಯನ್ನು ಕೊಡುತ್ತೇವೆಂದು ಹೇಳಿದ್ದು, ಅದನ್ನು ಕೊಡಲಿಕ್ಕೆ ಇವರಿಂದ ಸಾಧ್ಯವಾಗಲಿಲ್ಲ. ಒಂದು ಕುಟುಂಬಕ್ಕೆ 100 ದಿವಸ ನಾವು ಮಾನವ ಉತ್ಪಾದನಾ ದಿನಗಳು ಕೊಡುತ್ತೇವೆಂದು ಹೇಳಿದರು. ಅದನ್ನು ಕೊಡುವುದಕ್ಕೆ ಇವರಿಂದ ಸಾಧ್ಯವಾಗಲಿಲ್ಲ. ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಇವರಿಂದ ಆಗಲಿಲ್ಲ. ಈ ವರ್ಷ ತಾವು ಚುನಾವಣೆಗೆ ಹೋಗಬೇಕು. ಮೇ ತಿಂಗಳಲ್ಲಿ ತಾವು ಚುನಾವಣೆಗೆ ಹೋದರೆ ತಾವು ಏನು ಜನರಿಗೆ ಸುಳ್ಳನ್ನು ಹೇಳಿದ್ದೀರಿ, ತಾವು ಪೊಳ್ಳು ಭರವಸೆಗಳನ್ನು ಏನು ಕೊಟ್ಟಿದ್ದೀರಿ, ಜನರು ನಿಮ್ಮನ್ನು ಕೇಳುತ್ತಾರೆ, ಏನು ಸ್ವಾಮಿ ನಮಗೆ 12 ಗಂಟೆಗಳ ಕಾಲ ವಿದ್ಯುತ್‌ನ್ನು ಕೊಟ್ಟಿದ್ದಿರಾ? ಉತ್ತಮ ಗುಣಮಟ್ಟದ ಕುಡಿಯುವ ನೀರನ್ನು ಕೊಟ್ಟಿರಾ ಎಂದು ಈಗಾಗಲೇ ನೀರಿನ ಬಗ್ಗೆ ಆಹಾಕಾರ ನೀರಿನ ಸಮಸ್ಯೆ, ಈ ರಾಜ್ಯದಲ್ಲಿ ಉದ್ಭವಿಸಿದೆ. ನೀರಿನ ಸಮಸ್ಯೆ ಎಷ್ಟು ಕಠಿಣವಾಗಿದೆ ಎಂದರೆ ಯಾವುದೇ ಜನರಿಗೆ ಇವತ್ತಿನದಿವಸ ಉತ್ತರವನ್ನು ಕೊಡುವುದಕ್ಕೆ ಆಗದೆ ಇರುವಂತಹ ಪರಿಸ್ಥಿತಿಯಾಗಿದೆ. ಶ್ರೀಮಾನ್ ಕೃಷ್ಣಭೈರೇಗೌಡರು ಅವರಿಗೆ ಇದು ಕೇವಲ ಮೊದಲನೆಯ ಅಧಿವೇಶನವಾಗಿದೆ. ಅವರು ಇವರ ಆಡಳಿತದ ವೈಖರಿಯನ್ನು ನೋಡಿ ಅವರ ಭಾಷಣವು ಹೇಗಿತ್ತೆಂದರೆ ಬಹಳ ತೀಕ್ಷ್ಣವಾಗಿತ್ತು. ಒಂದು ಅಧಿವೇಶನದಲ್ಲೂ ಕೂಡ ಭಾಗವಹಿಸದಂತಹ ಶ್ರೀ ಕೃಷ್ಣಭೈರೇಗೌಡರಿಗೆ ಇದು ಆಗಿರಬೇಕಾದರೆ ನಾವು ಈ ನಾಲ್ಕೂವರೆ ವರ್ಷಗಳ ಕಾಲ ಆಡಳಿತವನ್ನು ಸಹಿಸಿಕೊಂಡು ಬಂದಿದ್ದೇವಲ್ಲಾ, ಎನ್ನುವುದರ ಬಗ್ಗೆ ನಾವು ಯೋಚನೆಯನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ನಮಗೂ ಕೂಡ ತಾಳ್ಮೆ ಇದೆ, ಇವರು ಇವತ್ತು ಬರಗಾಲದ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ಮಾಡುವುದಕ್ಕೆ ಹೋಗಲಿಲ್ಲ. ಉದಾಹರಣೆಗೆ ಹೇಳುವುದಾದರೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬರಗಾಲದ ಕೆಲಸ ನಡೆದಿದೆ ಎಂದು ನಮ್ಮ ಸಚಿವರು ಹೇಳುತ್ತಿದ್ದಾರೆ. ಆದರೆ ಏನು ನಡೆಯಬೇಕಾಗಿತ್ತೋ ಅದು ನಡೆಯಲಿಲ್ಲ. ಒಂದು ಕುಟುಂಬದ ಸದಸ್ಯನಿಗೆ 100 ದಿವಸಗಳು ಏನು ಕೊಡಬೇಕಾಗಿತ್ತೋ ಆ ಕೆಲಸವನ್ನು ಇವರು ಕೊಡುವುದಕ್ಕಾಗಲಿಲ್ಲ. ಇನ್ನು ಮುಂದಾದರೂ

ಕೂಡ ಆ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ಈಗಾಗಲೇ 4–5 ವರ್ಷಗಳಿಂದ ರೈತರ ಸಮಸ್ಯೆಯ ಬಗ್ಗೆ ಚಕಾರವನ್ನು ಎತ್ತಲಿಲ್ಲ. ನಮ್ಮ ಜಿಲ್ಲಾ ಸಚಿವರಿಗೆ ತೆಂಗಿನ ಮರಗಳನ್ನು ತೋರಿಸಿದೆವು. ಆ ತೆಂಗಿನ ಮರಗಳನ್ನು ತೋರಿಸಿದಾಗ ನಮಗೆ ಹೊಟ್ಟೆ ಉರಿಯುತ್ತದೆ. ತೆಂಗಿನ ಮರಕ್ಕೆ ನುಸಿರೋಗ ಬಂದಿದೆ. ಕಪ್ಪುತಲೆ ಹುಳ ರೋಗ ಕಳೆದ ಸಾರಿ ನಮ್ಮ ನಾಯಕರಾದ ಶ್ರೀಮಾನ್ ಸಿಂಧ್ಯಾರವರು ಒಂದು ಮರಕ್ಕೆ 2 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಿ ಎಂದು ಹೇಳಿದರು. ಒಂದು ಮರಕ್ಕೆ ಎರಡು ಸಾವಿರ ರೂ. ಪರಿಹಾರವನ್ನು ಕೊಡಿ ಎಂದು ನಾವುಗಳೆಲ್ಲರೂ ಬೇಡಿಕೊಂಡೆವು. ಕನಿಷ್ಠ ಪಕ್ಷ ಕಡೂರು ತಾಲ್ಲೂಕಿನಲ್ಲಿ ಸುಮಾರು 4 ರಿಂದ 5 ಲಕ್ಷ ತೆಂಗಿನ ಮರಗಳು ಒಣಗಿಹೋಗಿವೆ ಇವತ್ತಿನ ದಿವಸ ಅಡಿಕೆ ತೋಟಗಳು ಒಣಗಿ ಹೋಗುತ್ತಿದೆ. ನೀರಿನ ಅಂತರ್‌ಜಲ ಕಡಿಮೆಯಾಗಿದೆ ಎನ್ನುವಂತಹ ವಿಚಾರವನ್ನು ಪ್ರಸ್ತಾಪ ಮಾಡಿದೆವು. ಆದರೆ ಇವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಏನು ಮಾಡಿದರೆಂದರೆ, ಶ್ರೀಮಾನ್ ಚಂದ್ರೇಗೌಡರು ಕಾಫಿ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್‌ನಲ್ಲಿ 25 ಲಕ್ಷ ರೂಗಳನ್ನು ಕೊಡಿಸಿದರು. ಕಾಫಿ ಬೆಳೆಗಾರರಿಗೆ ಅಂತರ್‌ರಾಷ್ಟ್ರೀಯ ಮಾರ್ಕೆಟ್‌ನಲ್ಲಿ ರೇಟ್ ಕಡಿಮೆಯಾಗಿತ್ತು. ಅವರು ರೇಟ್ ಜಾಸ್ತಿಯಾಗಿದ್ದಾಗಂತಲೂ ಕೇಳಲಿಲ್ಲ. ಅವರೆಲ್ಲರೂ ಕಾಫಿ ರೇಟ್ ಕಡಿಮೆಯಾದಾಗ ಬ್ಯಾಂಕಿನಲ್ಲಿ ಸಾಲವನ್ನು ಮಾಡಿಕೊಂಡಿದ್ದರು, ಅವರಿಗೆ ಸಾಲ ಕೊಡಿ ನಾನು ಬೇಡವೆಂದು ಹೇಳಲಿಲ್ಲ. ನಾನೂ ಕೂಡ ಒಬ್ಬ ರೈತ. ಆದರೆ 4 ವರ್ಷಗಳಿಂದ ತೆಂಗಿನ ಬೆಳೆಗಳು ಯಾವ ಮಟ್ಟಕ್ಕೆ ಹೋಗಿದೆ ಎಂದರೆ, ಆ ತೆಂಗಿನ ಕಾಯಿಯನ್ನು ನೋಡಿದರೆ ಮನುಷ್ಯನಿಗೆ ಕುಷ್ಠರೋಗ ಬಂದಂತ ಸ್ಥಿತಿಯಲ್ಲಿ ಆಗಿರುತ್ತದೆ. ಆ ರೀತಿಯಾಗಿ ಆ ತೆಂಗಿನ ಕಾಯಿಗಳಿಗೂ ಆಗಿದೆ. ನಮ್ಮ ತೆಂಗಿನ ಮರದ ಪರಿಸ್ಥಿತಿಯನ್ನು ಇದನ್ನು ತಾವು ಬಂದು ನೋಡಬೇಕು ಅಧ್ಯಕ್ಷರೆ, ಇವತ್ತೆನಾದರೂ ಒಂದು ಬೆಂಕಿಕಡ್ಡಿಯನ್ನು ಗೀರಿದರೆ ಹೆಚ್ಚು ಕಡಿಮೆ ಆ ಸಾಲಿನಲ್ಲಿರುವ ಎಲ್ಲಾ ಮರಗಳು ಸುಟ್ಟು ಹೋಗುತ್ತದೆ. ಅಷ್ಟೊಂದು ತೆಂಗಿನ ಮರಗಳು ಒಣಗಿ ನಿಂತಿದೆ. ಇರುವಂತಹ ತೆಂಗಿನ ಕಾಯಿಗೆ ಇವರು ಮಾರ್ಕೆಟ್ ಬೆಲೆ ಕೊಡುವುದಕ್ಕಾಗುತ್ತಿಲ್ಲ. ಅಲ್ಲಿ ಮಾರ್ಕೆಟ್‌ನಲ್ಲಿ ವ್ಯಾಪಾರಸ್ಥರ ಸುಲಿಗೆ ದಳ್ಳಾಳಿಗಳ ಸುಲಿಗೆ, ಆದರೆ ರೈತ ಬೆಳೆದಂತಹ ಬೆಳೆಗಳಿಗೆ ಇವರು ಏನು ಮಾರ್ಕೆಟ್ ಬೆಲೆ ಕೊಡುತ್ತೇವೆಂದು ಹೇಳಿದ್ದಾರೆ ಅದನ್ನು ಇವರ ಕೈಯಲ್ಲಿ ಕೊಡುವುದಕ್ಕಾಗಲಿಲ್ಲ. ಆದರೆ ರೈತರ ಸಾಲವನ್ನು ಕಡ್ಡಾಯವಾಗಿ ವಸೂಲು ಮಾಡಬೇಕು. ಇವರು ಯಾವಾಗ ವಸೂಲಿ ಮಾಡುವುದಕ್ಕೆ ಹೋದರು. ರೈತ ಯಾವಾಗಲೂ ಸ್ವಾಭಿಮಾನಿಯಾಗಿರುತ್ತಾನೆ. ಅವನು ಕೊಟ್ಟ ಸಾಲವನ್ನು ಕೊಟ್ಟುಕೊಂಡು ಬಂದಿರುತ್ತಾನೆ. ಇವತ್ತು ಅವನು ಅವಮಾನವನ್ನು ಸಹಿಸಲಾರದೆ ಸುಮಾರು 400 ರಿಂದ 500 ಜನ ರೈತರು ಸತ್ತು ಹೋದರು. ಚುನಾವಣೆ ಬಂದ ತಕ್ಷಣ ಈ ಗೋಸುಂಬೆ ಬಣ್ಣ ಬದಲಾಯಿಸಿದ ಹಾಗೆ ನಾವು ಪ್ಯಾಕೇಜ್‌ನಲ್ಲಿ ಶೇಕಡ ಬಡ್ಡಿಯನ್ನು ಮನ್ನಾ ಮಾಡಿದ್ದೇವೆ ಇವರು ಎಷ್ಟು ಸಾಲವನ್ನು ಮನ್ನಾ ಮಾಡಿದ್ದಾರೆ? ಸುಮಾರು 5 ಪರ್ಸೆಂಟ್ ಸಬ್ಸಿಡಿ, 5 ಪರ್ಸೆಂಟ್ ಹಣವನ್ನು ರೈತ ಕಟ್ಟಬೇಕು. ಇನ್ನು 5 ಪರ್ಸೆಂಟ್ ಪ್ಯಾಕೇಜ್‌ನಲ್ಲಿ ಇವರು ಮಾಡಿಕೊಂಡಿದ್ದಾರೆ. ರೈತರಿಗೋಸ್ಕರ ನಾವು 838 ಕೋಟಿ ರೂಗಳ ಪ್ಯಾಕೇಜ್‌ನ್ನು ಮಾಡಿಕೊಂಡಿದ್ದೇವೆ. ಇವರು ಏನಾದರೂ ವಸೂಲಾತಿಯನ್ನು ನಿಲ್ಲಿಸದೆ ಹೋಗಿದ್ದರೆ ಇಷ್ಟೊತ್ತಿಗೆ ರೈತರ ಆತ್ಮಹತ್ಯೆ ಒಂದೂವರೆ ಸಾವಿರ ಜನ ಸಾಯುತ್ತಿದ್ದರು. ವಸೂಲಾತಿಯನ್ನು ನಿಲ್ಲಿಸಿರುವುದರಿಂದ ಏನಾಗಿದೆ ಎಂದರೆ, ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಸಂಖ್ಯೆ ಕಡಿಮೆಯಾಗಿದೆ. ಯಾವುದೇ ಒಂದು ತೆಂಗಿನ ಬೆಳೆಗಾರರಿಗೆ ಪರಿಹಾರವನ್ನು

ಕೊಡುವಂತಹ ಯೋಚನೆಯನ್ನು ಈ ಸರ್ಕಾರ ಮಾಡಲಿಲ್ಲ. ಅದು ಕೀಟಬಾಧೆನೋ ರೋಗಬಾಧೆನೋ ಅದನ್ನು ನಿವಾರಣೆ ಮಾಡುವುದಕ್ಕೂ ಕೂಡ ಇವರು ವಿಶ್ವವಿದ್ಯಾನಿಲಯದ ತಜ್ಞರಿಂದ ಯಾವುದೇ ಕಾರ್ಯಕ್ರಮಗಳನ್ನು ಸರ್ಕಾರವು ರೂಪಿಸಲಿಲ್ಲ. ಹೀಗಾದರೆ ತೆಂಗಿನ ಬೆಳೆಗಾರರ ಗತಿ ಏನು?

ಅಧ್ಯಕ್ಷರು : ಮಾನ್ಯ ಕೃಷ್ಣಮೂರ್ತಿಯವರೇ ಇಷ್ಟೊಂದು ಡಿಟೇಲ್ ಹೇಳುವುದಕ್ಕೆ ಹೋಗಬೇಡಿ, ಪಾಯಿಂಟ್ ಪಾಯಿಂಟ್ ಹೇಳಿಕೊಂಡು ಬನ್ನಿ, ಒಂದೊಂದು ತೆಂಗಿನ ಗಿಡದ ವಿಚಾರ ಪ್ರಸ್ತಾಪ ಮಾಡುವುದಕ್ಕೆ 10 ನಿಮಿಷ ತೆಗೆದುಕೊಂಡರೆ ಏನರ್ಥ?

ಶ್ರೀ ಕೆ.ಎಂ. ಕೃಷ್ಣಮೂರ್ತಿ : ತೆಂಗಿನ ಬೆಳೆಗಾರರಿಗೆ ಅನ್ಯಾಯವಾಗಿದೆ.

ಅಧ್ಯಕ್ಷರು : ತೆಂಗಿನ ಬೆಳೆಗಾರರಿಗೆ ಅನ್ಯಾಯವಾಗಿದೆ ಅಷ್ಟು ಮಾತ್ರ ಹೇಳಿ ಸಾಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇವರು ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಸಂದರ್ಭದಲ್ಲಿ ಹೇಳಲಿಲ್ಲ. ಸುಮಾರು 67 ಪುಟ, 140 ಪ್ಯಾರಾದಲ್ಲಿ ಯಾವುದರ ಬಗ್ಗೆಯೂ ಹೇಳಲಿಲ್ಲ. ರೈತರಿಗೆ ಬೆಳೆ ವಿಮೆಯನ್ನು ಕೊಡುವುದರಲ್ಲಿ ಕೂಡ ಅನ್ಯಾಯವಾಗಿದೆ. ಬೆಳೆ ವಿಮೆ ಬಗ್ಗೆ ಅಂಕಿಅಂಶಗಳ ಇಲಾಖೆಯವರು ತಪ್ಪು ಮಾಹಿತಿಯನ್ನು ಕೊಡುವುದರ ಮೂಲಕ ಬ್ಯಾಂಕ್‌ನವರು ಅವರಿಗೆ ತೊಂದರೆ ಕೊಡುತ್ತಿರುವುದರಿಂದ, ಈ ವಿಚಾರವನ್ನು ಸಹ ಹೇಳಲಿಕ್ಕೆ ಹೋಗಲಿಲ್ಲ. ಬಡವರಿಗೆ ಬಿ.ಪಿ.ಎಲ್. ಕಾರ್ಡ್ ಕೊಡುತ್ತೇವೆಂದು ಹೇಳಿ ಹಸಿರು ಬಣ್ಣವಿದ್ದುದ್ದನ್ನು ಬದಲಾಯಿಸಿದರಷ್ಟೆ. ನಾನು ಕೆ.ಡಿ.ಪಿ ಮೀಟಿಂಗ್‌ನಲ್ಲಿ ನಮ್ಮ ಜಿಲ್ಲಾ ಸಚಿವರಿಗೆ ಒಂದು ಪ್ರಶ್ನೆಯನ್ನು ಕೇಳಿದೆ, ಏನೆಂದರೆ ಗ್ರಾಮೀಣ ಪ್ರದೇಶದಲ್ಲಿ ಆಗ 11,800 ರೂಪಾಯಿಗಳಿಗೆ ಆದಾಯದ ಮಿತಿಯನ್ನೊಳಗೊಂಡ ಸರ್ಟಿಫಿಕೇಟ್ ನೀಡಿದರೆ ಮಾತ್ರ ಬಿ.ಪಿ.ಎಲ್. ಕಾರ್ಡ್‌ನ್ನು ಅವನಿಗೆ ಕೊಡಬೇಕೆಂದು ಇವತ್ತು ಹೆಚ್ಚು ಕಡಿಮೆ ನನ್ನ ಕ್ಷೇತ್ರದಲ್ಲಿ 27,000 ಹೊಸದಾದ ಅರ್ಜಿಗಳನ್ನು ಕೊಟ್ಟಿದ್ದಾರೆ. ಅದರಿಂದ ಸರ್ಕಾರ ಅದನ್ನು ಸರ್ವೆ ಮಾಡಿ ಅವರಿಗೆ ಬಿ.ಪಿ.ಎಲ್. ಕಾರ್ಡನ್ನು ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ತಾವು ಕೇಳಿದ್ದು 15 ನಿಮಿಷ, ಈಗ 20 ನಿಮಿಷವನ್ನು ಕೊಟ್ಟಿದ್ದೇನೆ. ದಯವಿಟ್ಟು ಇನ್ನು ಐದು ನಿಮಿಷಗಳಲ್ಲಿ ಬೇಗ ಮಾತನಾಡಿ ಮುಗಿಸಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ನಾನು ಬಹಳ ಸಂಕ್ಷಿಪ್ತವಾಗಿ ಮಾತನಾಡುತ್ತಿದ್ದೇನೆ. ಇವರ ವಿಷಯಗಳನ್ನು ಒಂದು ಹರಿಕಥೆ ರೂಪದಲ್ಲಿ ಹೇಳಬಹುದು. ಮಜ್ಜಿಗೆ ರಾಮಾಯಣದಂತೆ, "ದಶರಥನ ಕಂದ, ರಾವಣನ ಕೊಂದ, ಸೀತೆಯನ್ನು ತಂದ," ಎನ್ನುವ ರೀತಿಯಲ್ಲಿ ನಾನು ಭಾಷಣ ಮಾಡುತ್ತಿದ್ದೇನೆ. ಇನ್ನು ವಿದ್ಯುಚ್ಛಕ್ತಿ ಸಮಸ್ಯೆ ಎಷ್ಟಿದೆಯೆಂದು ಹೇಳಿದರೆ, ಮುಖ್ಯಮಂತ್ರಿಗಳು 12 ಗಂಟೆಗಳ ಕಾಲ ನಾವು ವಿದ್ಯುತ್ ಅನ್ನು ಕೊಡುತ್ತೇವೆಂದು ಹೇಳಿದರು. ಇದನ್ನು ಅವರು ತಮ್ಮ ಆತ್ಮವನ್ನು ಮುಟ್ಟಿಕೊಂಡು ಹೇಳಬೇಕಾಗುತ್ತದೆ. ಹೋದ ಸಾರಿ ವಿದ್ಯುಚ್ಛಕ್ತಿ ಸಚಿವರು ಹೋದ ಸಾರಿ ಉತ್ತಮ ಗುಣಮಟ್ಟದಲ್ಲಿ ವಿದ್ಯುತ್ ಕೊಡುತ್ತೇವೆಂದು ಹೇಳಿದರು, ಆದರೆ ಅವರಿಂದ ಅದು ಸಾಧ್ಯವಾಗಲಿಲ್ಲ. ಇದರಿಂದ ಇವತ್ತು ವಿದ್ಯುತ್ತಿನ ಸಮಸ್ಯೆಯಿಂದ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದೆ.

ಅಧ್ಯಕ್ಷರು : ಇದುವರೆಗೂ ಮಾತನಾಡಿದವರೆಲ್ಲಾ ಸುಮಾರು ಸದಸ್ಯರು ವಿದ್ಯುತ್ತಿನ ಸಮಸ್ಯೆಯ ಬಗ್ಗೆ ಮಾತನಾಡಿದ್ದಾರೆ. ಪ್ರತಿಯೊಬ್ಬರೂ ಹೇಳಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಪಾಯಿಂಟ್ ಟು ಪಾಯಿಂಟ್ ಮಾತನಾಡುತ್ತಿದ್ದೇನೆ. 150 ಕಿ.ಮೀ. ವೇಗದಲ್ಲಿ ಓಡಿಸುತ್ತಿದ್ದೇನೆ.

ಅಧ್ಯಕ್ಷರು : ಇಲ್ಲ, ನೀವು ಆ ವೇಗದಲ್ಲಿ ಹೋಗುತ್ತಿಲ್ಲ. ಹಳೆ ಕಡೂರು ರೈಲು ವೇಗದಲ್ಲಿ ಹೋಗುತ್ತಿದ್ದೀರಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಇನ್ನೂ ಗ್ರಾಮ ಪಂಚಾಯಿತಿ ವಿಚಾರವೇನಾದೆಯೆಂದರೆ, ಏನು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಇದೆ. ಇದರಲ್ಲಿ ಇವರಿಗೆ ಬಹಳ ನಂಬಿಕೆ ಇದೆ. ಈ ವ್ಯವಸ್ಥೆ ಇವರ ಕಾಲದಲ್ಲೇ ಹಾಳಾಗಿರುವುದು. ನಮ್ಮ ನಾಯಕರಾದ ಶ್ರೀ ರಾಮಕೃಷ್ಣ ಹೆಗಡೆಯವರು ಅಧಿಕಾರ ವಿಕೇಂದ್ರೀಕರಣವನ್ನು ಜಾರಿಗೆ ತಂದು ಜನರ ಕೈಗೆ ಅಧಿಕಾರವನ್ನು ಕೊಡಬೇಕೆಂದು ಹೇಳಿದ್ದರೂ, ಅದನ್ನು ಹಾಳು ಮಾಡಿರುವುದೇ ಕಾಂಗ್ರೆಸ್ ಸರ್ಕಾರ. ಐದು ಲಕ್ಷ ರೂ.ಗಳನ್ನು ಕೊಟ್ಟಿಲ್ಲ. 50,000–00 ರೂ.ಗಳನ್ನು ಕೊಟ್ಟಿಲ್ಲ. ಇವರು ಐದು ಲಕ್ಷ ರೂಪಾಯಿಗಳನ್ನು ಕೊಟ್ಟು ಜಿಲ್ಲಾ ಪಂಚಾಯಿತಿ ಅಧಿಕಾರಿಗಳಿಗೆ ವಿದ್ಯುಚ್ಛಕ್ತಿ ಬಿಲ್ಲಿನ ಹಣವನ್ನು ಮುರಿದುಕೊಳ್ಳಿ ಅಂತ ಹೇಳಿಬಿಡುತ್ತಾರೆ. ಜನಗಳು ಪತ್ರಿಕೆಯಲ್ಲಿ 5.00 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಆದರೂ ನೀವು ರಸ್ತೆಯನ್ನು ಮಾಡಿಸಲಿಲ್ಲ ಅಂತ ಕೇಳಿದರೆ ಒಬ್ಬ ಗ್ರಾಮ ಪಂಚಾಯಿತಿ ಸದಸ್ಯ ಅಥವಾ ಚೇರ್‌ಮನ್ ಜನಗಳಿಗೆ ಏನು ಹೇಳಬೇಕು? ಇದು ಅಧಿಕಾರದ ವಿಕೇಂದ್ರೀಕರಣದ ವ್ಯವಸ್ಥೆಯೇ ಇದು? ಇವತ್ತು ಕಾರ್ಯದರ್ಶಿ ಸರಿಯಾಗಿ ಕಚೇರಿಗೆ ಬರುವುದಿಲ್ಲ. ಇದನ್ನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದಿದ್ದೇವೆ. ಕೆಲವೊಂದು ಸಮಸ್ಯೆಗಳನ್ನು ಅವರಿಗೆ ಹೇಳಿದ್ದರೂ ಸಹ ಅದನ್ನು ನಿವಾರಣೆ ಮಾಡುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿಲ್ಲ. ಇವತ್ತು ವಿದ್ಯುಚ್ಛಕ್ತಿಯ ಬಿಲ್ಲುಗಳು ಬಾಕಿ ಎಷ್ಟಿದೆ ಅಂದರೆ, ಸರ್ಕಾರ ಕಂಪೆನಿಗಳನ್ನು ನಷ್ಟವನ್ನು ತುಂಬಲಿಕ್ಕೆ ಈ ಕಂಪೆನಿಗಳನ್ನು ಸರ್ಕಾರ ಬಹಳ ಬುದ್ಧಿವಂತಿಕೆಯಿಂದ ಮಾಡಿದೆ.

ಅಧ್ಯಕ್ಷರು : ಪಂಚಾಯಿತಿಯವರು ವಿದ್ಯುಚ್ಛಕ್ತಿ ಬಿಲ್ಲನ್ನು ಕಟ್ಟಲೇಬೇಕಲ್ಲಾ

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಹೌದು, ವಿದ್ಯುತ್ ಅನ್ನು ಉಪಯೋಗಿಸದಿದ್ದರೂ ಸಹ ಅವರ ಕಂಬಗಳನ್ನು ಹಾಕಿ, ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಿ, ಪ್ರತಿ ತಿಂಗಳು ಆ ಹಣವನ್ನು ಮುರಿದುಕೊಳ್ಳುತ್ತಾರೆ.

ಅಧ್ಯಕ್ಷರು : ವಿದ್ಯುಚ್ಛಕ್ತಿ ಉಪಯೋಗಿಸದಿದ್ದರೆ ಅವರು ಮಾಡಲಿಕ್ಕೆ ಆಗುವುದಿಲ್ಲ. ಆಯಿತು ನೀವು ದಯವಿಟ್ಟು ಮುಂದುವರೆಸಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಎಲ್ಲಾ ಶಾಸಕರನ್ನು ಕೇಳಿ, ಸ್ವಲ್ಪ ನಮಗೆ ಇವತ್ತು ಕೊನೆಯ ದಿವಸವಾದರೂ ಮಾತನಾಡಲಿಕ್ಕೆ ಅವಕಾಶ ಕೊಡಿ,

ಅಧ್ಯಕ್ಷರು : ದಯವಿಟ್ಟು ನನ್ನ ಮಾತನ್ನು ಕೇಳಿ, ನೀವು 15 ನಿಮಿಷವನ್ನು ಕೇಳಿದ್ದಿರಿ, 22 ನಿಮಿಷವನ್ನು ಕೊಟ್ಟಿದ್ದೇನೆ. ನೀವೇ ಕೇಳಿದ್ದು 15 ನಿಮಿಷ ಸಾಕು ಅಂತ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ನೀವು ಈ ತರಹ ಹೇಳಿದರೆ ನಮ್ಮ ಮೈಂಡ್ ಅನ್ನೇ ಚೇಂಜ್ ಮಾಡಿಬಿಡುತ್ತೀರಿ. ನಮ್ಮಂತಹ ಯುವಕರಿಗೆ ಮಾತನಾಡಲಿಕ್ಕೆ ತಾವು ಪ್ರೋತ್ಸಾಹವನ್ನು

ಕೊಡಬೇಕು. ತಾವು ಹಿರಿಯರಾಗಿ ಮಾತನಾಡಲಿಕ್ಕೆ ಪ್ರೋತ್ಸಾಹ ಕೊಡಬೇಕು. ಶ್ರೀ ಚಂದ್ರೇಗೌಡರು 5.30 ಸಮಯ ಕೇಳಿದ್ದಾರೆ ಅಂತ ನಮಗೆ 10 ನಿಮಿಷ ಮಾತನಾಡಿ ಅಂದರೆ ಹೇಗಾಗುತ್ತದೆ?

ಅಧ್ಯಕ್ಷರು : ಯುವಕರಿಗೆ ಉತ್ತೇಜನ ಕೊಡಬೇಕೆಂತಲೇ 15 ನಿಮಿಷವನ್ನು ಕೇಳಿದ್ದರೂ ಸಹ 23 ನಿಮಿಷವನ್ನು ಕೊಟ್ಟಿದ್ದೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ರಾಜ್ಯಪಾಲರ ಭಾಷಣದಲ್ಲಿ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಮಾತನಾಡಿದ್ದಾರೆಯೇ ಹೊರತು ಗ್ರಾಮ ಪಂಚಾಯಿತಿ ಆಡಳಿತ ಹಾಗೂ ಹಣಕಾಸಿನ ವ್ಯವಸ್ಥೆ ಬಗ್ಗೆ ಗ್ರಾಮೀಣ ಸಮಸ್ಯೆಗಳ ಬಗ್ಗೆ ಯಾವುದೇ ಪ್ರಸ್ತಾಪವನ್ನು ಮಾಡಿಲ್ಲ. ಆದ್ದರಿಂದ ಸರ್ಕಾರ ಮುಂದಿನ ಬಜೆಟ್ ಮಂಡಿಸುವ ಸಮಯದಲ್ಲಿ ಈ ಬಗ್ಗೆ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ಇವತ್ತು ಕುಡಿಯುವ ನೀರಿನ ಯೋಜನೆಗಳೇನಾದರೂ ಕೆಟ್ಟು ಹೋದರೆ ಅದನ್ನು ಸರಿ ಮಾಡಲಿಕ್ಕೆ ಗ್ರಾಮಪಂಚಾಯ್ತಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಅದರಲ್ಲಿ ಯಾವುದೇ ಟೆಕ್ನಿಕಲ್ ಹ್ಯಾಂಡ್ ಇಲ್ಲ. ಹಿಂದೆ ಜಿಲ್ಲಾ ಪಂಚಾಯ್ತಿ ಇಂಜಿನಿಯರ್ ವಿಭಾಗಕ್ಕೆ ಕೊಟ್ಟಿದ್ದರು, ಆಗ ಸುಸೂತ್ರವಾಗಿ ಜನ ನೀರು ಕುಡಿಯುತ್ತಿದ್ದರು. ಇವತ್ತು ಟ್ರಾನ್ಸ್‌ಫಾರ್ಮರ್ ಸುಟ್ಟು ಹೋದರೆ ಕೆ.ಪಿ.ಟಿ.ಸಿ.ಎಲ್.ನವರು ಅವರಿಗೇನೂ ಜವಾಬ್ದಾರಿಯಿಲ್ಲ ಎನ್ನುವ ಹಾಗೆ, ಜೆಡ್.ಪಿ. ಇಂಜಿನಿಯರ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಿದರೆ ನಾವು ಅದನ್ನು ರಿಪೇರಿ ಮಾಡುವುದಿಲ್ಲ. ಅದನ್ನು ಗ್ರಾಮಪಂಚಾಯಿತಿಯವರೇ ಮಾಡಿಕೊಳ್ಳಬೇಕು. ಮೂರು-ನಾಲ್ಕು ಗ್ರಾಮ ಪಂಚಾಯ್ತಿಗಳಿಗೆ ಒಬ್ಬ ಕಾರ್ಯದರ್ಶಿ, ಯಾವ ರೀತಿ ಆಡಳಿತದ ವ್ಯವಸ್ಥೆಯನ್ನು ಜಾರಿಗೆ ತಂದು ಜನಗಳಿಗೆ ಬೇಕಾದ ಮೂಲಭೂತ ಸೌಲಭ್ಯವನ್ನು ಒದಗಿಸಬೇಕು ಎನ್ನುವ ಪರಿಜ್ಞಾನ ಕೂಡ ಈ ಸರ್ಕಾರಕ್ಕೆ ಇಲ್ಲ. ಲೋಕೋಪಯೋಗಿ ಸಚಿವರು ಇಲ್ಲೇ ಇದ್ದಾರೆ, ನಮ್ಮ ಜಿಲ್ಲೆಯಲ್ಲಿ 15 ರಿಂದ 20 ಕೋಟಿ ರೂ.ಗಳಷ್ಟು ಬಾಕಿ ಇದೆ. ಪ್ರತಿ ತಿಂಗಳು ಡೀಸೆಲ್‌ಗೂ ನಮ್ಮ ಡಿವಿಜನ್‌ನಲ್ಲಿ ಹಣವಿಲ್ಲ. ಶ್ರೀ ಧರ್ಮಸಿಂಗ್ ಅವರು ನಬಾರ್ಡ್ ಮೂಲಕ ರಸ್ತೆಗಳನ್ನು ಮಾಡಿಸಿದರು, ಆದರೆ ಅದನ್ನು ಜಿಲ್ಲಾಪಂಚಾಯಿತಿಯವರು ಮೆಂಟೇನ್ ಮಾಡುತ್ತಾರೆಯೇ? ಲೋಕೋಪಯೋಗಿ ಇಲಾಖೆಯವರು ಮೆಂಟೇನ್ ಮಾಡುತ್ತಾರೆಯೇ? ಇವತ್ತು ಇಡೀ ಜಿಲ್ಲೆಗೆ ಮಾಡಿರುವ ರಸ್ತೆಗಳನ್ನು ಮೆಂಟೇನ್ ಮಾಡದಿದ್ದರೆ 40 ರಿಂದ 50 ಕೋಟಿ ರೂಪಾಯಿಗಳು ಹಾಳಾಗಿ ಹೋಗುತ್ತದೆ. ಆದ್ದರಿಂದ ಈ ನಬಾರ್ಡ್ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮಾರ್ಪಡಿಸಿ ಆದರ ಮೆಂಟೇನ್ ವ್ಯವಸ್ಥೆಯನ್ನು ಮಾಡಿಕೊಡಬೇಕಾಗಿ ಮಾನ್ಯ ಲೋಕೋಪಯೋಗಿ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಶಾಸಕರ ನಿಧಿಯ ಬಗ್ಗೆ ಹೇಳಿದರು, ಅದನ್ನು ಮೂಗಿಗೆ ತುಪ್ಪ ಸವರಿದಂತೆ ನಮಗೆ ಕೊಟ್ಟರು, ಇನ್ನೊಂದು ಸಾರಿ ಬರಗಾಲಕ್ಕೆಂದು ಕೊಟ್ಟರು, ಬಹಳ ಬುದ್ಧಿವಂತರು, ತಮಗೂ ನಗು ಬರುತ್ತಿದೆ ಈ ಆಡಳಿತ ವಿಫಲತೆಯ ಬಗ್ಗೆ, ಆದರೆ ತಾವು ಆ ಸ್ಥಾನದಲ್ಲಿರುವುದರಿಂದ ಏನೂ ಹೇಳುವಂತಿಲ್ಲ. ಮಾನ್ಯ ಹಣಕಾಸಿನ ಸಚಿವರು ಈ ಸಾರಿ 25.00 ಲಕ್ಷ ರೂ. ಕೊಟ್ಟರು, ಹೋದ ಸಾರಿ 40.00 ಲಕ್ಷ ರೂ. ಕೊಡುತ್ತೇವೆಂದರು ಅದನ್ನು ಬರಗಾಲಕ್ಕೆ ಮುರಿದುಕೊಂಡರು. ಈ ಸಾರಿ ಚುನಾವಣೆ ಬರುತ್ತಿದೆ. ಈ ಸಾರಿ ಕೊಡುತ್ತಾರೋ? ಇಲ್ಲವೋ ಗೊತ್ತಿಲ್ಲ? ನಾವು ನಮ್ಮ ಜಿಲ್ಲಾಧಿಕಾರಿಗಳನ್ನು ಕೇಳುತ್ತಿದ್ದೇವೆ. ಬಸ್‌ನಲ್ಲಿ, ರೈಲಿನಲ್ಲಿ, ಬರುತ್ತಿದೆಯೇ ಅಥವಾ ಬ್ಯಾಂಕ್ ಡಿ.ಡಿ. ಅಥವಾ ಚೆಕ್ ಮೂಲಕ ಬರುತ್ತಿದೆಯೇ ಅಂತ? ಅವರು ಆ ಬಗ್ಗೆ ನಮಗೆ ಇನ್ನೂ ಆದೇಶ ಬಂದಿಲ್ಲ ಅಂತ ಹೇಳುತ್ತಿದ್ದರು. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸಲಿಕ್ಕೆ ಮಾನ್ಯ ಅಧ್ಯಕ್ಷರು

ಅವಕಾಶ ಮಾಡಿಕೊಟ್ಟಿದ್ದಕ್ಕೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಬೆಳಿಗ್ಗೆ ನನಗೆ ಮಾತನಾಡಲಿಕ್ಕೆ ಅವಕಾಶವಿತ್ತು. ಆದರೆ ನನ್ನ ಕ್ಷೇತ್ರದಲ್ಲಿ ಒಂದು ಮಗು ಹಾರ್ಟ್ ಅಟ್ಯಾಕ್ ಆಗಿ ಮರಣ ಹೊಂದಿದ್ದು ಅದರ ಶವವನ್ನು ಕಳುಹಿಸಿಕೊಡಬೇಕಾಗಿ ಬಂದಿದ್ದರಿಂದ ಬೆಳಿಗ್ಗೆ ನನಗೆ ಮಾತನಾಡಲಿಕ್ಕೆ ಸಾಧ್ಯವಾಗಲಿಲ್ಲ. ಈಗ ತಾವು ಮಾತನಾಡಿದ್ದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ಸರ್ಕಾರದ ಎಲ್ಲಾ ವಿಷಯಗಳನ್ನು ಅವರ ಗಮನಕ್ಕೆ ತಂದಿದ್ದೇನೆಂದು ಭಾವಿಸಿ, ಆಡಳಿತ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ಇನ್ನೊಂದು ಸಾರಿ ಅವರ ಗಮನಕ್ಕೆ ತಂದು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಕರಡಿ ಸಂಗಣ್ಣ ಅವರು 5 ನಿಮಿಷ, ಕಾಲ ಮಾತನಾಡಿ ನಂತರ ಮಾನ್ಯ ನಾರಾಯಣಸ್ವಾಮಿಯವರು 5 ನಿಮಿಷಗಳ ಕಾಲ ಮಾತನಾಡಬೇಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ಪ್ರಪ್ರಥಮವಾಗಿ ವಂದಿಸಿ ಈಗ ಅನೇಕ ವಿಚಾರಗಳನ್ನು ಹಿರಿಯ ಸದಸ್ಯರು, ಸ್ನೇಹಿತರು ಹೇಳಿದ್ದಾರೆ...

ಅಧ್ಯಕ್ಷರು : ಹೊಸ ವಿಷಯಗಳ ಬಗ್ಗೆ ಮಾತನಾಡಿ, ರಿಪೀಟ್ ಮಾಡಬೇಡಿ. ಬೇರೆ ಸದಸ್ಯರು ಹೇಳಿದ ವಿಷಯಗಳ್ನು ರಿಪೀಟ್ ಮಾಡಬೇಡಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಹೊಸ ವಿಷಯಗಳನ್ನು ಹೇಳುತ್ತೇನೆ. ಹಲವಾರು ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳ್ನನು ಸದನದಲ್ಲಿ ಮಂಡಿಸಿದ್ದಾರೆ. ನಾನು ನನ್ನ ಅನಿಸಿಕೆ ಪ್ರಕಾರ ಪ್ರಪ್ರಥವಾಗಿ ಈ ಬೆಳೆ ವಿಮೆ ಬಗ್ಗೆ ಮಾತನಾಡಬಯಸುತ್ತೇನೆ.

7) ಪ್ರಕಟಣೆ

ಅಧ್ಯಕ್ಷರು : ವಿಧಾನಪರಿಷತ್ತಿನ ಮಾನ್ಯ ಸಭಾಪತಿವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118 ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ 16ನೇ ಜನವರಿ 2004ರಂದು ಯಾವುದೇ ತಿದ್ದುಪಡಿ ಇಲ್ಲದೆ ಅಂಗೀಕರಿಸಿರುತ್ತದೆಂದು ತಿಳಿಸಿರುತ್ತಾರೆ:

1. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2004
2. ಕರ್ನಾಟಕ ತೆರಿಗೆ ಕಾನೂನು (ತಿದ್ದುಪಡಿ) ವಿಧೇಯಕ, 2004

ಮಾನ್ಯ ಸಂಗಣ್ಣನವರೇ ಮುಂದುವರೆಸಿ, ಬೇಗ ಮುಗಿಸಿ.

8) ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಂದುವರಿದ ಚರ್ಚೆ

† **ಶ್ರೀ ಕರಡಿ ಸಂಗಣ್ಣ ಅಮರಪ್ಪ** : ಇವತ್ತು ಬೆಳೆ ವಿಮೆ ನಿಯಮಗಳಲ್ಲಿ ಬದಲಾವಣೆ ಆಗಬೇಕೆನ್ನುವುದು ನನ್ನ ವಾದ. ಇವತ್ತು ಭಾರತ ದೇಶ ಕೃಷಿ ಪ್ರಧಾನವಾದ ದೇಶವೆಂದು ಒಂದು ಕಡೆ ನಾವು ಕರೆಯುತ್ತಿದ್ದೇವೆ. ಮತ್ತು ರೈತ ಈ ರಾಷ್ಟ್ರದ ಬೆನ್ನೆಲುಬು ಎಂದು ಕೂಡ ಒಂದು ಹೆಗ್ಗಳಿಕೆಯ ಮಾತನ್ನು ನಾವು ಇವತ್ತು ಹೇಳುತ್ತಿದ್ದೇವೆ. ಆದರೆ ರೈತನಿಗೆ ಸಿಗಬೇಕಾದಂಥ ಮೌಲ್ಯಗಳು ಇವತ್ತು ಸಿಗುತ್ತಿಲ್ಲ. ಇವತ್ತು ವಿಮೆ ಬಗ್ಗೆ ನಾನು ಮಾತನಾಡುವುದಾದರೆ ಎಂತಹ ಒಂದು ವಿಪರ್ಯಾಸವನ್ನು ಇದರಲ್ಲಿ ನೋಡುತ್ತೇವೆ ಎಂದರೆ ಈಗ ಈ ಬೆಳೆವಿಮೆಯನ್ನು ದೊಡ್ಡ ದೊಡ್ಡ ಶ್ರೀಮಂತರುಗಳ ಮನೆಯಲ್ಲಿ ದೊಡ್ಡ ಅಲ್ಸೇಶಿಯನ್ ನಾಯಿಗಳನ್ನೂ ಸಾಕುತ್ತಾರೆ ಮತ್ತು ಸ್ಥಿರ